26 January 2026 Monday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನದಲ್ಲಿ ಕಲಿಕೆ ನಿರಂತರ,
ಏಕೆಂದರೆ ಬದುಕು ಬೋಧಿಸುವುದನ್ನು
ಯಾವುತ್ತೂ ನಿಲ್ಲಿಸುವುದಿಲ್ಲ!
-ಸ್ನೇಹಾ ಆನಂದ್

info.varthaman@gmail.com

**ಶುಭಾಶಯಗಳು**

77 ನೇ ಗಣರಾಜ್ಯೋತ್ಸವ ಶುಭಾಶಯಗಳು

**ಬಿಡುವು**

ಗಣರಾಜ್ಯೋತ್ಸವ ನಿಮಿತ್ತ ನಮ್ಮ ಕಚೇರಿಗೆ ಬಿಡುವು. ಮಂಗಳವಾರ 'ವರ್ತಮಾನ' ಸಂಚಿಕೆ ಪ್ರಕಟವಾಗುವುದಿಲ್ಲ.
▸▸ ವ್ಯವಸ್ಥಾಪಕರು

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 83 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ವಿದೇಶದಲ್ಲಿ ದೇಶದ ವಿರುದ್ಧ ಮಾತನಾಡಲ್ಲ

ಬೆಂಗಳೂರು: ದೇಶದ ವಿರುದ್ಧ ವಿದೇಶದಲ್ಲಿ ನಿಂತು ನಾನು ಮಾತನಾಡುವುದಿಲ್ಲ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.



ದಾವೋಸ್ ನಿಂದ ಆಗಮಿಸಿದ ನಂತರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ದಾವೋಸ್ ಪ್ರವಾಸದಲ್ಲಿ ದೇಶದ ಆರ್ಥಿಕ ಸ್ಥಿತಿ ಚೆನ್ನಾಗಿದೆ ಎಂದೇ ಹೇಳಿದ್ದೇನೆ. ಬೇರೆ ದೇಶಕ್ಕೆ ಹೋಗಿ ನಮ್ಮ ದೇಶದ ವಿರುದ್ಧ ಮಾತನಾಡೋಕೆ ಆಗುತ್ತದೆಯೇ ಎಂದು ಡಿಸಿಎಂ ಪ್ರಶ್ನಿಸಿದ್ದಾರೆ.

ರಾಹುಲ್ ಗಾಂಧಿ ಭಾರತದ ಆರ್ಥಿಕತೆ ಸರಿ ಇಲ್ಲ ಎಂದು ಹೇಳುವಾಗ ನೀವು ಭಾರತವನ್ನು ಹೊಗಳಿದ್ದೀರಿ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ಯಾವ ಸನ್ನಿವೆ?ಶದಲ್ಲಿ, ಯಾವ ಅರ್ಥದಲ್ಲಿ ಈ ಹೇಳಿಕೆ ನೀಡಿದ್ದಾರೆಂದು ಗೊತ್ತಿಲ್ಲ. ಅವರು ದೇಶದ ವಿರುದ್ಧ ಹೇಳಿಕೆ ನೀಡಿಲ್ಲ. ಆಂತರಿಕ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ರಾಜಕೀಯಕ್ಕೆ ನಾನು ಭಾರತವನ್ನು ಬೈಯಲು ಸಾಧ್ಯವಿಲ್ಲ ಎಂದರು. ಪುಟ 2ಕ್ಕೆ

## ಪುಟ್ಟಮಾದಯ್ಯಗೆ ರಾಷ್ಟ್ರಪತಿ ಪದಕ

ಮೈಸೂರು: ಮೈಸೂರ ಜಿಲ್ಲೆಯವರಾದ ಈಗ ಕಲಬುರಗಿ ಪೊಲೀಸ್ ತರಬೇತಿ ಕೇಂದ್ರದ ಪ್ರಾಂಶುಪಾಲರಾಗಿರುವ ಡಿ.ಐ.ಜಿ. ಪುಟ್ಟಮಾದಯ್ಯ ಸೇರಿದಂತೆ ರಾಜ್ಯದ ಐವರಿಗೆ ಕೇಂದ್ರ ಸರ್ಕಾರ ಪೊಲೀಸ್ ಉತ್ಕೃಷ್ಟ ಸೇವಾ ಪದಕ ಘೋಷಿಸಿದೆ. ಅಸಾಧಾರಣ ಧೈರ್ಯ, ವಿಶಿಷ್ಟ ಹಾಗೂ ನಿಷ್ಠಾವಂತ ಸೇವೆ, ಮಹತ್ವದ ಕೊಡುಗೆಯನ್ನು ಗುರುತಿಸಿ ರಾಷ್ಟ್ರಪತಿ ಪದಕ ಪುರಸ್ಕಾರ ಲಭಿಸಿದೆ.



# ರಾಜ್ಯದ 8 ಮಂದಿಗೆ ಪದ್ಮಶ್ರೀ


## ದೇಶದ 45 ಸಾಧಕರಿಗೆ ಪದ್ಮ ಪ್ರಶಸ್ತಿ ಘೋಷಣೆ

ಬೆಂಗಳೂರು: ಕೇಂದ್ರ ಸರ್ಕಾರ ನೀಡಲಿರುವ 2026ನೇ ಸಾಲಿನ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ರಾಜ್ಯದ 8 ಸಾಧಕರಿಗೆ ಪದ್ಮ ಪ್ರಶಸ್ತಿ ಗೌರವ ದೊರೆತಿದೆ. ದೇಶದ 45 ಜನರಿಗೆ ಈ ಸಾಲಿನ ಪದ್ಮ ಪ್ರಶಸ್ತಿ ನೀಡಲಾಗಿದೆ.

ಶಿಕ್ಷಣ ತಜ್ಞ ಪ್ರಭಾಕರ ಕೋರೆ, ಶತವಧಾನಿ ಗಣೇಶ್ ಉದ್ಯಮಿ ಜಗನಾಥ್, ಶಶಿಶೇಖರ್ ರಾಜ್ಯದ ಪುಸ್ತಕ ಪ್ರೇಮಿ ಅಂಕೇಗೌಡ, ವೈದ್ಯ ಸುರೇಶ್ ಹನಗವಾಡಿ ಹಾಗೂ ಸಮಾಜ ಸೇವಕಿ ಸುಶೀಲಮ್ಮ ಈ ಸಾಲಿನ ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಕೇಂದ್ರ ಗೃಹ ಸಚಿವಾಲಯ ಗಣರಾಜ್ಯೋತ್ಸವದ ಮುನ್ನಾದಿನವಾದ ಭಾನುವಾರ ಈ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರ ಹೆಸರನ್ನು ಘೋಷಿಸಿದೆ. ಮಂಡ್ಯದವರಾದ ಪುಸ್ತಕ ಪ್ರೇಮಿ ಅಂಕೇಗೌಡ, ದಾವಣಗೆರೆಯ ವೈದ್ಯ ಡಾ.ಸುರೇಶ್ ಹನಗವಾಡಿ ಹಾಗೂ ಪುಟ 2ಕ್ಕೆ



ಅಂಕೇಗೌಡ



ಸುರೇಶ್ ಹನಗವಾಡಿ



ಡಾ.ಸುಶೀಲಮ್ಮ



ಪ್ರಭಾಕರ ಕೋರೆ



ಶತವಧಾನಿ ಗಣೇಶ್



ಜಗನಾಥ್

## ಪುಸ್ತಕ ಪ್ರೇಮಿಗೆ ಪದ್ಮ ಗೌರವ

ಮಂಡ್ಯ: ಪುಸ್ತಕಗಳೇ ತಮ್ಮ ಪ್ರಪಂಚ ಎಂದುಕೊಂಡು ಲಕ್ಷಾಂತರ ಪುಸ್ತಕ ಸಂಗ್ರಹಿಸಿರುವ ಮಂಡ್ಯದ ಅಂಕೇಗೌಡ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ಅಂಕೇಗೌಡ ಅವರಿಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಪ್ರಶಸ್ತಿಯನ್ನು ನೀಡಲಾಗಿದೆ.

ಮಂಡ್ಯದ ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯಲ್ಲಿರುವ 'ಪುಸ್ತಕದ ಮನೆ'ಯನ್ನು ಸಾರ್ವಜನಿಕರಿಗಾಗಿ ತೆರೆದಿಟ್ಟಿರುವ ಎಂ.ಅಂಕೇಗೌಡರು, ಸುಮಾರು ನಾಲ್ಕು ಲಕ್ಷ ಪುಸ್ತಕಗಳು, ನಾಣ್ಯ, ಅಂಚೆ ಚೀಟಿ ಮತ್ತು ಲಗ್ನಪತ್ರಿಕೆಗಳ ಅಪರೂಪದ ಸಂಗ್ರಹವನ್ನು ಹೊಂದಿ ದ್ದಾರೆ. ತಮ್ಮ ಸಂಬಳದ ಬಹುಪಾಲು ಪುಸ್ತಕಗಳಿಗೇ ಮೀಸಲಿಟ್ಟಿದ್ದಾರೆ. ಪುಸ್ತಕ ಸಂಗ್ರಹಕ್ಕಾಗಿ ನಿವೇಶನವನ್ನೂ ಮಾರಿದ ಅಂಕೇಗೌಡರು, ಗ್ರಾಮೀಣ ಪ್ರದೇಶದ ಪುಸ್ತಕ ಪ್ರಿಯರಿಗೆ ಸ್ಫೂರ್ತಿಯಾಗಿದ್ದಾರೆ. ಉದ್ಯಮಿ ಹರಿಕೋಡೆ ಅವರು ನಿರ್ಮಿಸಿಕೊಟ್ಟಿರುವ ಈ ಪುಸ್ತಕದ ಮನೆ, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ಸ್ಥಾನ ಪಡೆದಿದೆ. ಪಾಂಡವಪುರ ತಾಲ್ಲೂಕಿನ ಚಿನಕುರಳಿಯಲ್ಲಿ ಎಂ.ಅಂಕೇಗೌಡರು ಜನಿಸಿದರು. ಸಂಜೆ ಕಾಲೇಜಿನಲ್ಲಿ ಓದಿ ಬಿ.ಎ. ಪದವಿ ಪಡೆದರು. ಬಳಿಕ, ಅಂಚೆ ಮತ್ತು ತೆರಪಿನ ಮೂಲಕ ಕನ್ನಡದಲ್ಲಿ ಎಂ.ಎ. ಪದವಿಯನ್ನೂ ಗಳಿಸಿದ್ದಾರೆ.


## ಅನಾಥ ಮಹಿಳೆಯರು, ಮಕ್ಕಳ ಬಂಧು, ರಕ್ಷಕಿ ಡಾ.ಸುಶೀಲಮ್ಮ

ಬೆಂಗಳೂರು: ಸುಮಂಗಲಿ ಸೇವಾ ಆಶ್ರಮದ ಸಂಸ್ಥಾಪಕಿ, ಸಮಾಜ ಸೇವಕಿ ಡಾ.ಎಸ್.ಜಿ. ಸುಶೀಲಮ್ಮ ಅವರಿಗೆ ಈ ಬಾರಿಯ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ.

ಮಹಿಳಾ ಸಬಲೀಕರಣ, ಶಿಶು ಸಂರಕ್ಷಣೆ ಮತ್ತು ಬಡವರ ಕಲ್ಯಾಣ, ಮಹಿಳಾ ಒಕ್ಕೂಟಗಳ ರಚನೆ, ಸ್ವಯಂ ಉದ್ಯೋಗ ತರಬೇತಿಯನ್ನು ತಮ್ಮ ಸಂಸ್ಥೆಯಿಂದ ನೀಡಿ ಜನರ ಅಭಿವೃದ್ಧಿಗೆ ಶ್ರಮಿಸಿದ್ದಕ್ಕೆ ಸುಶೀಲಮ್ಮ ಅವರಿಗೆ ಪ್ರಶಸ್ತಿ ಸಿಕ್ಕಿದೆ. ಬೆಂಗಳೂರಿನಲ್ಲಿ 1939ರ ಮೇ 24ರಂದು ಜನಿಸಿದ ಸುಶೀಲಮ್ಮ 1959ರಿಂದ 1967ರ ವರೆಗೆ ರೆಂಕೋ ಕಾರ್ಖಾನೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದರು. 1963ರಲ್ಲಿ ವೃತ್ತಿ ಜೀವನಕ್ಕೆ ರಾಜೀನಾಮೆ ನೀಡಿ ಸಂಪೂರ್ಣವಾಗಿ ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದಾರೆ. ಬಡವರು, ಅನಾಥರು, ನಿರಾಶ್ರಿತ ಮಕ್ಕಳು ಮತ್ತು ಮಹಿಳೆಯರ ಸೇವೆ ಮಾಡಲು 1975ರಲ್ಲಿ ಬೆಂಗಳೂರಿನ ಹೆಬ್ಬಾಳದ ನೆರೆಯಲ್ಲಿರುವ ಚೋಳನಾಯಕನ ಹಳ್ಳಿಯಲ್ಲಿ ಸುಮಂಗಲಿ ಸೇವಾಶ್ರಮ ಸಂಸ್ಥೆಯನ್ನು ಸುಶೀಲಮ್ಮ ಸ್ಥಾಪಿಸಿದರು. 1976ರಲ್ಲಿ ಬಸವಾನಂದ ನರ್ಸರಿ, 1979ರಲ್ಲಿ ಸುಮಂಗಲಿ ಯುವತಿ ಮಂಡಳಿ ಸ್ಥಾಪಿಸಿದರು. 1985ರಲ್ಲಿ ಚೋಳನಾಯಕನಹಳ್ಳಿಯಲ್ಲಿ ಬಸವಾನಂದ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಪುಟ 2ಕ್ಕೆ

# 125 ಪೊಲೀಸರಿಗೆ ಶೌರ್ಯ ಪದಕ

**101 ಮಂದಿಗೆ ರಾಷ್ಟ್ರಪತಿ ಪದಕ | 756 ವಿಶಿಷ್ಟ ಸೇವಾ ಪದಕ ಘೋಷಣೆ**



ನವದೆಹಲಿ: ಗಣರಾಜ್ಯೋತ್ಸವದ ಅಂಗವಾಗಿ ಪೊಲೀಸ್ ಸಿಬ್ಬಂದಿಗೆ ನೀಡುವ ಶೌರ್ಯ ಮತ್ತು ಸೇವಾ ಪದಕಗಳಿಗೆ 982 ಪೊಲೀಸ್, ಅಗ್ನಿಶಾಮಕ, ಗೃಹರಕ್ಷಕ, ನಾಗರಿಕ ರಕ್ಷಣಾ ಮತ್ತು ತಿದ್ದುಪಡಿ ಸೇವೆಗಳ ಸಿಬ್ಬಂದಿಯನ್ನು ಆಯ್ಕೆ ಮಾಡಲಾಗಿದೆ. 982 ಪದಕಗಳಲ್ಲಿ 125 ಶೌರ್ಯ ಪದಕಗಳು ಸೇರಿವೆ ಎಂದು ಕೇಂದ್ರ ಗೃಹ ಸಚಿವಾಲಯ ಘೋಷಿಸಿದೆ.

ಈ ಬಾರಿ ಸೌರ್ಯ ಮತ್ತು ಸೇವಾ ಪದಕಗಳಿಗೆ ಆಯ್ಕೆಯಾದವರಲ್ಲಿ ಹೆಚ್ಚಿನವರು ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಸಿಬ್ಬಂದಿ ಇದ್ದಾರೆ. ಜಮ್ಮು ಕಾಶ್ಮೀರದ ನಕ್ಸಲ್ ಪೀಡಿತ ಹಿಂಸಾಚಾರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುವ 35, ಶಸ್ತ್ರಾಸ್ತ್ರ ಕಾರ್ಯಾಚರಣೆಯಲ್ಲಿ ನಿಯೋಜಿಸಲಾದ 45 ಹಾಗೂ ಈಶಾನ್ಯ ಪ್ರದೇಶದಲ್ಲಿ ನಿಯೋಜಿಸಲಾದ ಐವರು ಸಿಬ್ಬಂದಿ ಶೌರ್ಯ ಪದಕಕ್ಕೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ ನಾಲ್ವರು ಅಗ್ನಿಶಾಮಕ ಸಿಬ್ಬಂದಿ ಕೂಡ ಶೌರ್ಯ ಪದಕಕ್ಕೆ ಭಾಜನರಾಗಿದ್ದಾರೆ. ಈ ಬಾರಿ ಶೌರ್ಯ ಮತ್ತು ಸೇವಾ ಪದಕಗಳಿಗೆ ಆಯ್ಕೆಯಾದವರಲ್ಲಿ ಜಮ್ಮು ಮತ್ತು ಕಾಶ್ಮೀರದ 33 ಪೊಲೀಸರು ಶೌರ್ಯ ಪದಕಗಳನ್ನ ಪಡೆದುಕೊಂಡಿದ್ದಾರೆ. 2ನೇ ಸ್ಥಾನದಲ್ಲಿ ಮಹಾರಾಷ್ಟ್ರ ಪೊಲೀಸರು (31) ಇದ್ದಾರೆ. ಪುಟ 2ಕ್ಕೆ

# ಬಿಜೆಪಿ ಅಧಿಕಾರಿ ಬಿಟ್ಟು ಕೊಡುತ್ತಾ?

## ಜೆಡಿಎಸ್ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ

ಮೈಸೂರು: ರಾಜ್ಯದಲ್ಲಿ ಇನ್ನೆಂದಿಗೂ ಜೆಡಿಎಸ್ ಅಧಿಕಾರಕ್ಕೆ ಬರುವುದು ಸಾಧ್ಯವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ನಗರದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡರೂ ಅವರು ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲ. 2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು.

ಹಾಗೊಂದು ವೇಳೆ ಬಿಜೆಪಿಯವರು ಜಾಸ್ತಿ ಸ್ಥಾನಗಳನ್ನು ಗೆದ್ದರೆ ಸುಮ್ಮನೆ ಬಿಟ್ಟು ಬಿಡುತ್ತಾರೆಯೇ? ನೀವೇ ಸಿಎಂ ಆಗಿ ಎಂದು ಜೆಡಿಎಸ್‌ನವರಿಗೆ ಬಿಟ್ಟುಕೊಡುತ್ತಾರೆಯೇ? ಎಲ್ಲಕ್ಕಿಂತಲೂ ಮುಖ್ಯವಾಗಿ, ಯಾವುದೇ ಕಾರಣಕ್ಕೂ ಅವರು ಗೆಲ್ಲುವುದೇ ಇಲ್ಲ ಎಂದು ಅಭಿಪ್ರಾಯಪಟ್ಟರು.



ನಮಗೂ ಸಮಯ ಬರುತ್ತದೆ ಎಂಬ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಸುಮ್ಮನೆ ರಾಜಕೀಯ ಭಾಷಣ ಮಾಡಿದಾಕ್ಷಣಕ್ಕೆ ಆಗುತ್ತದೆಯೇ? ನಾನು ಅಧ್ಯಕ್ಷನಾಗಿದ್ದಾಗ 2004ರಲ್ಲಿ 59 ಸ್ಥಾನಗಳನ್ನು ಜೆಡಿಎಸ್ ಗೆದ್ದಿತ್ತು. ಈಗ ಶಾಸಕರು ಎಷ್ಟಿದ್ದಾರೆ ಎಂದು ಪ್ರಶ್ನಿಸಿದರು. ಜೆಡಿಎಸ್ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಅವರು ಯಾವ ಅರ್ಥದಲ್ಲಿ ಹೇಳುತ್ತಾರೆಯೋ ಗೊತ್ತಿಲ್ಲ. ಪುಟ 2ಕ್ಕೆ



# ದ್ವೇಷ ಭಾಷಣ: ನೋಟಿಸ್ ತಪ್ಪು

### ಕಾಯ್ದೆ ಆಗುವುದಕ್ಕೂ ಮುನ್ನ ಪೊಲೀಸರ ಕ್ರಮಕ್ಕೆ ವಿರೋಧ

ಬೆಂಗಳೂರು: ಬಿಜೆಪಿ ಮುಖಂಡ ವಿಕಾಸ್ ಪುತ್ತೂರು ಅವರಿಗೆ ದ್ವೇಷ ಭಾಷಣ ಮಸೂದೆ ಅಡಿ ಪೊಲೀಸರು ನೋಟಿಸ್ ನೀಡಿರುವುದು ತಪ್ಪು ಎಂದು ಗೃಹ ಸಚಿವ ಪರಮೇಶ್ವರ್ ಹೇಳಿದರು.

ದ್ವೇಷ ಭಾಷಣ ಮಸೂದೆಯ ಅಡಿಯಲ್ಲಿ ಪೊಲೀಸರು ನೋಟಿಸ್ ನೀಡಿದ ವಿಚಾರಕ್ಕೆ ಸಂಬಂಧಿಸಿದಂತೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಮಸೂದೆಗೆ ಇನ್ನೂ ರಾಜ್ಯಪಾಲರ ಸಹಿ ಬಿದ್ದಿಲ್ಲ. ಭಾರತೀಯ ನ್ಯಾಯ ಸಂಹಿತೆ ಅಡಿ ವಿವಿಧ ಸೆಕ್ಷನ್‌ಗಳ ಅಡಿ ನೋಟಿಸ್ ನೀಡಬಹುದು. ಇನ್ನೂ ಇದು ಕಾನೂ ಆಗದ ಕಾರಣ ಈ ಮಸೂದೆ ಅಡಿ ನೋಟಿಸ್ ನೀಡಿದ್ದು ತಪ್ಪು. ಪೊಲೀಸರು ಯಾಕೆ ಈ ರೀತಿ ಮಾಡಿದ್ದಾರೆ ಎನ್ನುವುದನ್ನು ನೋಡಬೇಕು ಎಂದು ಪ್ರತಿಕ್ರಿಯಿಸಿದರು.

ಶಿಡ್ಲಘಟ್ಟ ಪುರಸಭೆ ಆಯುಕ್ತರಿಗೆ ಧಮ್ಕಿ ಹಾಕಿದ್ದ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ಬಂಧನಕ್ಕೆ ಮೊದಲ ದಿನವೇ ಆದೇಶ ನೀಡಿದ್ದೇನೆ ಬಂಧಿಸುವಷ್ಟರಲ್ಲಿ ತಪ್ಪಿಸಿಕೊಂಡು ಹೋಗಿದ್ದಾರೆ. ಎಷ್ಟು ದಿನ ಅಂತ ತಪ್ಪಿಸಿಕೊಂಡು ಹೋಗ್ತಾರೆ. ಪೊಲೀಸರು ಖಂಡಿತವಾಗಿಯೂ ಹಿಡಿದೇ ಹಿಡಿಯುತ್ತಾರೆ. ರಾಜೀವ್‌ಗೌಡನನ್ನ ತಕ್ಷಣ ಬಂಧಿಸುತ್ತೇವೆ. ಯಾವುದೇ ಮುಲಾಜಿಲ್ಲ, ಯಾರ ಒತ್ತಡಕ್ಕೂ ಮಣಿಯುವುದಿಲ್ಲ ಎಂದು ಗೃಹಸಚಿವ ಜಿ.ಪರಮೇಶ್ವರ್ ತಿಳಿಸಿದರು.

ಬೆಳಗಾವಿಯಲ್ಲಿ 400 ಕೋಟಿ ರೂ. ರಾಬರಿ ಪ್ರಕರಣದ ಕುರಿತು ಮಾತನಾಡಿದ ಅವರು, ಮಹಾರಾಷ್ಟ್ರ ಪೊಲೀದರು ನಮ್ಮ ಪೊಲೀಸರಿಗೆ ಪತ್ರ ಬರೆದಿದ್ದಾರೆ. ತನಿಖೆಯಲ್ಲಿ ನಮ್ಮ ಸರ್ಕಾರದ ಸಹಾಯ ಬೇಕಾಗುತ್ತದೆ ಎಂದು ಮಾಹಿತಿ ಕೇಳಿದ್ದಾರೆ. ಅದರ ಬಗ್ಗೆ ಹೆಚ್ಚು ಮಾಹಿತಿ ಕೇಳಿದ್ದೇನೆ. ತನಿಖೆ ಇನ್ನೂ ಪ್ರಾರಂಭಿಕ ಹಂತದಲ್ಲಿದೆ. ಹೆಚ್ಚಿನ ಮಾಹಿತಿ ಸಿಕ್ಕಿದ ಮೇಲೆ ನಮ್ಮ ರಾಜ್ಯದ ಪೊಲೀಸರು ಏನು ಕ್ರಮ ತಗೋಬೇಕು ಅನ್ನೋದನ್ನ ನೋಡ್ತಾರೆ. ಪರಿಶೀಲಿಸಿ ಮಾಹಿತಿ ಕೊಡುವಂತೆ ಹೇಳಿದ್ದೇನೆ ಎಂದು ವಿವರಿಸಿದರು. ಗಣರಾಜ್ಯೋತ್ಸವದಲ್ಲಿ ರಾಜ್ಯಪಾಲರು ಭಾಷಣ ಮಾಡ್ತಾರಾ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿ, ನಮ್ಮ ಭಾಷಣದ ಪ್ರತಿಯನ್ನು ನಾನು ನೋಡಿಲ್ಲ. ಗವರ್ನರ್ ಯಾವ ರೀತಿ ತೀರ್ಮಾನ ಮಾಡ್ತಾರೆ ಗೊತ್ತಾಗುತ್ತದೆ ಎಂದರು.

### ಬಿಜೆಪಿ ನಾಯಕರ ಆಕ್ರೋಶ

ಬೆಂಗಳೂರು: ಮಸೂದೆ ಕಾಯ್ದೆ ಆಗದೇ ಇದ್ದರೂ ಪೊಲೀಸರು ದ್ವೇಷ ಭಾಷಣ ಮಸೂದೆ–2025ರ ಅಡಿ ಬಿಜೆಪಿ ಮುಖಂಡ ವಿಕಾಸ್ ಪುತ್ತೂರು ಅವರಿಗೆ ನೋಟಿಸ್ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ. ರಾಜ್ಯದಲ್ಲಿ ಇರುವುದು ಪ್ರಜಾಪ್ರಭುತ್ವವೇ? ಪೊಲೀಸ್ ರಾಜ್ಯವೇ ಎಂದು ಪ್ರಶ್ನೆ ಮಾಡಿದ್ದಾರೆ.

ರಾಜ್ಯಪಾಲರ ಅಂಕಿತ ಬೀಳದೆ ರಾಜ್ಯ ಸರ್ಕಾರದ ಗೆಜೆಟ್ ನಲ್ಲಿ ಅಧಿಕೃತವಾಗಿ ಪ್ರಕಟಗೊಳ್ಳದೆ ಒಂದು ಮಸೂದೆ ಕಾನೂನು ಆಗುವುದಿಲ್ಲ ಎನ್ನುವ ಕನಿಷ್ಠ ಜ್ಞಾನ ಸ್ವಯಂಘೋಷಿತ ಸಂವಿಧಾನ ತಜ್ಞರಾದ ಸಿಎಂ ಸಿದ್ದರಾಮಯ್ಯ ಅವರಿಗೆ ಇಲ್ಲವೇ? ಎಂದು ಪ್ರಶ್ನಿಸಿದರು.

ಇನ್ನೂ ಅಧಿಕೃತವಾಗಿ ಜಾರಿಯೇ ಆಗದ ಒಂದು ಮಸೂದೆಯನ್ನು ಉಲ್ಲೇಖಿಸಿ ಪೊಲೀಸರು ವಿಪಕ್ಷದ ಕಾರ್ಯಕರ್ತರಿಗೆ ಬೆದರಿಕೆ ಹಾಕುತ್ತಾರೆ ಎಂದರೆ ರಾಜ್ಯದಲ್ಲಿ ಪೊಲೀಸ್ ಕಚೇರಿಗಳು ಹೇಗೆ ಕಾಂಗ್ರೆಸ್ ಪಕ್ಷದ ಕಚೇರಿಗಳಾಗಿ ಮಾರ್ಪಟ್ಟಿವೆ ಎನ್ನುವುದಕ್ಕೆ ಸ್ಪಷ್ಟ ನಿದರ್ಶನ ಎಂದು ಕಿಡಿಕಾರಿದರು.

# 400 ಕೋಟಿ ಮಹಾ ದರೋಡೆ

### *2,000 ಬೆಲೆಯ ನೋಟುಗಳಿದ್ದ ಕಂಟೇನರ್‌ಗಳು ನಾಪತ್ತೆ

ಬೆಳಗಾವಿ: ಗೋವಾದಿಂದ ಮಹಾರಾಷ್ಟ್ರಕ್ಕೆ ಸಾಗಿಸುತ್ತಿದ್ದ 2,000 ರೂ. ಮುಖಬೆಲೆಯ 400 ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಎರಡು ಕಂಟೇನರ್‌ಗಳನ್ನು ಬೆಳಗಾವಿಯ ಚೋರ್ಲಾ ಘಾಟ್‌ನಲ್ಲಿ ಹೈಜಾಕ್ ಮಾಡಿ ದರೋಡೆ ಮಾಡಲಾಗಿದೆ.

ಈ ದರೋಡೆ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಕರ್ನಾಟಕ, ಗೋವಾ ಹಾಗೂ ಮಹಾರಾಷ್ಟ್ರ 3 ರಾಜ್ಯಗಳ ಪೊಲೀಸರು ವಿಶೇಷ ತನಿಖಾ ತಂಡದ ಮೂಲಕ ತನಿಖೆ ನಡೆಸುತ್ತಿದ್ದಾರೆ. ಗೋವಾದಿಂದ ಮಹಾರಾಷ್ಟ್ರಕ್ಕೆ ಸಾಗಿಸಲಾಗುತ್ತಿದ್ದ ಸುಮಾರು 400 ಕೋಟಿ ರೂ. ನಗದು ತುಂಬಿದ್ದ ಎರಡು ಕಂಟೇನರ್‌ಗಳು, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಚೋರ್ಲಾ ಘಾಟ್ ಪ್ರದೇಶದಲ್ಲಿ ಹೈಜಾಕ್ ಆಗಿರುವುದು ತಡವಾಗಿ ಬೆಳಕಿಗೆ ಬಂದಿದೆ. 2025ರ ಅಕ್ಟೋಬರ್ 16ರಂದು ಈ ದರೋಡೆ ನಡೆದಿದೆ. ಘಟನೆ ನಡೆದು ಹಲವಾರು ತಿಂಗಳ ನಂತರ ಪ್ರಕರಣ ಬೆಳಕಿಗೆ ಬಂದಿರುವುದು ಅನೇಕ ಅನುಮಾನಗಳಿಗೆ ಕಾರಣವಾಗಿದೆ.

### ಹಣದ ಮಾಲೀಕರು ಯಾರು?

ಮಹಾರಾಷ್ಟ್ರದ ಖ್ಯಾತ ರಿಯಲ್ ಎಸ್ಟೇಟ್ ಉದ್ಯಮಿ ಕಿಶೋರ್ ಶೇಟ್ ಅವರಿಗೆ ಹಣ ಸೇರಿದ್ದು ಎಂಬುದು ಮಹಾರಾಷ್ಟ್ರ ಪೊಲೀಸರ ತನಿಖೆಯಿಂದ ಗೊತ್ತಾಗಿದೆ. ಗೋವಾದಿಂದ ಮಹಾರಾಷ್ಟ್ರಕ್ಕೆ ಸಾಗುತ್ತಿದ್ದ 2 ಕಂಟೇನರ್‌ಗಳು, ಖಾನಾಪುರ ತಾಲೂಕಿನ ಅಪಾಯಕಾರಿ ಹಾಗೂ ಅರಣ್ಯ ಪ್ರದೇಶವಾದ ಚೋರ್ಲಾ ಘಾಟ್ ಮಾರ್ಗದಲ್ಲಿ ಏಕಾಏಕಿ ನಾಪತ್ತೆಯಾಗಿವೆ. ಈ ಕಂಟೇನರ್‌ಗಳಲ್ಲಿ 400 ಕೋಟಿ ರೂ.ಗಿಂತಲೂ ಅಧಿಕ ನಗದು ಹಣ ಸಾಗಿಸಲಾಗುತ್ತಿತ್ತು ಎಂಬ ಮಾಹಿತಿ ಇದೀಗ ಅಧಿಕೃತ ದಾಖಲೆಗಳಲ್ಲಿ ಉಲ್ಲೇಖವಾಗಿದೆ. ಆದರೆ ಹಣ ಕಳೆದುಕೊಂಡ ಕಿಶೋರ್ ಶೇಟ್ ದೂರು ದಾಖಲು ಮಾಡಿರಲಿಲ್ಲ. ಈಗ ಕಿಶೋರ್ ಶೇಟ್ ಸಹ ನಾಪತ್ತೆ ಆಗಿದ್ದಾನೆ ಎನ್ನಲಾಗಿದೆ.

### ಅಪಹರಣದಿಂದ ಬಹಿರಂಗ

ಕಂಟೇನರ್ ಹೈಜಾಕ್ ಪ್ರಕರಣ ನಡೆದ ಕೆಲ ದಿನಗಳ ಬಳಿಕ, ನಾಸಿಕ್ ಮೂಲದ ಸಂದೀಪ್ ಪಾಟೀಲ ಎಂಬಾತನನ್ನ ಮಹಾರಾಷ್ಟ್ರದ ರಿಯಲ್ ಎಸ್ಟೇಟ್ ಕಿಶೋರ್ ಶೇಟ್ ಸಹಚರರು ಬಂದೂಕು ತೋರಿಸಿ ಅಪಹರಿಸಿದ್ದರು. ನಂತರ ಸಂದೀಪ್‌ನನ್ನ ಸುಮಾರು ಒಂದೂವರೆ ತಿಂಗಳ ಕಾಲ ಅಕ್ರಮ ಬಂಧನದಲ್ಲಿಟ್ಟು, ಕಂಟೇನರ್ ಹೈಜಾಕ್‌ಗೆ ನೀನೇ ಕಾರಣ ಅಂತ ಚಿತ್ರಹಿಂಸೆ ಕೊಟ್ಟಿದ್ದರು. ಅಷ್ಟೇ ಅಲ್ಲ 400 ಕೋಟಿ ಹಣ ಕೊಡದಿದ್ದರೆ ಜೀವ ಉಳಿಸಲ್ಲ ಎಂದು ಬೆದರಿಕೆ ಹಾಕಿದ್ದರು. ಅಪಹರಣಕಾರರಿಂದ ತಪ್ಪಿಸಿಕೊಂಡ ಸಂದೀಪ್ ಪಾಟೀಲ, ಮಹಾರಾಷ್ಟ್ರದ ನಾಸಿಕ್ ಪೊಲೀಸ್ ಠಾಣೆಗೆ ತೆರಳಿ 2026, ಜ.1ರಂದು ದೂರು ದಾಖಲಿಸಿದ್ದಾನೆ. ಈ ದೂರಿನಲ್ಲಿ 400 ಕೋಟಿ ರೂ. ನಗದು ಸಾಗಿಸುತ್ತಿದ್ದ ವಾಹನ ಅಪಹರಣದ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ. ಹೀಗಾಗಿ ಕಂಟೇನರ್ ಹೈಜಾಕ್ ಪ್ರಕರಣ ಸಂಪೂರ್ಣ ಬಹಿರಂಗವಾಗಿದೆ. ತಕ್ಷಣ ಮಹಾರಾಷ್ಟ್ರ ಪೊಲೀಸರು ತಕ್ಷಣ ಕಾರ್ಯಾಚರಣೆ ಆರಂಭಿಸಿ, ನಾಲ್ವರು ಆರೋಪಿಗಳನ್ನ ಬಂಧಿಸಿದ್ದಾರೆ. ಇನ್ನೂ ಇಬ್ಬರು ಪ್ರಮುಖ ಆರೋಪಿಗಳು ಪರಾರಿಯಾಗಿದ್ದಾರೆ.

# ರಾಷ್ಟ್ರೀಯ ಮತದಾರರ ದಿನಾಚರಣೆ

## ಯುವಜನರ ಸಾಂವಿಧಾನಿಕ ಹಕ್ಕು, ಕರ್ತವ್ಯವನ್ನು ಪ್ರೋತ್ಸಾಹಿಸುವ ಸಲುವಾಗಿ ಆಚರಣೆ

ಚಾಮರಾಜನಗರ:– ನಾಗರಿಕರು ಹಾಗೂ ವಿಶೇಷವಾಗಿ 18 ವರ್ಷ ತುಂಬಿದ ಯುವಜನರ ಸಾಂವಿಧಾನಿಕ ಹಕ್ಕು ಮತ್ತು ಮತದಾನದ ಕರ್ತವ್ಯವನ್ನು ಪ್ರೋತ್ಸಾಹಿಸುವ ಸಲುವಾಗಿ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ನಗರದಲ್ಲಿಂದು ಹಲವು ಅರ್ಥಪೂರ್ಣವಾಗಿ ಆಚರಿಸಲಾಯಿತು.



ಭಾರತ ಚುನಾವಣಾ ಆಯೋಗ, ಜಿಲ್ಲಾಡಳಿತ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ಸಹಯೋಗದಲ್ಲಿ ನಗರದ ಜಿಲ್ಲಾ ಪಂಚಾಯತ್ ನೂತನ ಕೆ.ಡಿ.ಪಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ್ ಅವರು ಪ್ರಜಾಪ್ರಭುತ್ವದ ಸುಭದ್ರತೆಗಾಗಿ 1950ರಲ್ಲಿ ಭಾರತ ಚುನಾವಣಾ ಆಯೋಗ ಸ್ಥಾಪನೆಯಾಯಿತು. ಚುನಾವಣಾ ಆಯೋಗ ಸಾಂವಿಧಾನಿಕ ಸಂಸ್ಥೆಯಾಗಿದ್ದು, ದೇಶದಲ್ಲಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಿದ್ದು, ಮತದಾನದ ಮಹತ್ವವನ್ನು ಎಲ್ಲರೂ ಅರಿಯಬೇಕು ಎಂದರು.

ಈ ಹಿಂದೆ 18 ವರ್ಷ ತುಂಬಿದ ಯುವಜನರಿಗೆ ಮತದಾನದ ಮಹತ್ವದ ಅರಿವು, ಅಸಕ್ತಿ ಕಡಿಮೆ ಇತ್ತು. ಇದನ್ನು ಮನಗಂಡ ಭಾರತ ಚುನಾವಣಾ ಆಯೋಗವು ದೇಶದ ನಾಗರಿಕರು ಹಾಗೂ ವಿಶೇಷವಾಗಿ 18 ತುಂಬಿದ ಪ್ರತಿಯೊಬ್ಬರಿಗೂ ಮತದಾನ ಜಾಗೃತಿ ಮೂಡಿಸಿ ಪ್ರೇರೆಪಿಸಲು 2011ರಿಂದ ರಾಷ್ಟ್ರೀಯ ಮತದಾರರ ದಿನ ಆಚರಿಸಲು ಅನುವು ಮಾಡಿಕೊಟ್ಟಿದೆ. ಮತದಾನ ಅಮೂಲ್ಯವಾದದ್ದು. ಉತ್ತಮ ಬೀಜ ಬಿತ್ತಿದರೆ ಉತ್ತಮ ಫಸಲು ಬರುತ್ತದೆ, ಹಾಗೆಯೇ ಉತ್ತಮ ವ್ಯಕ್ತಿಯನ್ನು ಆರಿಸಿದರೆ ಜನಸೇವೆ ಮಾಡುವ ಉತ್ತಮ ಸರ್ಕಾರ ನಮ್ಮದಾಗಲಿದೆ ಎಂದು ಈಶ್ವರ ಅವರು ತಿಳಿಸಿದರು.




ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿ ಶ್ರೀರೂಪ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ ವಿಶ್ವದ ಅತಿ ದೊಡ್ಡ ಸಂವಿಧಾನ ಹೊಂದಿರುವ ದೇಶ ನಮ್ಮದಾ ಗಿದೆ. ಪ್ರಜಾಪ್ರಭುತ್ವದ ಬಲಿಷ್ಠತೆಗಾಗಿ ನಾಗರಿಕರಾದ ನಾವು ಮತದಾನದ ಪ್ರಾಮುಖ್ಯತೆ ತಿಳಿಯಬೇಕು. ಮತದಾನದ ಚಲಾಯಿಸಲು ಯುವಜನರು ಮುಂದಾಗಬೇಕು. ಮತದಾನ ನಮ್ಮ ಹಕ್ಕು ಹಾಗೂ ಕರ್ತವ್ಯವಾಗಿದೆ ಎಂದರು.

ನಗರದ ದೀನಬಂಧು ಸಂಸ್ಥೆಯ ಕಾರ್ಯದರ್ಶಿ ಪ್ರೊ. ಜಿ.ಎಸ್. ಜಯದೇವ ಅವರು ಮಾತನಾಡಿ ಹೊಸದಾಗಿ 18 ವರ್ಷ ತುಂಬಿದ ಯುವ ಹಾಗೂ ನವ ಮತದಾರರನ್ನು ಪ್ರೇರೆಪಿಸುವುದು ರಾಷ್ಟ್ರೀಯ ಮತದಾರರ ದಿನ ಪ್ರಮುಖ ಉದ್ದೇಶವಾಗಿದೆ. ಭಾರತ ವಿಶ್ವದಲ್ಲಿಯೇ ಅತ್ಯಂತ ಬಲಿಷ್ಠ ಪ್ರಜಾಸತ್ತಾತ್ಮಕ ದೇಶವಾಗಿದೆ. ಬುದ್ಧನ ಕಾಲದಿಂದಲೂ ನಮ್ಮಲ್ಲಿ ಚುನಾವಣಾ ವ್ಯವಸ್ಥೆ ಇತ್ತು. ಬೌದ್ಧ ಬಿಕ್ಕುಗಳು ತಮ್ಮ ಮುಖಂಡನನ್ನು ಆರಿಸಲು ಎಲೆಗಳ ಮೇಲೆ ಹೆಸರು ಬರೆದು ಸೂಚಿಸುತ್ತಿದ್ದರು. ಈ ನಿಟ್ಟಿನಲ್ಲಿ ನಮ್ಮ ದೇಶದ ಚುನಾವಣೆಗೆ ಬಹುದೊಡ್ಡ ಇತಿಹಾಸ, ಪರಂಪರೆಯೇ ಇದೆ ಎಂದರು.

ದೇಶದಲ್ಲಿ ಸರ್ಕಾರ ಇಷ್ಟು ವರ್ಷಗಳ ಕಾಲ ಸುಭದ್ರವಾಗಿರಲು ಎಲ್ಲಾ ವರ್ಗಗಳಲ್ಲೂ ಪರಸ್ಪರ ನಂಬಿಕೆ, ಹೊಂದಾಣಿಕೆ ಇರುವುದೇ ಸಾಕ್ಷಿಯಾಗಿದೆ. ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆ ದೊಡ್ಡ ಸಾಮಾಜಿಕ ಪಿಡುಗು ಆಗಿದೆ. ಇದನ್ನು ಬೇರುಸಮೇತ ಕಿತ್ತೊಗೆಂಯಲು ಯುವಕರು ಪ್ರಗತಿಪರ ಚಿಂತನಾಶಕ್ತಿ ಬೆಳೆಸಿಕೊಳ್ಳಬೇಕು. ಸಾಮಾಜಿಕ ಸ್ವಾಸ್ಥ್ಯ ಕಾಪಾಡಬೇಕು. ಯುವಕರು ಯಾವುದೇ ಆಮಿಷಕ್ಕೂ ಒಳಗಾಗದೇ ನೈತಿಕ ಮತದಾನಕ್ಕೆ ಮುಂದಾಗಬೇಕು. ನಾವು ಆರಿಸುವ ಸರ್ಕಾರ ನಮ್ಮ ಆಶೋತ್ತರಗಳನ್ನು ಈಡೇರಿ ಸುವಂತಿರಬೇಕು. ಪ್ರಾಮಾಣಿಕ ವ್ಯಕ್ತಿಯನ್ನು ಆರಿಸಲು ಮೊದಲು ನಾವು ಪ್ರಾಮಾಣಿಕರಾಗಬೇಕು ಎಂದು ಪ್ರೊ. ಜಿ.ಎಸ್. ಜಯದೇವ ಅವರು ಸಲಹೆ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ರಾಷ್ಟ್ರೀಯ ಮತದಾರರ ದಿನದ ಪ್ರತಿಜ್ಞಾವಿಧಿ ಬೋಧಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶ್ರುತಿ, ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಚುನಾವಣಾ ರಾಯಭಾರಿ ದೀಪಾ ಬುದ್ದೆ, ತಹಶೀಲ್ದಾರ್ ಗಿರಿಜಾ, ಜಿಲ್ಲಾಮಟ್ಟದ ಅಧಿಕಾರಿಗಳು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮತದಾರರ ಜಾಗೃತಿಗಾಗಿ ಚುನಾವಣಾ ಆಯೋಗ ಬಿಡುಗಡೆಗೊಳಿಸಿರುವ 'ನನ್ನ ಭಾರತ–ನನ್ನ ಮತ' ಲಾಂಛನವನ್ನು ಬೋರ್ಡ್‌ನಲ್ಲಿ ಚಿತ್ರಬಿಡಿಸುವ ಮೂಲಕ ಗಣ್ಯರು ಅನಾವರಣಗೊಳಿಸಿದರು. ಶತಾಯುಷಿ ಮತದಾರರು, ವಿಶೇಷಚೇತನರು, ಚುನಾವಣೆಗಳಲ್ಲಿ ಉತ್ತಮ ಕೆಲಸ ನಿರ್ವಹಿಸಿದ ಬಿ.ಎಲ್.ಓ ಮತ್ತು ಸೂಪರ್‌ವೈಸರ್‌ಗಳು ಹಾಗೂ ಪ್ರೌಢಶಾಲಾ, ಪದವಿಪೂರ್ವ ಹಾಗೂ ಪದವಿ ವಿಭಾಗದಲ್ಲಿ ಮತದಾನದ ಮಹತ್ವ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಸಹಿ ಸಂಗ್ರಹ ನಡೆಯಿತು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ರಾಷ್ಟ್ರೀಯ ಮತದಾರರ ದಿನದ ಜಾಗೃತಿಗಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಾಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ 'ಸೈಕಲ್ ಜಾಥಾ' ಹಮ್ಮಿಕೊಳ್ಳಲಾಗಿತ್ತು. ಭಾರತ ಸರ್ಕಾರದ ಯುವಜನ ಕಲ್ಯಾಣ ಹಾಗೂ ಕ್ರೀಡಾ ಸಚಿವಾಲಯದ "ಫಿಟ್ ಇಂಡಿಯಾ ಸೈಕಲಿಂಗ್ ಡ್ರೈವ್" ಅಡಿಯಲ್ಲಿ ನಗರದ ಪ್ರಮುಖ ರಸ್ತೆಯಲ್ಲಿ ಜನಜಾಗೃತಿ ಮೂಡಿಸುವ ಪ್ಲೇಕಾರ್ಡ್‌ಗಳ ಮೂಲಕ 'ಸಂಡೇ ಆನ್ ಸೈಕಲ್' ಅಭಿಯಾನ ನಡೆಸಲಾಯಿತು. ಜಾಥಾಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಚಾಲನೆ ನೀಡಿದರು.

# ಶಾಲಾ ಕಾಲೇಜು ಹಂತದಲ್ಲೇ ಸೇವಾ ಸಂಸ್ಥೆ ಆರಂಭಿಸಲಿ

## ಹಿರಿಯ ಪತ್ರಕರ್ತ ರವಿ ಹೆಗಡೆ ಕರೆ । ಲಯನ್ಸ್ ಕ್ಲಬ್ ಪ್ರಾಂತೀಯ ಸಮ್ಮೇಳನ

ಮೈಸೂರು: ಸಾಮಾಜಿಕ ಜಾಲತಾಣಗಳಿಂದಾಗಿ ಬಂಡವಾಳ ಶಾಹಿಗಳ ಮಾರುಕಟ್ಟೆಯಾಗಿರುವ ಯುವಕರನ್ನು ಸರಿದಾರಿಗೆ ತರಲು ಸೇವಾ ಮನೋಭಾವವುಳ್ಳ ಲಯನ್ಸ್ ನಂತಹ ಸಂಸ್ಥೆಗಳು ಶಾಲಾ, ಕಾಲೇಜು ಹಂತದಲ್ಲಿಯೇ ಹೆಚ್ಚು ಹೆಚ್ಚು ಆರಂಭವಾಗಬೇಕು ಎಂದು ಹಿರಿಯ ಪತ್ರಕರ್ತ ರವಿ ಹೆಗಡೆ ಹೇಳಿದರು.



ನಗರದ ವಿದ್ಯಾರಣ್ಯಪುರಂನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ ಭಾನುವಾರ ನಡೆದ ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಪ್ರಾಂತೀಯ ಸಮ್ಮೇಳನದಲ್ಲಿ ಪ್ರಧಾನ ಭಾಷಣ ಮಾಡಿದರು. ದೇಶ ನಿರ್ಮಾಣದಲ್ಲಿ ಯುವಜನರ ಪಾತ್ರ ಕುರಿತು ಸ್ವಾಮಿ ವಿವೇಕಾನಂದ ಹಿಂದೆಯೇ ಹೇಳಿದ್ದು, ಯುವಜನರಿಂದಲೇ ಸಮಾಜದ ಅಭಿವೃದ್ಧಿ ಸಾಧ್ಯ ಎಂಬುದು ಸತ್ಯ. ಅಣ್ಣಾ ಹಜಾರೆ ಮತ್ತು ಮಹಾತ್ಮ ಗಾಂಧೀಜಿ ಹೋರಾಟದಲ್ಲಿ ಅವರ ಜತೆಗಿದ್ದವರೆಲ್ಲರೂ ಯುವಜನರೆ. ಯುವಕರು ಮನಸ್ಸು ಮಾಡಿದರೆ ಏನೂ ಬೇಕಾದರೂ ಮಾಡಬಲ್ಲರು. ಶ್ರೀಲಂಕಾ ಸೇರಿ ಅನೇಕ ದೇಶಗಳಲ್ಲಿ ಯುವಕರು ದಂಗೆ ಎದ್ದು ಹೊಸ ಸರ್ಕಾರಗಳನ್ನು ರಚಿಸಿದ್ದಾರೆ ಎಂದರು.

ಆದರೆ ಗಣರಾಜ್ಯೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಅದರ ಆಚರಣೆಯ ಮಹತ್ವವೇ ಗೊತ್ತಿಲ್ಲದೆ ರಜೆ ಮಜಾದಲ್ಲಿ ತೊಡಗಿದ್ದಾರೆ. ಅನೇಕರಿಗೆ ಸ್ವಾತಂತ್ರ್ಯ ದಿನಾಚರಣೆ ಬಿಟ್ಟು ಬೇರೆ ರಾಷ್ಟ್ರೀಯ ಹಬ್ಬಗಳೇ ಗೊತ್ತಿಲ್ಲ. ಏಕೆಂದರೆ ಯುವಕರೆಲ್ಲ ಬಂಡವಾಳ ಶಾಹಿಗಳ ಮಾರುಕಟ್ಟೆ ಆಗಿದ್ದಾರೆ. ಯಾವುದೇ ತಿಂಡಿ, ಬಟ್ಟೆ, ಮೊಬೈಲ್, ಕಾರು ಮತ್ತೆ ಯಾವುದೇ ವಸ್ತುವಾದರೂ ಅದನ್ನು ಮೊದಲು ಆಕರ್ಷಿಸುವುದು ಯುವಕರನ್ನು. ಅವರನ್ನು ಬಹಳ ಸುಲಭವಾಗಿ ಯಾಮಾರಿಸಬಹುದು. ಜಾಹೀರಾತುಗಳಲ್ಲಿ ಮೊಬೈಲ್ ಪರಿಚಯಿಸುವುದು ಅವುಗಳ ಕ್ಯಾಮರಾ ಮೂಲಕ. ಆದ್ದರಿಂದಲೇ ಯುವಕರನ್ನು ವಿದ್ವಂಸಕ ಕೃತ್ಯಕ್ಕೆ, ಬಾಂಬ್ ಹಾಕಲು, ಕಲ್ಲು ಎಸೆಯಲು ಅಥವಾ ಡ್ರಗ್ಸ್ ದಂಧೆಯಲ್ಲಿ ತೊಡಗುವಂತೆ ಮಾಡಲಾಗುತ್ತಿದೆ ಎಂದ ಆತಂಕ ವ್ಯಕ್ತಪಡಿಸಿದರು.

ಡ್ರಗ್ಸ್ ದುಶ್ಚಟ ಮಾತ್ರವಲ್ಲ, ಈಗ ಅದು ದೊಡ್ಡ ದಂಧೆಯಾಗಿದೆ. ಸಿನಿಮಾಗಳಲ್ಲಿ ಹೀರೋ ಗಳು ಸಿಗರೇಟ್ ಹೊಗೆ ಬಿಡುತ್ತ ಕಾಣಿಸಿಕೊಳ್ಳುವುದು ಒಂದೆಡೆಯಾದರೆ, ಮಕ್ಕಳಿಗೆ ಚಾಕೋಲೇಟ್ ಗಳಲ್ಲಿ ಡ್ರಗ್ಸ್ ನೀಡುವ, 13 ವರ್ಷದ ಮಕ್ಕಳನ್ನು ಡ್ರಗ್ಸ್ ದಾಸರನ್ನಾಗಿ ಮಾಡುವುದು, ಪರೀಕ್ಷೆಯ ಒತ್ತಡದಿಂದ ಮುಕ್ತಿ ಪಡೆಯಲು ಡ್ರಗ್ಸ್ ತೆಗೆದುಕೊಳ್ಳುವಂತೆ ಪ್ರೇರೇಪಿಸುವ ಕೆಲಸವೂ ನಡೆಯುತ್ತಿದೆ. ಯಾರಾದರೂ ಅಪರಾಧ ಹಿನ್ನೆಲೆ ಉಳ್ಳವರು ಇದ್ದರೆ ಅವರನ್ನು ಒಪ್ಪಿಕೊಳ್ಳುವ ಮಟ್ಟಕ್ಕೆ ಸಮಾಜ ಬೆಳೆದಿದೆ. ಮಕ್ಕಳನ್ನು ಇಂತಹ ಕ್ಲಬ್‌ಗಳ ಜತೆ ಸೇರಿಸಿದರೆ ಅವರನ್ನು ಸರಿದಾರಿಗೆ ತರಬಹುದು ಎಂದು ತಿಳಿಸಿದರು.

ಮೊಬೈಲ್ ಬಳಕೆಯನ್ನು ಪ್ರಶ್ನಿಸುವ ಸ್ಥಿತಿಯನ್ನು ನಾವು ಮೀರಿದ್ದೇವೆ. ಈಗ ಮೊಬೈಲ್ ಮೂಲಕ ಪರೀಕ್ಷಾ ಸಿದ್ಧತೆಗೆ ನೋಟ್ಸ್ ಬರುತ್ತದೆ. ಮತ್ತೊಂದೆಡೆ ಮಕ್ಕಳು ದಾರಿ ತಪ್ಪುತ್ತಾರೆ ಎಂಬ ಆತಂಕ ಕಾಡುತ್ತದೆ. ಮಕ್ಕಳು ಸ್ಥಳೀಯ ಆಲೋಚನೆಯನ್ನು ಬಿಟ್ಟು ಮೊಬೈಲ್ ಆಟಿಕೆಗಳಲ್ಲಿ ಬರುವ ವಿಕೃತಿಯ ಮನಸ್ಥಿತಿಯನ್ನು ಹೊಂದುತ್ತಿದ್ದಾರೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂತ್ಯ – 9ರ ಅಧ್ಯಕ್ಷ ಬಿ.ಜೆ. ಮನು ಮಾತನಾಡಿ, ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಯುವಜನರ ಪಾತ್ರ ಅಪಾರ. ರಾಜಕೀಯ, ಭ್ರಷ್ಟಚಾರ ವಿರೋಧಿ, ಸಂಸ್ಕೃತಿ ಪೋಷಣೆಯಲ್ಲಿ ಯುವಕರ ಪಾತ್ರ ಅಪಾರವಾಗಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಹಲವು ಮಂದಿಗೆ ಸುಮಾರು 2.5 ಲಕ್ಷ ಮೊತ್ತದ ಸವಲತ್ತು ವಿತರಿಸಿ ದರು. ವೇದಿಕೆಯಲ್ಲಿ ಸ್ನೇಹಾ ಮನು, ಮಲ್ಟಿಪಲ್ ಕೌನ್ಸಿಲ್ ಮಾಜಿ ಅಧ್ಯಕ್ಷ ಎನ್. ಕೃಷ್ಣೇಗೌಡ, ಎಂ. ಸಿದ್ದೇಗೌಡ, ಕೆ.ಡಿ. ಕಾರ್ಯಪ್ಪ, ಜಯಕುಮಾರ್, ಜಿಲ್ಲಾ ರಾಜ್ಯಪಾಲ ಕೆ.ಎಲ್. ರಾಜಶೇಖರ್, ಸ್ವಾಗತ ಸಮಿತಿ ಅಧ್ಯಕ್ಷ ಬಿ.ಎನ್. ಸುಧಾಕರ್, ಸಹ ಅಧ್ಯಕ್ಷರಾದ ಸಿ. ನಾರಾಯಣಗೌಡ, ಎಂ.ಆರ್. ಆನಂದ್, ಕೆ.ಎ. ಸಿದ್ದಲಿಂಗಪ್ಪ, ಕಾರ್ಯದರ್ಶಿ ಆರ್. ರಮೇಶ್‌ಕುಮಾರ್, ಖಜಾಂಚಿ ಬಿ. ಮಾದೇಶ್, ಜಯಕುಮಾರ್, ಎಂ.ಆರ್.ಆನಂದ್, ಕೆ.ಎಂ.ಸಿದ್ದಲಿಂಗಯ್ಯ, ಟಿ.ಎಚ್. ವೆಂಕಟೇಶ್, ಟಿ.ನಾರಾಮಣಸ್ವಾಮಿ, ಎಂ.ವಿ. ನಂದೀಶ್, ಪ್ರಭಾಮಂಡಲ್, ರಮೇಶ್ ಕುಮಾರ್, ಡಾ.ಎಂ.ಎನ್. ಗೀತಾ, ಮತಿದೇವಕುಮಾರ್ ಇದ್ದರು.

### ವಿಜ್ಞಾನ ಜ್ಞಾನದ ಅವಿಭಾಜ್ಯ ಅಂಗ.

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿ ಮಾತನಾಡಿ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಬಹಳ ಮುಖ್ಯ. ಆದರೆ ಇಂದಿನ ಮಕ್ಕಳು ಶಿಕ್ಷಣಕ್ಕಿಂತಲೂ ಸಾಮಾಜಿಕ ಜಾಲತಾಣದಲ್ಲಿ ಬಂದಿರುವುದೇ ಸತ್ಯ ಎಂದು ನಂಬುತ್ತಿದ್ದಾರೆ. ಗಣರಾಜ್ಯೋತ್ಸವ, ಏಕತಾ ಓಟ ಮುಂತಾದ ಕಾರ್ಯಕ್ರಮಗಳಿಗೆ ನಮ್ಮ ವಿದ್ಯಾರ್ಥಿಗಳೇ ಬರುವುದಿಲ್ಲ. ಬಂದರೂ ಐದು ನಿಮಿಷ ಕೂರುವ ವ್ಯವಧಾನವಿಲ್ಲ ಎಂದರು. ವಿಜ್ಞಾನ ಜ್ಞಾನದ ಅವಿಭಾಜ್ಯ ಅಂಗ. ಶಿಕ್ಷಕರಿದ್ದರಾರೆ. ಆದರೆ ಸ್ಕಿಲ್ ಇಲ್ಲ. ಮೊಬೈಲ್ ಹಾಳು ಮಾಡುತ್ತಿದೆ. ಸಂಯಮ ಶಿಸ್ತು ಇಲ್ಲ. ಒಂದು ಗಂಟೆಪಾಠ ಕೇಳುವ ವ್ಯವದಾನ ಇಲ್ಲ. ಶಿಕ್ಷಣದಲ್ಲಿ ತಾಂತ್ರಿಕತೆ ಹೇಗೆ ಬಳಸಬಹುದು ಎಂಬುದು ಕೋವಿಡ್ ಬಂದ ಮೇಲೆ ತಿಳಿಯಿತು.

**ಮೊದಲ ಪುಟದಿಂದ**

## ಅನಾಥ ಮಹಿಳೆಯರು, ಮಕ್ಕಳ ಬಂಧು, ರಕ್ಷಕಿ ಡಾ.ಸುಶೀಲಮ್ಮ

ಅನಾಥ ಮಹಿಳೆಯರು, ಮಕ್ಕಳು ಮತ್ತು ವೃದ್ಧರಿಗೆ ಆಶ್ರಯ ನೀಡಿದ್ದ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸರ್ಕಾರದ ರಾಣಿ ಕಿತ್ತೂರು ಚೆನ್ನಮ್ಮ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿದೆ. ಸುಶೀಲಮ್ಮ ಅವರಿಗೆ ಜಾನಕಿದೇವಿ ಬಜಾಜ್ ಪುರಸ್ಕಾರ, ಮೈಸೂರು ದಸರಾ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ ಸಿಕ್ಕಿದೆ.

## ವಿದೇಶದಲ್ಲಿ ದೇಶದ ವಿರುದ್ಧ ಮಾತನಾಡಲ್ಲ

ನನಗೆ ಅಷ್ಟೋ ಇಷ್ಟೋ ರಾಜಕೀಯ ಅನುಭವ ಇದೆ. ಅದರ ಮೇಲೆ ಹೇಳಿದ್ದೇನೆ. ನಾನು ಯಾವುದೋ ದೇಶಕ್ಕೆ ಹೋಗಿ ನಮ್ಮ ದೇಶಕ್ಕೆ ಧಕ್ಕೆ ತರುವುದಕ್ಕೆ ಆಗುವುದಿಲ್ಲ. ನಾವು ನಮ್ಮ ದೇಶವನ್ನು ಬಿಟ್ಟು ಕೊಡಲು ಸಾಧ್ಯವಿಲ್ಲ. ಮೊದಲು ನಾವು ಭಾರತೀಯರು. ನಾನು ದೇಶವನ್ನು ಪ್ರೀತಿಸುತ್ತೇನೆ ಗೌರವಿಸುತ್ತೇನೆ. ಭಾರತದ ಅಭಿವೃದ್ಧಿಗೆ ನಮ್ಮೆಲ್ಲರ ಕೊಡುಗೆ ಇದೆ. ನಾಳೆ ಭಾರತ 77ನೇ ಗಣರಾಜ್ಯೋತ್ಸವ ಆಚರಣೆ ನಡೆಸಲಿದೆ. ನಾವೆಲ್ಲರೂ ಸಂಭ್ರಮದಿಂದ ಆಚರಿಸೋಣ ಎಂದು ಹೇಳಿದರು

## ಬಿಜೆಪಿ ಅಧಿಕಾರಿ ಬಿಟ್ಟು ಕೊಡುತ್ತಾ?

17 ಸ್ಥಾನ ಗೆದ್ದಿರುವವರಿಗೆ ಹೇಗೆ ಅಧಿಕಾರ ಸಿಗುತ್ತದೆ? ಎಂದು ಕೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ಇದ್ದರು.

## 125 ಪೊಲೀಸರಿಗೆ ಶೌರ್ಯ ಪದಕ

ಉತ್ತರ ಪ್ರದೇಶ (18), ದೆಹಲಿ ಪೊಲೀಸ್ (14) ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿದ್ದಾರೆ. ಇದರ ಹೊರತಾಗಿ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ 12 ಪದಕ ಶೌರ್ಯ ಪ್ರಶಸ್ತಿಗಳನ್ನ ಪಡೆದ ಏಕೈಕ ಪಡೆ ಆಗಿದೆ. ಈ ಬಾರಿ ಘೋಷಣೆ ಮಾಡಲಾದ ಪಟ್ಟಿಯಲ್ಲಿ ಒಟ್ಟು 101 ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ ಹಾಗೂ 756 ವಿಶಿಷ್ಟ ಸೇವಾ ಪದಕ ಸಹ ಸೇರಿವೆ.

## ರಾಜ್ಯದ 8 ಮಂದಿಗೆ ಪದ್ಮಶ್ರೀ

ಬೆಂಗಳೂರಿನ ಸಮಾಜ ಸೇವಕಿ ಎಸ್.ಜಿ.ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭ್ಯಸಿದೆ.

### ಬುದ್ಧ ಅನಿವಾರ್ಯ: ಲಿಂಗರಾಜು

# ಜಾಗತಿಕ ಸಮಸ್ಯೆಗೆ ಯುದ್ಧ ಬಾಣವಲ್ಲ

ಮೈಸೂರು: ಜಗತ್ತಿನ ಪ್ರಜಾಪ್ರಭುತ್ವ ರಾಷ್ಟ್ರಗಳು, ನಿರಂಕುಶಾಧಿ ರಾಷ್ಟ್ರಗಳು ಅನುಭವಿಸುತ್ತಿರುವ ಜಾಗತಿಕ ಸಮಸ್ಯೆಗೆ ಯುದ್ಧ ಬಾಣವಲ್ಲ, ಬುದ್ಧರ ಬೋಧನೆ ಹಾಗೂ ಹಿಂಸೆರಹಿತ ಸಮಾಜ ನಿರ್ಮಾಣಕ್ಕೆ ಬಾಬಾಸಾಹೇಬರ ಸಂವಿಧಾನ ಈ ಎರಡೂ ವರದಾನವಾಗಿವೆ ಎಂದು ಅನುವಾದಕ ಬಿ.ಎಂ.ಲಿಂಗರಾಜು ಹೇಳಿದರು.



ವಿಜಯನಗರ 1ನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಸಿದ್ಧಾರ್ಥ ಬುದ್ಧ ವಿಹಾರದಲ್ಲಿ ಕರ್ನಾಟಕ ಬುದ್ಧ ಧಮ್ಮ ಸಮಿತಿ ವತಿಯಿಂದ ಶನಿವಾರ ಸಂಜೆ ನಡೆದ ಬುದ್ಧ ವಂದನೆ ಮತ್ತು ಧ್ಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಾಬಾಸಾಹೇಬ್ ಅಂಬೇಡ್ಕರ್‌ರವರ ಬರಹ ಮತ್ತು ಭಾಷಣಗಳಲ್ಲಿ ಅತ್ಯಂತ ಮಹತ್ವದ 'ಕೃತಿ ಬುದ್ಧ ಮತ್ತು ಆತನ ಧಮ್ಮ'. ಭಾರತದ ಸಂವಿಧಾನದ ಪ್ರತಿಯೊಂದು ಅಂಶವನ್ನೂ ಜಾಣ್ಮೆಯಿಂದ ಹೆಕ್ಕಿ, ಓರೆಗಲ್ಲಿಗೆ ಹಚ್ಚಿ ಸಿದ್ದಪಡಿಸಿ ನಮಗೆ ನೀಡಿದ್ದಾರೆ ಎಂದರು. ಪ್ರಜಾಪ್ರಭುತ್ವದ ಅಡಿಗಲ್ಲುಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆ ಈ ಪದಗಳನ್ನು ನಾನು ಫ್ರೆಂಚ್ ಕ್ರಾಂತಿಯಿಂದ ಎರವಲು ಪಡೆದಿಲ್ಲ. ಇವುಗಳನ್ನು ನನ್ನ ಗುರು ಬುದ್ಧರ ಬೋಧನೆಗಳಿಂದ ಪಡೆದಿ ದ್ದೇನೆ ಎಂಬ ಮಾತನ್ನು ಅಂಬೇಡ್ಕರ್ ಹೇಳಿದ್ದಾರೆ ಎಂದರು

ಕರ್ನಾಟಕ ಬುದ್ಧಧಮ್ಮ ಸಮಿತಿಯ ಸಹಕಾರ್ಯದರ್ಶಿ ಎಚ್.ಶಿವರಾಜು ಮಾತ ನಾಡಿ, ಇಂದಿನ ಸಮಾಜದಲ್ಲಿ ಹಿಂಸಾಚಾರ, ಅಸಹಿಷ್ಣುತೆ, ಲೋಭ, ದ್ವೇಷ, ಅಶಾಂತಿ ಹೆಚ್ಚು ತ್ತಿರುವ ಸಂದರ್ಭದಲ್ಲಿ ಬುದ್ಧನ ಧಮ್ಮ ಮಾನ ವಕುಲಕ್ಕೆ ಅತ್ಯಂತ ಅವಶ್ಯ ಮಾರ್ಗದರ್ಶಕವಾಗಿದೆ ಎಂದರು. ಬುದ್ಧರು 2,500 ವರ್ಷಗಳ ಹಿಂದೆ ಹೇಳಿದ ಉಪದೇಶಗಳು ಇಂದಿಗೂ ಸಮಕಾಲೀನ ಸಮಸ್ಯೆಗಳಿಗೆ ಸ್ಪಷ್ಟ ಪರಿಹಾರವನ್ನು ನೀಡುತ್ತವೆ. ವಿಶ್ವ ಶಾಂತಿಗಾಗಿ ಬೌದ್ಧ ಭಿಕ್ಕುಗಳು ನಡೆಸುತ್ತಿರುವ ಶಾಂತಿಯ ನಡಿಗೆ ದೊಡ್ಡ ಸಂಚಲನ ಉಂಟು ವಾಡುತ್ತಿದೆ ಎಂದರು. ಖಜಾಂಚಿ ಎಂ.ಸಾವ ಕಯ್ಯ, ಆರ್.ನಟರಾಜು, ಚಿದಂಬರಮೂರ್ತಿ, ನಿಸರ್ಗ ಸಿದ್ದರಾಜು, ಮಾ.ನಾಗಯ್ಯ, ಮಹದೇವಸ್ವಾಮಿ, ಡಾ.ಮಂಜು ಸತ್ತಿಗೆಹುಂಡಿ, ವಂಸತ್ ಕುಮಾರ್, ಸುರೇಶ್, ಮುಂತಾದವರು ಹಾಜರಿದ್ದರು.

# 2022ರ ಮೀಸಲಾತಿ ಕಾಯ್ದೆ ಶೆಡ್ಯೂಲ್ 9ಕ್ಕೆ ಸೇರಿಸಲಿ

## ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷರಾದ ವಿ.ಎಸ್.ಉಗ್ರಪ್ಪ ಆಗ್ರಹ

ಬೆಂಗಳೂರು:ಮೀಸಲಾತಿ ಭಿಕ್ಷೆ ಅಲ್ಲ. ಇದು ನಮ್ಮ ಸಂವಿಧಾನಾತ್ಮಕ ಹಕ್ಕು. 2022ರ ಮೀಸಲಾತಿ ಕಾಯ್ದೆಯನ್ನು ತಕ್ಷಣ ಸಂವಿಧಾನದ 9ನೇ ಶೆಡ್ಯೂಲ್ಗೆ ಸೇರಿಸದಿದ್ದರೆ ವಾಲ್ಮೀಕಿ ಸಮಾಜ ಹಾಗೂ ಇಡೀ ತಳ ಸಮುದಾಯಗಳು ಯಾವುದೇ ರೀತಿಯ ಹೋರಾಟಕ್ಕೂ ಸಿದ್ಧ.

ಇವು ಶತಮಾನಗಳ ನೋವು, ನಿರಂತರ ಅನ್ಯಾಯ ಮತ್ತು ರಾಜಕೀಯ ಮೋಸಗಳಿಂದ ಬೇಸತ್ತ ಸಮುದಾಯದ ಕಿಡಿಕಾರುವ ಕೂಗು ಎಂದು ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಅಧ್ಯಕ್ಷರಾದ ವಿ.ಎಸ್. ಉಗ್ರಪ್ಪ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

### ನಾವು ಮೌನವಾಗಿರುವವರಲ್ಲ

ನಾವು ಮೊದಲಿನಿಂದಲೂ ಹೋರಾಟ ಮಾಡಿಕೊಂಡೇ ಬದುಕಿದವರು.ನಾಯಕರು ಕೇವಲ ಸುದ್ದಿಗೋಷ್ಠಿ ನಡೆಸಿ ಸುಮ್ಮನಾಗುತ್ತಾರೆ ಎಂದು ಭಾವಿಸಬೇಡಿ," ಎಂದು ಗುಡುಗಿದ ಉಗ್ರಪ್ಪ ಅವರು,ಸರ್ಕಾರಗಳ ಮೌನವನ್ನು ದುರ್ಬಲತೆ ಎಂದು ಅರ್ಥೈಸಿಕೊಳ್ಳಬೇಡಿ ಎಂದು ಎಚ್ಚರಿಸಿದರು.

2022ರಲ್ಲಿ ಎಸ್ಸಿ, ಎಸ್ಟಿ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸುವ ಕಾಯ್ದೆ ಜಾರಿಗೊಂಡರೂ, ಅದನ್ನು ಶೆಡ್ಯೂಲ್ 9ಕ್ಕೆ ಸೇರಿಸದೆ ಇಡುವ ಮೂಲಕ ತಳ ಸಮುದಾಯಗಳ



ಭವಿಷ್ಯವನ್ನು ಅಸ್ಥಿರಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು.

### ಪ್ರಧಾನಿಯ ಭರವಸೆಗಳು ? ಇಂದು ಎಲ್ಲಿವೆ...?

ಪ್ರಧಾನಿ ನರೇಂದ್ರಮೋದಿ ಅವರು ಕರ್ನಾಟಕಕ್ಕೆ ಬಂದಾಗಲೆಲ್ಲಾ ಕೆಲವು ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಭರವಸೆ ನೀಡಿ ಜನರನ್ನು ದಿಕ್ಕು ತಪ್ಪಿಸಿದರು. ಇದರ ಪರಿಣಾಮವಾಗಿ ಇಂದು ಸುಳ್ಳು ಜಾತಿ ಪ್ರಮಾಣ ಪತ್ರಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದಕ್ಕೆ ಸಂಪೂರ್ಣ ಹೊಣೆ ಬಿಜೆಪಿ ಸರ್ಕಾರ ಮತ್ತು ಅದರ ನಾಯಕರು ಎಂದು ಉಗ್ರಪ್ಪ ವಾಗ್ದಾಳಿ ನಡೆಸಿದರು.

ಈ ಸುಳ್ಳು ಜಾತಿ ಪ್ರಮಾಣಪತ್ರಗಳಿಂದ ನಿಜವಾದ ಎಸ್ಸಿ ಮತ್ತು ಎಸ್ಟಿ ಮಕ್ಕಳ ಹಕ್ಕುಗಳು ಕಬಳಿಸಲ್ಪಡುತ್ತಿವೆ. ಇದು ಆಡಳಿತದ ವೈಫಲ್ಯ ಮಾತ್ರವಲ್ಲ, ಸಾಮಾಜಿಕ ನ್ಯಾಯದ ಮೇಲಿನ ನೇರ ದಾಳಿ ಎಂದು ಹೇಳಿದರು.

### ಎಸ್ಸಿ ಮತ್ತು ಎಸ್ಟಿ ಹಣ ಬೇರೆ ಕೆಲಸಕ್ಕೆ ಯಾಕೆ...?

ಮುಂದಿನ ಬಜೆಟ್ ಗಾತ್ರ ಸುಮಾರು 4 ಲಕ್ಷ ಕೋಟಿ ರೂಪಾಯಿ ಇರಬಹುದು. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟಿರುವ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂಬುದು ಅತ್ಯಂತ ನೋವಿನ ಸಂಗತಿ ಎಂದು ಉಗ್ರಪ್ಪ ಬೇಸರ ವ್ಯಕ್ತಪಡಿಸಿದರು.ಕಾನೂನು ಇದ್ದರೂ ಅನುಷ್ಠಾನ ಇಲ್ಲ. ಇದಕ್ಕಿಂತ ದೊಡ್ಡ ದ್ರೋಹ ತಳ ಸಮುದಾಯಗಳಿಗೆ ಮತ್ತೇನು...? ಎಂದು ಪ್ರಶ್ನಿಸಿದರು.

### ಆರ್ಥಿಕ ಮೀಸಲಾತಿ–ಸಂವಿಧಾನದ ಆಶಯಕ್ಕೆ ವಿರೋಧ

ಡಾ.ಬಿ.ಆರ್.ಅಂಬೇಡ್ಕರ್ ಎಲ್ಲೂ ಆರ್ಥಿಕ ಮೀಸಲಾತಿಯ ಪರವಾಗಿ ಮಾತನಾಡಿಲ್ಲ. ಆದರೆ ಇಂದು ಮೇಲ್ವರ್ಗದವರಿಗೆ ಆರ್ಥಿಕ ಹಿಂದುಳಿತದ ಹೆಸರಿನಲ್ಲಿ ಮೀಸಲಾತಿ ನೀಡಲಾಗುತ್ತಿದೆ.

ಮೇಲ್ವರ್ಗದ ಮಕ್ಕಳಿಗೆ 8.5 ಲಕ್ಷ ರೂಪಾಯಿ ಆದಾಯ ಮಿತಿ.ಆದರೆ ತಲೆತಲಾಂತರದಿಂದ ಶೋಷಣೆ ಅನುಭವಿಸಿದ ಎಸ್ಸಿ ಮತ್ತು ಎಸ್ಟಿ ಮಕ್ಕಳಿಗೆ 2.5 ಲಕ್ಷ ರೂಪಾಯಿ ಮಿತಿಗೊಳಿಸಿರುವುದು ಇದು ಯಾವ ನ್ಯಾಯ...? ಎಂದು ಉಗ್ರಪ್ಪ ಪ್ರಶ್ನಿಸಿದರು.

### ನ್ಯಾಯಾಲಯದ ತಡೆ ? ಶೆಡ್ಯೂಲ್ 9 ಮಾತ್ರ ಪರಿಹಾರ

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೋರಾಟದ ಫಲವಾಗಿ ಮೀಸಲಾತಿ ಹೆಚ್ಚಳ ಜಾರಿಗೊಂಡಿತ್ತು.ಆದರೆ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ತಡೆ ತಂದವು.ಈ ಸಮಸ್ಯೆಗೆ ಶಾಶ್ವತ ಪರಿಹಾರವೆಂದರೆ ಶೆಡ್ಯೂಲ್ 9 ಕ್ಕೆ ಸೇರಿಸಬೇಕು. ತಮಿಳುನಾಡು ರಾಜ್ಯದಲ್ಲಿ ಮೀಸಲಾತಿ ಶೇ.69ಕ್ಕೆ ಏರಿಕೆ ಮಾಡಿ ಶೆಡ್ಯೂಲ್ 9ಕ್ಕೆ ಸೇರಿಸಲಾಗಿದೆ.ಇದು ಕರ್ನಾಟಕದಲ್ಲಿ ಯಾಕೆ ಆಗಬಾರದು...? ಎಂದು ಉಗ್ರಪ್ಪ ಅವರು ಆಕ್ರೋಶ ವ್ಯಕ್ತಪಡಿಸಿದರು. ಬೆಳಗಾವಿ ಅಧಿವೇಶನದಲ್ಲಿ ಶೆಡ್ಯೂಲ್ 9ಕ್ಕೆ ಸೇರಿಸುವ ನಿರ್ಣಯ ಕೈಗೊಂಡಿದ್ದರೂ, ಒಂದು ತಿಂಗಳಾದರೂ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಸರ್ವಪಕ್ಷ ನಿಯೋಗಕ್ಕೆ ಆಗ್ರಹ

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪತ್ರ ಬರೆದಿರುವುದಾಗಿ ತಿಳಿಸಿದ ಉಗ್ರಪ್ಪ ಅವರು,ತಕ್ಷಣ ಸರ್ವಪಕ್ಷ ನಿಯೋಗವನ್ನು ಪ್ರಧಾನಿ ಬಳಿ ಕರೆದೊಯ್ದು, 2022ರ ಮೀಸಲಾತಿ ಕಾಯ್ದೆಯನ್ನು ಶೆಡ್ಯೂಲ್ 9ಕ್ಕೆ ಸೇರಿಸುವಂತೆ ಶೇ.50 ಮಿತಿ ಕುರಿತ ಸುಪ್ರೀಂಕೋರ್ಟ್ ಆದೇಶವನ್ನು ತಟಸ್ಥಗೊಳಿಸಲು ಅನುಚ್ಛೇದ 15 ಮತ್ತು 16ಕ್ಕೆ ತಿದ್ದುಪಡಿ ಮಾಡುವಂತೆ ಒತ್ತಡ ತರಬೇಕೆಂದು ಆಗ್ರಹಿಸಿದರು.

### ಸುಳ್ಳು ಜಾತಿ ಪ್ರಮಾಣ ಪತ್ರ?ಕಠಿಣ ಕ್ರಮ ಬೇಕು

ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ಮೇಲೂ, ಅದನ್ನು ನೀಡಿದ ಅಧಿಕಾರಿಗಳ ಮೇಲೂ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದು ರಾಜ್ಯ ಸರ್ಕಾರವನ್ನು ಉಗ್ರಪ್ಪ ಅವರು ಒತ್ತಾಯಿಸಿದರು.ಇಲ್ಲದಿದ್ದರೆ, ಮೀಸಲಾತಿ ಎಂಬ ವ್ಯವಸ್ಥೆಯೇ ಅರ್ಥಹೀನವಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯ ಪದಾಧಿಕಾರಿಗಳಾದ ಎಂ.ನರಸಿಂಹಯ್ಯ, ವಿಜಯನಾಯಕ, ನಿವೃತ್ತ ಪ್ರೊ.ಶ್ರೀರಾಮುಲು, ಕೆಂಪರಾಮಯ್ಯ, ಈ.ರಾಜಪ್ಪ, ಜಯಶ್ರೀ ಗುಡ್ಡಕಾಯು, ರೇವತಿ ಭೀಮಪುತ್ರಿ, ಡಿ.ಕೆ.ಸಣ್ಣ ನಾಯಕ್, ರಮೇಶ್ ಹಿರೇಜಂಬೂರು, ಜಿ.ನಾಗರಾಜು ಗಾಣದಹುಣಸೆ, ಬಸವರಾಜ್ ನಾಯಕ್, ಟಿ.ಆರ್. ತುಳಸಿರಾಮ್, ಟಿ.ರಾಜಣ್ಣ ಲಕ್ಷ್ಮಿಸಾಗರ, ಕೆ.ವಿ. ನಾಗೇಂದ್ರ, ರವಿಚಂದ್ರ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಯುವ ಪೀಳಿಗೆ ಮತದಾನ ಮಾಡಲಿ

## ಉತ್ತಮ ನಾಯಕರ ಆಯ್ಕೆಗೆ ಮತದಾನ ಮುಖ್ಯ : ನ್ಯಾ.ಹೇಮಾವತಿ ಕರೆ

ಹಾಸನ:– ರಾಷ್ಟ್ರಕ್ಕೆ ಉತ್ತಮ ನಾಯಕರನ್ನು ಆಯ್ಕೆ ಮಾಡುವಲ್ಲಿ ಯುವ ಪೀಳಿಗೆಯ ಮತದಾನ ಬಹಳ ಮುಖ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿ ಕಚೇರಿ ಹಾಗೂ ಹಾಸನ ಜಿಲ್ಲಾ ಡಳಿತ ಸಂಯುಕ್ತಾಶ್ರಾಯದಲ್ಲಿ ಹಾಸನ ಜಿಲ್ಲಾ ಪಂಚಾಯತಿ ಹೊಯ್ಸಳ ಸಭಾಂಗಣದಲ್ಲಿಂದು ಏರ್ಪಡಿಸಲಾಗಿದ್ದ ರಾಷ್ಟ್ರೀಯ ಮತದಾನ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಭಾರತೀಯರು 18 ವರ್ಷದ ನಂತರ ಸ್ವತಂತ್ರ್ಯವಾಗಿ ತಮ್ಮ ಹಕ್ಕು ಚಲಾಯಿಸುವ ಅಧಿಕಾರವನ್ನು ಹೊಂದಿದ್ದಾರೆ, ಅದರಂತೆ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಕರೆ ನೀಡಿದರು.

ಭಾರತ ದೇಶ ಪ್ರತಿಯೊಬ್ಬರ ಆಸ್ತಿಯಾಗಿದೆ, ಸಂವಿಧಾನ ಬದ್ಧವಾಗಿ ಮತದಾನದ ಹಕ್ಕುಗಳನ್ನು ಪ್ರತಿಯೊಬ್ಬರೂ ಪಡೆದಿರುತ್ತಾರೆ, ಮತ ಚಲಾಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಹಾಗೂ ಮತದಾನ ಪಟ್ಟಿಯಲ್ಲಿ ಸುತ್ತ ಮುತ್ತಲಿನವರನ್ನು ಸೇರ್ಪಡೆಗೊಳಿಸಲು ಉತ್ತೇಜನ ನೀಡಬೇಕು ಎಂದರು. ಯುವ ಪೀಳಿಗೆ ಮತದಾನದಲ್ಲಿ ಭಾಗವಹಿಸದಿರುವುದು ಹಾಗೂ ಮತದಾನ ಪಟ್ಟಿ ಸೇರ್ಪಡೆ ಆಸಕ್ತಿ ತೋರಿಸದಿರುವುದು ವಿಷಾದನೀಯ, 18 ವರ್ಷ ತುಂಬಿದ ಪ್ರತಿಯೊಬ್ಬರೂ ಮತದಾರ ಪಟ್ಟಿಯಲ್ಲಿ ಮೊದಲ ನೋಂದಣಿ ಮಾಡಿಕೊಳ್ಳುವುದು ಕರ್ತವ್ಯವಾಗಿದೆ. ಇಂದಿನ ಪ್ರಜೆಗಳು ಮುಂದಿನ ಭವಿಷ್ಯವಾಗಿದ್ದಾರೆ. ಯುವ ಸಮುದಾಯ ದೇಶಕ್ಕೆ




ಉತ್ತಮ ನಾಯಕರನ್ನು ಆಯ್ಕೆ ಮಾಡಬೇಕು, ಅಬಿವೃದ್ಧಿ ಹಾದಿಯಲ್ಲಿ ಸಾಗಬೇಕು ಎಂದರು.

ಜಿಲ್ಲಾಧಿಕಾರಿ ಕೆ. ಎಸ್ ಲತಾ ಕುಮಾರಿ ಅವರು ಮಾತನಾಡಿ ಪ್ರತಿಯೊಬ್ಬ ನಾಗರಿಕರು ದೇಶ ಕಟ್ಟುವ ರಾಜಕೀಯ ಪ್ರಜ್ಞೆ ಇರಬೇಕು, ಯುವ ಮತದಾರರು ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಮತದಾನದ ಪಟ್ಟಿಯಲ್ಲಿ ಹೆಸರು ಇರಬೇಕು ಎಂದರು.

ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗದೆ ದೇಶದ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ನಾಯಕರನ್ನು ಆಯ್ಕೆ ಮಾಡಿಕೊಳ್ಳಬೇಕು, ಹಿರಿಯರು, ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವನವನ್ನು ಪಣಕ್ಕಿಟ್ಟು, ಬಲಿದಾನ, ಶ್ರಮದಿಂದ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ ಹಾಗಾಗಿ ಇತಿಹಾಸವನ್ನು ಅರಿತು ಪ್ರತಿನಿಧಿಗಳ ಆಯ್ಕೆ ಮಾಡಬೇಕು ಎಂದರು. ಇಂದು 16ನೇ ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ ರಾಜ್ಯದಲ್ಲಿ ಜಿಲ್ಲೆ ಶೇಕಡಾವಾರು ಮತದಾನದಲ್ಲಿದ್ದು, ಸ್ವೀಪ್ ವತಿಯಿಂದ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಭೇಟಿ ನೀಡಿ ಯುವ ಮತದಾರರ ನೋಂದಣಿ ಮಾಡಿಸಬೇಕು ಎಂದರು.

ಜಿಲ್ಲೆಯಲ್ಲಿ 26 ಸಾವಿರ ಹೊಸ ಯುವ ಮತದಾರರು ಸೇರ್ಪಡೆಯಾಗಿದ್ದಾರೆ, 15 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ, ಜಿಲ್ಲೆಯಲ್ಲಿ ಹೆಚ್ಚು ಮಹಿಳಾ ಮತದಾರಿದ್ದು ಪ್ರತಿಯೊಬ್ಬರಲ್ಲಿಯೂ ರಾಜಕೀಯ ಪ್ರಜ್ಞೆ ಹೊಂದಬೇಕು. ರಾಜ್ಯದಲ್ಲಿ 2025–26 ರ ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯ ನಡೆಯುತ್ತಿದೆ. ಹಿಂದೆ 2001 ರಲ್ಲಿ ಮ್ಯಾಪಿಂಗ್ ಕಾರ್ಯ ಮಾಡಲಾಗಿತ್ತು ಎಂದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಭಾರ ಸದಸ್ಯ ಕಾರ್ಯದರ್ಶಿಗಳಾದ ಗಿರಿಗೌಡ ಅವರು ಮಾತನಾಡಿ ಮತದಾನ ಶೇಕಡಾವಾರು ಕುಸಿಯುತ್ತಿದ್ದು, ಗ್ರಾಮೀಣ ಭಾಗದಲ್ಲಿ ಮತದಾನವಾಗುತ್ತಿದೆ ಆದರೆ ನಗರ ಭಾಗದಲ್ಲಿಯೇ ಮತದಾನ ಕಡಿಮೆಯಾಗುತ್ತಿದೆ ಇದು ವಿಷಾದನೀಯ ಎಂದರು.

ಜಾತಿ ಧರ್ಮ ಬಿಟ್ಟು ಉತ್ತಮ ನಾಯಕರನ್ನು ಮತದಾನದ ಮೂಲಕ ಆಯ್ಕೆ ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕು ಎಂದು ತಿಳಿಸಿದರು.ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಮಾತನಾಡಿ ಭಾರತ 2011 ರಲ್ಲಿ ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಮೊದಲ ಬಾರಿಗೆ ಆರಂಭಿಸಲಾಯಿತು, ಇಂದು ಭಾರತ ಚುನಾವಣಾ ಆಯೋಗದ ನಮ್ಮಭಾರತ ನನ್ನ ಹಕ್ಕು ಎಂಬ ಧ್ಯೆಯ ವಾಕ್ಯದೊಂದಿಗೆ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಮಟ್ಟದಲ್ಲಿ ಸ್ವೀಪ್ ಸಮಿತಿಯು ಅರ್ಹ ಮತದಾರ ಜಾಗೃತಿಯನ್ನು ಮೂಡಿಸುವ ಕೆಲಸ ಹಾಗೂ ಪ್ರತಿಯೊಬ್ಬರೂ ಮತದಾನ ಮಾಡುವಂತೆ ಅರಿವು ಮೂಡಿಸುತ್ತಿದೆ ಎಂದು ತಿಳಿಸಿದರು. ಇದೇ ವೇಳೆ ಚುನಾವಣೆ ಪ್ರಕಿಯ ಕುರಿತು ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿ, ತಹಶೀಲ್ದಾರ್ ಗೀತಾ, ಡಿವೈಎಸ್ಪಿ ಗಂಗಾಧರಪ್ಪ, ಮತ್ತಿತರರು ಉಪಸ್ಥಿತರಿದ್ದರು.



# ಬಿಡದಿ ಟೌನ್ ಶಿಪ್ ಯೋಜನೆ ಬಗ್ಗೆ ಚರ್ಚೆಗೆ ಬರಲಿ




ಕನಕಪುರ: ಬಿಡದಿ ಟೌನ್ ಶಿಪ್ ಯೋಜನೆ ಬಗ್ಗೆ ಕುಮಾರಸ್ವಾಮಿ ಜತೆ ಚರ್ಚೆಗೆ ಸಿದ್ಧನಿದ್ದೇನೆ. ಈ ವಿಚಾರವನ್ನು ಎಲ್ಲಾ ಮಾಧ್ಯಮಗಳು ಕುಮಾರಸ್ವಾಮಿ ಅವರಿಗೆ ತಿಳಿಸಿ. ಅವರು ಮುಖ್ಯಮಂತ್ರಿಯಾಗಿದ್ದಾಲೇ ಅವರ ಸವಾಲನ್ನು ಸ್ವೀಕಾರ ಮಾಡಿದ್ದೇನೆ. ಈಗಲೂ ಸಹ ಬಹಳ ನಮ್ರತೆಯಿಂದ ಅವರ ಸವಾಲು ಸ್ವೀಕಾರ ಮಾಡುತ್ತೇನೆ, ಚರ್ಚೆಗೆ ಬರಲಿ" ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರತಿಸವಾಲು ಎಸೆದರು.

ಕನಕಪುರದ ದೊಡ್ಡ ಆಲಹಳ್ಳಿಯಲ್ಲಿ ನಿರ್ಮಾಣವಾಗಿರುವ ನೂತನ ರಾಮಮಂದಿರದ ಉದ್ಘಾಟನಾ ಸಮಾರಂಭದ ಬಳಿಕ ಶಿವಕುಮಾರ್ ಅವರು ಮಾಧ್ಯಮಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿದರು. ಬಿಡದಿ ಟೌನ್ ಶಿಪ್ ಯೋಜನೆ ವಿಚಾರವಾಗಿ ಡಿ.ಕೆ. ಸಹೋದರರು ನನ್ನ ಜೊತೆ ಚರ್ಚೆ ಬರಲಿ ಎನ್ನುವ ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಗಮನ ಸೆಳೆದಾಗ, "ಕುಮಾರಸ್ವಾಮಿ ಅವರು ಯಾವತ್ತು ಚರ್ಚೆಗೆ ಸಿದ್ಧ ಎಂದು ಹೇಳುವರೋ ಅಂದು ಚರ್ಚೆ ಮಾಡಲು ನಾನು ತಯಾರಿದ್ದೇನೆ. ಮಾಧ್ಯಮಗಳೇ ದಿನಾಂಕ ನಿಗದಿ ಮಾಡಲಿ. ರಾಮಮಂದಿರದ ಮುಂದೆ ಪ್ರಶ್ನೆ ಕೇಳಿದ್ದೀರಿ. ನಾನು ಇದೇ ರಾಮ ಮಂದಿರದಲ್ಲಿ ಕುಳಿತು, ನುಡಿದಂತೆ ನಡೆಯುತ್ತೇನೆ. ಪೂರ್ವನಿಯೋಜಿತ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಈ ಚರ್ಚೆಯ ದಿನಾಂಕದ ಬಗ್ಗೆ ಮೂರು ದಿನ ಮುಂಚಿತವಾಗಿ ತಿಳಿಸಿ, ನಾನು ಚರ್ಚೆಗೆ ಬರುತ್ತೇನೆ" ಎಂದರು. ಬಿಡದಿ ಯೋಜನೆ ಅನುಷ್ಠಾನಕ್ಕೆ ಬಿಡುವುದಿಲ್ಲ ಎಂದು ಕುಮಾರಸ್ವಾಮಿ ಅವರು ಹೇಳಿರುವ ಬಗ್ಗೆ ಕೇಳಿದಾಗ, "ಅವರು ರಾಜಕಾರಣ ಮಾಡಬೇಕು ಮಾಡುತ್ತಿದ್ದಾರೆ. ಯೋಜನೆಯನ್ನು ನಾನು ಮಾಡಿದ್ದಲ್ಲ, ಅವರೇ ಮಾಡಿದ್ದು. ರೈತರಿಗೆ 800 ಅಡಿ ಭೂಮಿಯನ್ನು ನೀಡುತ್ತೇನೆ ಎಂದು ಭರವಸೆ ಕೊಟ್ಟಿದ್ದೆ ಎಂದು ಅವರೇ ಹೇಳಿದ್ದಾರೆ. ಅವರು ಹೇಳಿದ್ದನ್ನು ನಾವು ಈಗ ಮುಂದುವರೆಸುತ್ತಿದ್ದೇವೆ ಅಷ್ಟೇ" ಎಂದರು.

"ಇಲ್ಲಿ ನಾನು ಹಾಗೂ ಕುಮಾರಸ್ವಾಮಿ ಇಬ್ಬರೂ ಶಾಶ್ವತವಲ್ಲ. ಆದರೆ ನಾವು ತೆಗೆದುಕೊಂಡ ತೀರ್ಮಾನ ಶಾಶ್ವತವಾಗಿ ಉಳಿಯುತ್ತದೆ. ನಾನು ಹಾಗೂ ಅವರು ಇಲ್ಲದೇ ಹೋದರೂ ಯೋಜನೆಯಿಂದ ಮುಂದಿನ ಪೀಳಿಗೆಗೆ ಅನುಕೂಲವಾಗಲಿದೆ. ಮುಂದಿನ ಜನಾಂಗ ನಮ್ಮನ್ನು ನೆನಪಿಸಿಕೊಳ್ಳಲಿದೆ. ನನ್ನ ಕ್ಷೇತ್ರದ ರಸ್ತೆಗಳ ಅಗಲೀಕರಣ ಮಾಡಲಾಗಿದೆ. ಇದಕ್ಕೆ ಎಷ್ಟು ಪರಿಹಾರ ದೊರಕಿದೆ ಎಂದು ದೊಡ್ಡಆಲಹಳ್ಳಿ, ಸಾತನೂರು, ಕನಕಪುರದವರನ್ನು ಕೇಳಿ. ದೊಡ್ಡ ಆಲಹಳ್ಳಿಯಲ್ಲಿ ಅಡಿಗೆ 1,500 ರೂಪಾಯಿ ಪರಿಹಾರ ಕೊಡಿಸಿದ್ದೇನೆ. ನಗರ ಭಾಗದ ಸೌಲಭ್ಯಗಳನ್ನು ಇಲ್ಲಿ ಮಾಡಿಕೊಡಲಾಗಿದೆ. ನಾನು ಮಾಧ್ಯಮಗಳಿಗೆ ಉತ್ತರಿಸುವ ಬದಲು ನೇರವಾಗಿ ಕುಮಾರಸ್ವಾಮಿ ಅವರಿಗೇ ಉತ್ತರ ನೀಡುತ್ತೇನೆ" ಎಂದರು.

### ಬರುವವರನ್ನು ಬೇಡ ಎನ್ನಲು ಆಗುತ್ತದೆಯೇ?*

ರಾಜ್ಯ ರಾಜಕಾರಣಕ್ಕೆ ಬನ್ನಿ ಎಂದು ಜನ ಅಪೇಕ್ಷಿಸುತ್ತಿದ್ದಾರೆ ಎನ್ನುವ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಕೇಳಿದಾಗ "ಬರುವವರನ್ನು ಬೇಡ ಎನ್ನಲು ಆಗುತ್ತದೆಯೇ. ಈಗಲೂ ರಾಜಕಾರಣದಲ್ಲಿ ಇದ್ದಾರೆ ಅಲ್ಲವೇ. ರಾಷ್ಟ್ರ ಏನು, ರಾಜ್ಯ ಏನು ಎಂದು ನನಗೆ ಗೊತ್ತಿಲ್ಲ" ಎಂದರು.

ಅಂತಿಮ ದಿನಗಳನ್ನು ರಾಮನಗರ ಜಿಲ್ಲೆಯಲ್ಲಿಯೇ ನಾನು ಮುಂದುವರೆಸುತ್ತೇನೆ ಎನ್ನುವ ಕುಮಾರಸ್ವಾಮಿ ಹೇಳಿಕೆ ಬಗ್ಗೆ ಕೇಳಿದಾಗ, "ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ. ಅವರಿಗೆ ಶಕ್ತಿ ಕೊಡಲಿ, ಅವರ ಆಸೆ ಏನಿದೆಯೋ ಅದನ್ನು ಕೇಳಿಕೊಳ್ಳಲಿ. ಜನವುಂಟು, ಅವರುಂಟು. ಅದೇ ರೀತಿ ಜನವುಂಟು ನಾವುಂಟು" ಎಂದರು.

### 500 ಕ್ಕೂ ಹೆಚ್ಚು ದೇವಾಲಯಗಳ ನಿರ್ಮಾಣ*

ನಮ್ಮ ಕ್ಷೇತ್ರದಲ್ಲಿ ಒಂದೆರಡು ದೇವಾಲಯ ಮಾತ್ರವಲ್ಲ, ಸುಮಾರು 500ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ಮಾಣ ಮಾಡಲಾಗಿದೆ. ದೊಡ್ಡ ಆಲಹಳ್ಳಿಯಲ್ಲಿ ಏಳೆಂಟು ದೇವಾಲಯಗಳನ್ನು ನಿರ್ಮಿಸಲಾಗಿದೆ. ಪಟ್ಟಲದಮ್ಮ ದೇವಸ್ಥಾನವನ್ನು 2 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ನಮ್ಮ ತಂದೆಯವರು ಅವರ ಕಾಲದಲ್ಲಿ ಶಂಕರೇಶ್ವರ ದೇವಾಲಯವನ್ನು ಕಟ್ಟಿಸಿದರು. ಈ ಮೊದಲಿದ್ದ ರಾಮ ಮಂದಿರದಲ್ಲಿ ಭಜನೆ ಮಾಡಲಾಗುತ್ತಿತ್ತು. ಎಲ್ಲರ ಸಹಕಾರದಿಂದ ಇಡೀ ಕ್ಷೇತ್ರದಲ್ಲಿ ಉತ್ತಮ ದೇವಾಲಯಗಳ ನಿರ್ಮಾಣ ಮಾಡಲಾಗಿದೆ" ಎಂದು ತಿಳಿಸಿದರು. ಎಲ್ಲಾ ಧರ್ಮದವರಿಗೂ ನಾವು ಸಹಾಯ ಮಾಡುತ್ತಿದ್ದೇವೆ. ಮುಸ್ಲಿಮರಿಗೆ ಮಸೀದಿ, ಕ್ರೈಸ್ತರ ಚರ್ಚ್ ನಿರ್ಮಾಣಕ್ಕೆ ಸಹಾಯ ಮಾಡಿದ್ದೇವೆ. ಜೊತೆಗೆ ಎಲ್ಲಾ ಸಮುದಾಯದವರ ಅವಶ್ಯಕತೆ ಸ್ಪಂದಿಸಲಾಗಿದೆ. ರಾಮ ಮಂದಿರವನ್ನು ಒಂದು ಪಂಗಡ ನೋಡಿಕೊಳ್ಳುತ್ತದೆ. ತಿಗಳ ಸಮುದಾಯದವರು ಇನ್ನೊಂದು ದೇವಸ್ಥಾನ ನೋಡಿಕೊಳ್ಳುವರು. ಊರಿನ ಎಲ್ಲರೂ ಸೇರಿ ಊರಿನ ದೇವಸ್ಥಾನ ನೋಡಿಕೊಳ್ಳುವರು" ಎಂದರು. ರಾಮಮಂದಿರ ಶಕ್ತಿ ನೀಡಲಿ ಎನ್ನುವ ಮನವಿಯ ಬಗ್ಗೆ ಕೇಳಿದಾಗ, "ನಾನು ಜೈಲಿಗೆ ಹೋದಾಗ ನನ್ನ ಕ್ಷೇತ್ರದ ಜನ ಬರಿಗಾಲಿನಲ್ಲಿ ಕಾಲಿಗೆ ಚಪ್ಪಲಿ ಇಲ್ಲದೇ ದೆಹಲಿಯವರೆಗೆ ಬಂದಿದ್ದಾರೆ. ನನಗೆ ಜಾಮೀನು ನೀಡಬಾರದು ಎಂದಿತ್ತು. ಆದರೆ ಕ್ಷೇತ್ರದ ಜನರ ಪ್ರಯತ್ನ ಹಾಗೂ ಪ್ರಾರ್ಥನೆಯಿಂದಾಗಿಯೇ 48 ದಿನಗಳಲ್ಲಿ ಜೈಲಿನಿಂದ ಬಿಡುಗಡೆಯಾದೆ. ನನಗೆ ನನ್ನ ಕ್ಷೇತ್ರದ ಜನರೇ ಆಸ್ತಿ. ಈ ಊರಿನಲ್ಲಿದ್ದ ಅನೇಕ ಆಸ್ತಿಯನ್ನು ಜನರಿಗೆ ಬಿಟ್ಟಿದ್ದೇನೆ. ತಾತ, ಮುತ್ತಾತರ ಕಾಲದ ಆಸ್ತಿಗಳನ್ನು ಶಾಲೆ, ಹಾಸ್ಟಲ್ ಗಾಗಿ ದಾನ ಮಾಡಿದ್ದೇನೆ ಎಂದರು.

# ಮಗು ಮಾರಾಟ: ಐವರ ಬಂಧನ

ಚಾಮರಾಜನಗರ: ಆರು ತಿಂಗಳ ಹೆಣ್ಣು ಮಗುವನ್ನು ರೂ.50 ಸಾವಿರಕ್ಕೆ ಮಾರಾಟ ಮಾಡಿದ ಆರೋಪದ ಮೇರೆಗೆ ಪೋಷಕರು ಸೇರಿ ಐವರನ್ನು ಬಂಧಿಸಿ. ಮಗುವನ್ನು ರಕ್ಷಿಸಲಾಗಿದೆ.

ಮಗುವನ್ನು ಮಾರಾಟ ಮಾಡಿದ್ದ ಇಲ್ಲಿನ ರಾಮಸ ಮುದ್ರದ ದಂಪತಿ, ಮಗುವನ್ನು ಪಡೆದಿದ್ದ ಹಾಸನ ಜಿಲ್ಲೆ ಅರಕಲ ಗೂಡು ತಾಲ್ಲೂಕಿನ ಕೊಣನೂ ರಿನ ದಂಪತಿ ಹಾಗೂ ಮೈಸೂ ರಿನ ಚೆಲುವಾಂಬ ಆಸ್ಪತ್ರೆಯ ಡಿ ಗ್ರೂಪ್ ನೌಕರರಾದ ಮಧ್ಯವರ್ತಿ ಶಾಂತಾ ಬಂಧಿ ತರು. 'ಜುಲೈ 26ರಂದು ಜಿಲ್ಲಾಸ್ಪತ್ರೆಯಲ್ಲಿ ಜನಿಸಿದ ಬಳಿಕ ದಂಪತಿ ಬಳಿ ಮಗು ಕಾಣದ ಬಗ್ಗೆ ದೂರು ಬಂದ ಮೇರೆಗೆ ವಿಚಾರಣೆ ನಡೆಸಲಾಯಿತು. ಆಗ ಪ್ರಕರಣ ಬೆಳಕಿಗೆ ಬಂತು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜ್ ತಿಳಿಸಿದರು. 'ಮಗು ಆರೋಗ್ಯದಿಂದಿದ್ದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಶಕ್ಕೆ ಒಪ್ಪಿಸಲಾಗಿದೆ. ಹೆಚ್ಚುವರಿ ಎಸ್ಪಿ ಎಂ. ಎನ್.ಶಶಿಧರ್, ಡಿವೈಎಸ್ಪಿ ಸ್ನೇಹ ರಾಜ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್ಸ್ಪೆಕ್ಟರ್ ಎಂ.ಜಗದೀಶ್, ಪಿಎಸ್ಐ ಆರ್.ಮಂಜುನಾಥ್ ಪಾಲ್ಗೊಂಡಿದ್ದರು.

# ಜೀತ ವಿಮುಕ್ತ: 500 ಕೋಟಿ ಮೀಸಲಿಡಿ

ಮೈಸೂರು: ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರ ಜೀತ ವಿಮುಕ್ತರಿಗೆ ಸಮಗ್ರ ವಸತಿ ಕಲ್ಪಿಸಲುವಲ್ಲಿ ಅನುಸರಿಸುತ್ತಿರುವ ನಿರ್ಲಕ್ಷ್ಯ ಧೋರಣೆ ಕೈಬಿಟ್ಟು ಈ ಬಾರಿಯ ಬಜೆಟ್‌ನಲ್ಲಿ ಪುನರ್ವಸತಿಗೆ 500 ಕೋಟಿ ರೂ. ವಿಶೇಷ ಅನುದಾನ ಮೀಸಲಿಡಬೇಕೆಂದು ರಾಜ್ಯ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟದ ಮಾಜಿ ರಾಜ್ಯಾಧ್ಯಕ್ಷ ಶಿವಣ್ಣ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2000 ಇಸವಿಯಿಂದ 2024 ರವರೆಗೆ ಸುಮಾರು 7 ಸಾವಿರ ಮಂದಿ ಸರ್ಕಾರದಿಂದ ಅಧಿಕೃತವಾಗಿ ಜೀವಮುಕ್ತಿ ಪ್ರಮಾಣ ಪತ್ರ ಪಡೆದಿದ್ದಾರೆ. ಆದರೆ ಜೀತ ಪದ್ಧತಿ ನಿಷೇಧ ಕಾನೂನಿನ ಪ್ರಕಾರ ಇವರಿಗೆ ಸಿಗಬೇಕಾದ ಪರಿಹಾರ, ಮಾಸಾಶನ, ಕಾರ್ಪಸ್ ನಿಧಿ, ನಿವೇಶನ, ವಸತಿ ಲೈನ್ ಮೊದಲಾದ ವಿವಿಧ ಸೌಲಭ್ಯ, ಬ್ಯಾಂಕ್‌ಗಳಿಂದ ಸಿಗಬೇಕಾದ ಸಾಲ ದೊರಕಿಲ್ಲ. ಹೀಗಾಗಿ ಇವರ ಜೀವನ ಪರಿಸ್ಥಿತಿ ಅತಂತ್ರವಾಗಿದೆ. ಮೈಸೂರು ಜಿಲ್ಲೆಯಲ್ಲಿಯೇ ಇದುವರೆಗೆ 1056 ಮಂದಿ ಜೀತ ಮುಕ್ತರಾಗಿದ್ದಾರೆ. ಇದವರಿಗೂ



ಸೂಕ್ತ ಸೌಲಭ್ಯ ಸಿಕ್ಕಿಲ್ಲ ಎಂದು ಬೇಸರಿಸಿದರು. ಪುನರ್ವಸತಿಗಾಗಿ ಈ ಬಾರಿಯ ಬಜೆಟ್‌ನಲಿ 500 ಕೋಟಿ ಅನುದಾನ ಮೀಸಲಿಡಬೇಕು, ಜೀತಮುಕ್ತರ ಕ್ರಿಯಾ ಯೋಜನೆ ಅಡಿಯಲ್ಲಿ ಸಮಗ್ರ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಬೇಕು, ಇವರಿಗೆ ಮಾರಕವಾಗಿರುವ ಈಗಿನ ಎಸ್ ಓಪಿ ರದ್ದು ಪಡಿಸಿ, ಹಳೆಯ ಎಸ್‌ಓಪಿ ಜಾರಿಗೆ ತರಬೇಕು, ಜೀತಮುಕ್ತರು ಸಾಗುವಳಿ ಮಾಡಿಕೊಂಡು ಬರುತ್ತಿರುವ ಯಾವುದೇ ಖರಾಬು, ಗೋಮಾಳ, ಅರಣ್ಯ ಭೂಮಿಗಳ ಮೇಲಿರುವ ನಿಯಮ ಸಡಿಲಿಸಿ ಭೂ ಮಂಜೂರಾತಿ ಮಾಡಬೇಕೆಂದು ಒತ್ತಾಯಿಸಿದರು.ಮಲ್ಲಿಗಮ್ಮ, ಬಸವ ರಾಜು, ಸವಿತಾ, ಲಕ್ಷ್ಮಮ್ಮ, ಮಂಜುನಾಥ್, ಗೋಪಾಲ ಉಪಸ್ಥಿತರಿದ್ದರು.

**ಮಧುಸೂಧನ್ ಅಭಿಮತ । ಭಾರತೀನಗರದ ರಾಯಲ್ ಓಕ್ಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಕ್ರೀಡಾದಿನಾಚರಣೆ**

# ಕ್ರೀಡೆ ಕೇವಲ ಮನರಂಜನೆಗೆ ಮೀಸಲಾಗಬಾರದು

ಭಾರತೀನಗರ: ಕ್ರೀಡೆ ಕೇವಲ ಮನರಂಜನೆಗೆ ಮೀಸಲಾಗಬಾರದು. ಕ್ರೀಡೆಯನ್ನು ಗೌರವಿಸಬೇಕೆಂದು ಕಡಿಲುವಾಗಿಲು ದೈಹಿಕ ಶಿಕ್ಷಣ ಶಿಕ್ಷಕ ಮಧುಸೂಧನ್ ತಿಳಿಸಿದರು.

ಭಾರತೀನಗರದ ರಾಯಲ್ ಓಕ್ಸ್ ಪಬ್ಲಿಕ್ ಸ್ಕೂಲ್‌ನಲ್ಲಿ ಆಯೋಜಿಸಿದ್ದ ಕ್ರೀಡಾದಿನಾಚರಣೆ 2026 ರ ಕಾರ್ಯಕ್ರಮದಲ್ಲಿ ಕ್ರೀಡಾಜ್ಯೋತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ಜೀವನದಲ್ಲಿ ಏಳು–ಬೀಳು, ಸೋಲು–ಗೆಲುವು ಸಹಜವಾಗಿ ಬರುವಂತವು. ಇವುಗಳನ್ನು ನಾವು ಛಲದಿಂದ ಸ್ವೀಕರಿಸಬೇಕು. ಅಲ್ಲದೆ ನಿಕರವಾದ ಗುರಿಯನ್ನು ಇಟ್ಟುಕೊಂಡು ಮುಂದುವರೆದಲ್ಲಿ ಯಶಸ್ಸುಗಳಿಸಲು ಸಾಧ್ಯ. ಹಾಗಾಗಿ ಯುವಕರು ಗುರಿಯ ಬೆನ್ನು ಬೀಳಬೇಕೆಂದು ಕಿವಿ ಮಾತು ಹೇಳಿದರು.

ಜಿ.ಪಂ ಮಾಜಿ ಸದಸ್ಯ ಎ.ಎಸ್.ರಾಜೀವ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ,ದೈಹಿಕವಾಗಿ ಆರೋಗ್ಯವಾಗಿರಬೇಕಾದರೆ



ಕ್ರೀಡೆಯು ಅತ್ಯವಶ್ಯಕವಾಗಿದೆ. ಗ್ರಾಮೀಣ ಪ್ರದೇಶದ ಕ್ರೀಡಾಪಟುಗಳು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ರಾಷ್ಟ್ರಮಟ್ಟದವರೆವಿಗೂ ಹೋಗಿರುವ ಉದಾಹರಣೆಗಳು ಸಾಕಷ್ಟಿವೆ. ಹಾಗಾಗಿ ಇಂದಿನ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಹೆಚ್ಚು ಭಾಗವಹಿಸುವ ಮೂಲಕ ಸಾಧನೆಯ ಪಟ್ಟಿಯಲ್ಲಿ ಸೇರಿಕೊಳ್ಳಬೇಕು. ಆಗ ಮಾತ್ರ ಶಾಲೆಗೆ ಮತ್ತು ತಮ್ಮ ಗ್ರಾಮಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂದರು.

ಪರಿಸರ ಜಾಗೃತಿ ವೇದಿಕೆಯ ತಾಲ್ಲೂಕು ಅಧ್ಯಕ್ಷ ಅಣ್ಣೂರು ಸತೀಶ್ ಮಾತನಾಡಿ, ಕ್ರೀಡೆಗೆ ಉತ್ತೇಜನ ನೀಡಲು ಭಾರತದಲ್ಲಿ ಪ್ರತೀ ವರ್ಷವು ಆ.29 ರಂದು ಪ್ರತಿಷ್ಠಿತ ಹಾಕಿ ಪ್ಲೇಯರ್ ಮೇಜರ್ ಧ್ಯಾನ್‌ಚಂದ್ ಅವರ ಜನ್ಮದಿನಾಚರಣೆ ಅಂಗವಾಗಿ ಕ್ರೀಡಾದಿನಾಚರಣೆಯನ್ನು ಆಚರಿಸುತ್ತಾ ಬರಲಾಗುತ್ತಿದೆ. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದವರು ಕ್ರೀಡಾಕೋಟಾದಲ್ಲಿ ಉನ್ನತ ಉದ್ಯೋಗವನ್ನು ಅಲಂಕರಿಸಬಹುದು ಎಂದರು.

ಶಾಲೆಯ ಹೆಸರಿಗೆ ತಕ್ಕಂತೆ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಇದು ಸಾರ್ವನಿಕರ ವಲಯದಲ್ಲಿ ಹೆಚ್ಚು ಸದ್ದುಮಾಡುತ್ತಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಪರಿಸರ ಜಾಗೃತಿ ವೇದಿಕೆಯ ತಾಲ್ಲೂಕು ಅಧ್ಯಕ್ಷ ಅಣ್ಣೂರು ಸತೀಶ್, ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಮಧುಸೂಧನ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ವಿವಿಧ ಕ್ರೀಡೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಯಲ್ ಓಕ್ಸ್ ಶಾಲೆಯ ಅಧ್ಯಕ್ಷ ಡಿ.ಆರ್.ಸುಮನ್, ಗೌರವಾಧ್ಯಕ್ಷ ಎಸ್. ರಾಜಣ್ಣ, ಮುಖ್ಯಶಿಕ್ಷಕಿ ಡಿ.ಎಂ.ನಂದಿನಿ, ನಿರ್ದೇಶಕ ಮಂಜು, ಮುಖಂಡರಾದ ಕ್ಯಾತಘಟ್ಟದ ಗಿರೀಶ್, ಶಿಕ್ಷಕರಾದ ಮಧುಸೂಧನ್, ದೈಹಿಕ ಶಿಕ್ಷಣ ಶಿಕ್ಷಕ ಬಸವರಾಜು, ಅಶ್ವಿನಿ, ಶಿಲ್ಪ, ಮಲ್ಲಿಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗುಂಪುಮನೆ ಯೋಜನೆಯಡಿ ಆಟೋ ಚಾಲಕರಿಗೂ ಮನೆ ನೀಡಲು ಒತ್ತಾಯ

ಮೈಸೂರು: ಮೈಸೂರಿನ ಕೃಷ್ಣ ಬುಲೇವಾರ್ಡ್ ರಸ್ತೆಯಲ್ಲಿರುವ ನ್ಯಾಯಲಯದ ಮುಂಭಾಗವಿರುವ ಉದ್ಯಾನವನದಲ್ಲಿ ಗುಂಪುಮನೆ ಯೋಜನೆಯಡಿ ಆಟೋ ಚಾಲಕರಿಗೆ ಮನೆಗಳನ್ನು ನೀಡಬೇಕು ಎಂಬ ಬೇಡಿಕೆ ಸೇರಿದಂತೆ ತಮ್ಮ ಹಲವಾರು ಬೇಡಿಕೆಗಳನ್ನು ಈಡೇರಿಸುವುದರೊಂದಿಗೆ ಆಟೋ ಚಾಲಕರ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ಮೈಸೂರಿನ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕ ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಭೆ ನಡೆಸಿ ಚರ್ಚಿಸಲಾಯಿತು.

ಸಭೆಯಲ್ಲಿ ಸಂಘದ ಅಧ್ಯಕ್ಷ ಎಂ.ವಿ.ಶ್ರೀನಿವಾಸ್ ಮಿತ್ರ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಆಟೋ ಚಾಲಕರ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಸಾಕಷ್ಟು ಬಾರಿ ಪ್ರಯತ್ನ ಮಾಡಲಾಗಿತ್ತು. ಇತ್ತೀಚೆಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಕೇಂದ್ರ ಸಾರಿಗೆ ಸಚಿವರು, ಕಂದಾಯ ಸಚಿವರು, ಹಣಕಾಸು ಸಚಿವರಿಗೆ ಪತ್ರ ಬರೆಯಲಾಗಿತ್ತು. ಅದಕ್ಕೆ ಈಗ ಉತ್ತರ ಬಂದಿದ್ದು, ರಾಜ್ಯದ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಲು ಸದ್ಯದಲ್ಲಿಯೇ ಅವಕಾಶ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಸಭೆ ನಡೆಸಲಾಗುತ್ತಿದೆ ಎಂದರು.

ಸಭೆಯಲ್ಲಿ ಪ್ರಮುಖವಾಗಿ ಮೈಸೂರಿನಲ್ಲಿ 25 ಸಾವಿರಕ್ಕೂ ಅಧಿಕ ಆಟೋಗಳಿವೆ. ಅವುಗಳಿಗೆ ತಕ್ಕಂತೆ ತಾತ್ಕಾಲಿಕ ರಹದಾರಿ ನೀಡಬೇಕು. ರಸ್ತೆಗಳು ಅಗಲೀಕರಣವಾಗಬೇಕಿದೆ. ಸುಸಜ್ಜಿತ ಆಟೋ ನಿಲ್ದಾಣಗಳ ಅವಕಶ್ಯಕತೆ ಇದೆ. ಗುಂಪು ಮನೆ ಯೋಜನೆ ಅಡಿ ಆಟೋ ಚಾಲಕರಿಗೂ ಮನೆ ನೀಡಬೇಕು. ಆಂಧ್ರ ಪ್ರದೇಶದಲ್ಲಿ ಸೇವಾ ಯೋಜನೆ ಅಡಿ ಆಟೋ ಚಾಲಕರಿಗೆ 15 ಸಾವಿರ ರೂ. ನೀಡುತ್ತಿರುವ ಹಾಗೇ ಕರ್ನಾಟಕದಲ್ಲಿಯೂ ನೀಡಬೇಕು ಎಂದು ತಿಳಿಸಿದರು. ಆಟೋ ಚಾಲಕರ ಆರ್ಥಿಕ ಸ್ಥಿತಿ ದುಸ್ಥಿರವಾಗಿದ್ದು, ಅವರಿಗೆ ಹಾಗೂ ಅವರ ಕುಟುಂಬಸ್ಥರಿಗೆ ಆರೋಗ್ಯ ಸಮಸ್ಯೆ ಎದುರಾದಲ್ಲಿ ವಿಮೆ ನೀಡಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುಂತೆ ವಿದ್ಯಾರ್ಥಿ ವೇತನ ನೀಡಬೇಕು ಎಂಬ ಮುಂತಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡುತ್ತೇವೆ ಎಂದರು. ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಪಿ.ಸುನೀಲ್ ಕುಮಾರ್, ಜಿ.ಪ್ರಕಾಶ್, ಆರ್.ಸುರೇಶ್, ಸುಲೇಮಾನ್, ಗೋವಿಂದರಾಜು, ದಿವಾಕರ್, ಜಗದೀಶ್ ಪಂಚಮುಖಿ, ಲೋಕೇಶ್, ಕುಮಾರ್, ಸೆಲ್ವರಾಜು, ಸುಧನ್ ಮತ್ತಿತರರು ಉಪಸ್ಥಿತರಿದ್ದರು.

# ಜ.29ರಿಂದ ವೀರಶೈವ ಲಿಂಗಾಯತ ಜಾಗತಿಕ ವಾಣಿಜ್ಯ ಸಮಾವೇಶ

ಮೈಸೂರು: ಅಂತರ ರಾಷ್ಟ್ರೀಯ ಲಿಂಗಾಯತ ಯುವ ವೇದಿಕೆ ವತಿಯಿಂದ ಜ.29 ರಿಂದ ಫೆ. 1 ರವರೆಗೆ ಬೆಂಗಳೂರು ಅರಮನೆ ಮೈದಾನದ ವೈಟ್ ಪೆಟಲ್ಸ್ ಆವರಣದಲ್ಲಿ ವೀರಶೈವ ಲಿಂಗಾಯತ ಜಾಗತಿಕ ವಾಣಿಜ್ಯ ಸಮಾವೇಶ ಆಯೋಜಿಸಲಾಗಿದೆ ಎಂದು ಮೈಸೂರು ಘಟಕದ ಅಧ್ಯಕ್ಷ ಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶವನ್ನು ಜ.29ರಂದು ಸಂಜೆ 4.30ಕ್ಕೆ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಉದ್ಘಾಟಿಸುವರು. ಸಚಿವರಾದ ಎಂ.ಬಿ. ಪಾಟೀಲ್, ಈಶ್ವರ ಖಂಡ್ರೆ, ಶರಣ ಬಸಪ್ಪ ದರ್ಶನಾಪುರ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಉದ್ಯಮಿ ವಿಜಯ ಸಂಕೇಶ್ವರ, ಬಿ.ಎಂ.ಜಯಶಂಕರ್, ಡಾ. ಶರಣ್ ಪಾಟೀಲ್, ಬಾಲಚಂದ್ರಸಿಂಗ್ ರಾವ್ ರಾಣೆ, ರಬೀಂದ್ರನಾಥ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಫೆ.1 ರಂದು ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಬಸವತತ್ವ ಪೀಠದ ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್, ಶಾಸಕ ವಿಜಯಾನಂದ ಎಸ್.ಕಾಶಪ್ಪನವರ್, ನಿವೃತ್ತ ಪೊಲೀಸ್ ಅಧಿಕಾರಿ ಶಂಕರ್ ಬಿದರಿ, ಶಾಸಕ ಮುರುಗೇಶ್ ನಿರಾಣಿ, ನವೀನ್, ರಾಣಿ ಸತೀಶ್, ಕೆ.ಎಸ್.ನವೀನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಕಳೆದ ಬಾರಿ ಮೈಸೂರಿನಲ್ಲಿ ಸಮಾವೇಶ ನಡೆದು ಸುಮಾರು 130 ಕೋಟಿ ರೂ.ಗಳಷ್ಟು ವ್ಯವಹಾರ ನಡೆದಿದೆ. ಸಮುದಾಯದ ಉದ್ಯಮಿಗಳಿಗೆ ವೇದಿಕೆ, ಹೊಸ ಉದ್ಯಮಿಗಳಿಗೆ ಮಾರ್ಗದರ್ಶನ, ಗ್ಲೋಬಲ್ ನೆಟ್ವರ್ಕಿಂಗ್, ಸಾಮಾಜಿಕ, ಆರ್ಥಿಕ ವೇದಿಕೆ, ಸ್ಟಾರ್ಟ್‌ಅಪ್‌ಗಳಿಗೆ ಮಾರ್ಗದರ್ಶನ, ಕೈಗಾರಿಕೆ ಮತ್ತು ವ್ಯಾಪಾರ ಕ್ಷೇತ್ರಗಳಿಗೆ ವಿಶೇಷ ಒತ್ತು ನೀಡುವುದು ಇದರ ಉದ್ದೇಶವಾಗಿದೆ. ಸುಮಾರು 260 ಮಳಿಗೆಗಳು ಇರಲಿವೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹೆಚ್.ಎಸ್. ವೀರೇಶ್, ಎಂ.ಮಹೇಶ್, ತೀರ್ಥಾಸ್ವಾಮಿ, ಸಂತೋಷ್, ಕೃಷ್ಣಮೂರ್ತಿ ಉಪಸ್ಥಿತರಿದ್ದರು.

### ಮಲೆ ಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆ,

# ಪಾದಯಾತ್ರೆ, ದ್ವಿಚಕ್ರ ವಾಹನದಲ್ಲಿ ತೆರಳಲು ಬೆಳಿಗ್ಗೆ 7ರಿಂದ ಸಂಜೆ 4 ಗಂಟೆಯವರೆಗೆ ಮಾತ್ರ ಅವಕಾಶ

**ಜಿಲ್ಲಾಧಿಕಾರಿ ಶ್ರೀರೂಪ**

ಚಾಮರಾಜನಗರ, ಜಿಲ್ಲೆಯ ಪ್ರಸಿದ್ಧ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ, ಕಾಲ್ನಡಿಗೆ ಹಾಗೂ ದ್ವಿಚಕ್ರ ವಾಹನ ಸಂಚಾರವನ್ನು ಬೆಳಿಗ್ಗೆ 7 ರಿಂದ ಸಂಜೆ 4 ಗಂಟೆಯವರೆಗೆ ಮಾತ್ರ ಅನುಮತಿಸಿದೆ.



ನಂತರದ ಅವಧಿಯಲ್ಲಿ ಪಾದಯಾತ್ರೆ, ಕಾಲ್ನಡಿಗೆ, ದ್ವಿಚಕ್ರ ವಾಹನಗಳಲ್ಲಿ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವುದನ್ನು ನಿರ್ಬಂಧಿಸಲಾಗಿದೆ. ಈ ನಿರ್ಬಂಧ ಆದೇಶವು ಜನವರಿ 25 ರಿಂದಲೂ ಮುಂದುವರೆಯಲಿದೆ.

ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟು ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಭಕ್ತಾದಿಗಳು ಹಾಗೂ ಸಾರ್ವಜನಿಕರು ಜಿಲ್ಲಾಡಳಿತದೊಂದಿಗೆ ಸಹಕರಿಸಿ, ನಿರ್ಬಂಧಿತ ಅವಧಿಯಲ್ಲಿ ಕಾಲ್ನಡಿಗೆ, ಪಾದಯಾತ್ರೆ, ದ್ವಿಚಕ್ರ ವಾಹನಗಳಲ್ಲಿ ಪ್ರಯಾಣಿಸಬಾರದೆಂದು ಜಿಲ್ಲಾಧಿಕಾರಿ ಶ್ರೀರೂಪ ಮನವಿ ಮಾಡಿಕೊಂಡಿದ್ದಾರೆ.

# ಪೊಲೀಸ್ ಇಲಾಖೆಯಿಂದ ಬೈಕ್‌ಯಾರ್ಲಿ




ಚಾಮರಾಜನಗರ:ಜಿಲ್ಲಾ ಪೊಲೀಸ್ ,ಸಂಚಾರ ಪೊಲೀಸ್ ಠಾಣೆ ವತಿಯಿಂದ ರಸ್ತೆ ಸುರಕ್ಷತ ಸಪ್ತಾಹ 2026 ಪ್ರಯುಕ್ತ ನಗರದ ಪ್ರಮುಖ ರಸ್ತೆಗಳಲ್ಲಿ ಬೈಕ್ ಯಾರ್ಲಿ ನಡೆಯಿತು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಿಂದ ಆರಂಭವಾದ ಬೈಕ್ ಯಾರ್ಲಿ ನಗರದ ವಿವಿಧ ರಸ್ತೆಗಳ ಮೂಲಕ ಸಂಚರಿಸಿ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗವೇ ಮುಕ್ತಾಯವಾಯಿತು. ಚಾಲನೆ ನೀಡಿದಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಮಾತನಾಡಿ, ಹೆಲ್ಮೆಟ್ ಧರಿಸಿ ಜೀವಪಾಯದಿಂದ ರಕ್ಷಣೆ ಪಡೆಯಿರಿ. ವಾಹನ ಚಾಲನೆಯಲ್ಲಿ ಮೊಬೈಲ್ ಬಳಕೆ ಬೇಡ.ಕಾರು ಚಾಲನೆ ಮಾಡುವಾಗ ತಪ್ಪದೆ ಸೀಟ್‌ಬೆಲ್ಟ್ ಧರಿಸಿ. ಅಪ್ರಾಪ್ತ ವಯಸ್ಕರು ವಾಹನ ಚಲಾಯಿಸುವುದು ಶಿಕ್ಷಾರ್ಹ ಅಪರಾಧ ಮದ್ಯಪಾನ ಮಾಡಿ ವಾಹನ ಚಲಾಯಿಸಿದರೆ ಪ್ರಾಣಕ್ಕೆ ಕುತ್ತು.ತ್ರಿಬಲ್ ರೈಡಿಂಗ್ ಮಾಡುವುದು ಕಾನೂನು ಬಾಹಿರವಾಗಿದೆ ಆಗಾಗಿ ಪ್ರತಿಯೊಬ್ಬರೂ ರಸ್ತೆ ಸಂಚಾರ ನಿಯಮ ಪಾಲಿಸುವ ಮೂಲಕ ಅಪಘಾತ ಮುಕ್ತ ಸಮಾಜಕ್ಕಾಗಿ ಪೊಲೀಸರೊಂದಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.ಕಾರ್ಯಕ್ರಮದಲ್ಲಿ ಎಎಸ್ ಪಿ ಶಶಿಧರ್, ಡಿವೈಎಸ್ ಪಿ ಸ್ನೇಹರಾಜು, ಇನ್ಸ್ ಪೆಕ್ಟರ್ ಗಳಾದ ಶೇಷಾದ್ರಿ, ಜಗದೀಶ್, ನವೀನ್ ಪೊಲಿಸರು ಭಾಗವಹಿಸಿದ್ದರು.

# ಭಗವದ್ಗೀತ ವಿತರಣೆ



ಮಂಡ್ಯ: ಭಾರತಿ ಕಲ್ಚರಲ್ ಫೌಂಡೇಶನ್ ವತಿಯಿಂದ ವಿದ್ಯಾರ್ಥಿಗಳಿಗಾಗಿ ಭಗವದ್ಗೀತಾ ವಿತರಣೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಜೆಡಿಎಸ್ ಯುವ ಮುಖಂಡರಾದ ಶ್ರೀ ಸುರೇಶ್ ಅವರು ಉಪಸ್ಥಿತರಿದ್ದು, ಭಗವದ್ಗೀತೆಯ ಮಹತ್ವ ಹಾಗೂ ಜೀವನದಲ್ಲಿ ಅದರ ಉಪಯೋಗ ಕುರಿತು ಪ್ರೇರಣಾದಾಯಕವಾಗಿ ಮಾತನಾಡಿದರು. ಶ್ರೀ ಮೋಹನ್ ಅವರು ಸತ್ಕರ್ಮಗಳು ಮತ್ತು ಸನ್ಮಾರ್ಗದ ಕುರಿತು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಸ್. ಅನಂತ್ ಶೇಖರ್ ಅವರು ಸಂಸ್ಥೆಯಲ್ಲಿ ನಡೆಯುತ್ತಿರುವ ಭಗವದ್ಗೀತಾ ತರಗತಿಗಳು ಹಾಗೂ ಸಂಸ್ಕೃತಿ ಸಮೃದ್ಧಿಯ ದೃಷ್ಟಿಕೋನವನ್ನು ವಿವರಿಸಿದರು.

ಸಂಸ್ಥೆಯ ಸ್ಥಾಪಕಿ ಶ್ರೀಮತಿ ವಿದುಷಿ ಸುಶ್ಮಿತಾ ಎಂ.ಎನ್. ಹಾಗೂ ಶ್ರೀ ಅನಂತ್ ಶೇಖರ್ ಅವರು ಅತಿಥಿಗಳನ್ನು ಸನ್ಮಾನಿಸಿ, ನಂತರ ಭಗವದ್ಗೀತಾ ವಿತರಣೆ ನಡೆಯಿತು. ಕಾರ್ಯಕ್ರಮದ ಅಂಗವಾಗಿ ಶ್ರೀ ಕೃಷ್ಣನಿಗೆ ಪುಷ್ಪಾರ್ಪಣೆ, ಸಸಿಗಳಿಗೆ ನೀರಾವರಿ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ವಿದ್ಯಾರ್ಥಿಗಳು ಹಾಗೂ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದರು.

# ತಂದೆಯ ಹೆಸರಿನಲ್ಲಿ ಮಕ್ಕಳಿಂದ ಜನೋಪಯೋಗಿ ಕಾರ್ಯ ಮಾದರಿ

## ಶಾಸಕ ಎಆರ್‌ಕೆ ಹೇಳಿಕೆ । ಕಣ್ಣಿನ ತಪಾಸಣಾ ಶಿಬಿರ, ಪ್ರತಿಭಾ ಪುರಸ್ಕಾರ

ಚಾಮರಾಜನಗರ, ತಂದೆಯ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿಕೊಂಡು ಜನೋಪಯೋಗಿ ಕಾರ್ಯಗಳನ್ನು ಮಾಡುತ್ತಿರುವ ಮಕ್ಕಳು ಇತರರಿಗೆ ಮಾದರಿ ಆಗಿದ್ದಾರೆ ಎಂದು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ತಾಲೂಕಿನ ದೊಡ್ಡರಾಯಪೇಟೆಯ ಸರ್ಕಾರಿ ಪ್ರೌಢಶಾಲಾವರಣದಲ್ಲಿಎ.ಆರ್.ಎಸ್.ಟ್ರಸ್ಟ್, ಕಾವೇರಿ ಡೆಂಟಲ್ ಓರಲ್ ಮೆಡಿಸನ್ ಕ್ಲಿನಿಕ್ ವತಿಯಿಂದ ದಿ.ಎ.ರಂಗಸ್ವಾಮಿ ಮಾಸ್ಟರ್ ರವರ ಐದನೇ ವರ್ಷದ ಪುಣ್ಯಸ್ಮರಣಾರ್ಥ ಅಂಗವಾಗಿ ನಡೆದ ಉಚಿತ ಕಣ್ಣಿನ ಪಾಸಣಾ ಶಿಬಿರ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು.



ದೊಡ್ಡರಾಯಪೇಟೆಯ ದಿ.ಎ.ರಂಗಸ್ವಾಮಿ ಮಾಸ್ಟರ್ ಅವರು ಒಬ್ಬ ಉತ್ತಮ ಶಿಕ್ಷಕರಾಗಿ ಸೇವೆ ಸಲ್ಲಿಸಿ ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಿದರು. ಜೊತೆಗೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರು. ಅವರು ಕಾಲವಾದ ನಂತರ ಅವರ ಮಕ್ಕಳಾದ ಡಾ.ಆರ್.ಕೃಪಾಶಂಕರ್, ಆರ್.ಅರುಣ್‌ಕುಮಾರ್, ಆರ್.ಅಜಿತ್‌ಕುಮಾರ್ ತಂದೆ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿಕೊಂಡು ಕಳೆದ 5 ವರ್ಷಗಳಿಂದ ತಾಯಿಯ ಸಮ್ಮುಖದಲ್ಲಿ ತಾಲೂಕಿನಲ್ಲಿ ಸಮಾಜಮುಖಿ ಸೇವಾ ಕಾರ್ಯಗಳನ್ನು ಮಾಡುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಇಂದು ಕೂಡ ಗ್ರಾಮದಲ್ಲಿ ಉಚಿತ ಕಣ್ಣಿನ ತಪಾಸಣೆ ಶಿಬಿರ, ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡಿರುವುದು ಒಂದು ಅರ್ಥಪೂರ್ಣ ಕಾರ್ಯಕ್ರಮವಾಗಿದೆ ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ಸರ್ವರಿಗೂ ಮೀಸಲಾತಿ ಕಲ್ಪಿಸಿಕೊಡುವ ಮೂಲಕ ಸಮಾನತೆ ಕೊಟ್ಟಿದ್ದಾರೆ ಎಂದರು.ಟ್ರಸ್ಟ್ ಕಾರ್ಯದರ್ಶಿ ಆರ್. ಅರುಣ್ ಕುಮಾರ್ ಮಾತನಾಡಿ, ನಮ್ಮ ತಂದೆಯವರಾದ ದಿ.ಎ.ರಂಗಸ್ವಾಮಿ ಮಾಸ್ಟರ್ ಅವರ ಸ್ಮರಣಾರ್ಥವಾಗಿ

ಸಮಾಜಮುಖಿ ಸೇವೆ ಮಾಡುವ ಸಲುವಾಗಿ ತಂದೆಯ ಹೆಸರಿನಲ್ಲಿ ಎ.ಆರ್.ಎಸ್.ಟ್ರಸ್ಟ್ ಸ್ಥಾಪಿಸಿಕೊಂಡು ಕಳೆದ 4 ವರ್ಷಗಳಿಂದ ಸಮಾಜಮುಖಿ ಸೇವಾ ಕಾರ್ಯಗಳಾದ ಉಚಿತ ಕಣ್ಣಿನ ತಪಾಸಣಾ ಶಿಬಿರ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಂಡು ಬರಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷೆ ಹೆಚ್.ಕೆ.ಯಶೋಧಮ್ಮ, ಖಜಾಂಚಿ ಆರ್. ಅಜಿತ್‌ಕುಮಾರ್, ಉಪಾಧ್ಯಕ್ಷ ಮಧುಸುಧಾ, ನಿರ್ದೇಶಕಿ ಮಂಗಳ, ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ನಾಗರತ್ನ, ಎಪಿಎಂಸಿ ನಿರ್ದೇಶಕ ಆಲೂರುಪ್ರದೀಪ್, ಪಿಆರ್‌ಓ ವಿಜಯಕುಮಾರ್, ಯಜಮಾನರಾದ ಮಹದೇವಯ್ಯ, ಮಹದೇವ ಸ್ವಾಮಿ, ರಾಜಣ್ಣ ಅಶೋಕ, ಅಂಬೇಡ್ಕರ್ ಯುವಕರ ಸಂಘದ ಅಧ್ಯಕ್ಷ ಪ್ರತಾಪ್, ಮುಖಂಡರಾದ ರವಿಗೌಡ, ನಾಗರಾಜು, ಪವನ್ಗ್ರಾ.ಪಂ.ಸದಸ್ಯ ಸಿದ್ದರಾಜು, ಶಿಕ್ಷಕ ನಟರಾಜು, ಆಟೋ ರಾಜು, ಶಿವಶಂಕರ, ಇತರರು ಹಾಜರಿದ್ದರು.

### ಪ್ರತಿಭಾ ಪುರಸ್ಕಾರ

**ಕಳೆದ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಾದ ಮನೋಜ್‌ಕುಮಾರ್, ಲೇಖನ್ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ ಎ.ಆರ್. ಎಸ್ ಟ್ರಸ್ಟ್ ಅಧ್ಯಕ್ಷ ಡಾ.ಆರ್.ಕೃಪಾಶಂಕರ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ಎಂ. ಕೆ.ಲೋಹಿತ್‌ಕುಮಾರ್, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಸಹಾಯಕ ನಿರ್ದೇಶಕ ಡಾ. ಜಿ.ನಟರಾಜು ಟ್ರಸ್ಟ್‌ನ ಕಿರು ಹೊತ್ತಿಗೆ ಬಿಡುಗಡೆ ಮಾಡಿದರು.**

# ವಿಶೇಷ ಮಕ್ಕಳ ಶಾಲೆಗಳ ಬೇಡಿಕೆ ಈಡೇರಿಸಲು 28ರಂದು ಹೋರಾಟ

ಬೆಂಗಳೂರು,ಜ.25: ಕಳೆದ ಹಲವು ವರ್ಷಗಳಿಂದ ಮಾನಸಿಕ ತೊಂದರೆ, ಶ್ರವಣ ದೋಷ, ಸೆಲೆಬ್ರಲ್ ಪಾಲ್ಸಿ ಮತ್ತಿತರೆ ಸಮಸ್ಯೆಗಳು ಹಾಗೂ ದೃಷ್ಟಿ ವೈಕಲ್ಯ ಹೊಂದಿರುವ ಮಕ್ಕಳಿಗೆ ಬೋಧಿಸುತ್ತಿರುವ ಕರ್ನಾಟಕ ರಾಜ್ಯ ಶಿಕ್ಷಕರು ಮತ್ತು ಶಿಕ್ಷಕೇತರ ಸಂಘದ ಸದಸ್ಯರು ದಶಕಗಳಿಂದ ನೆನಗುದಿಗೆ ಬಿದ್ದಿರುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಈ ತಿಂಗಳ 28ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆ.ಎಸ್. ಎಸ್.ಎಸ್.ಎ ಕಾರ್ಯದರ್ಶಿ ವಸಂತಕುಮಾರ್ ಶೆಟ್ಟಿ, ವಿಶೇಷ ಶಿಕ್ಷಕರು ಮತ್ತು ಶಿಕ್ಷಕೇತರ ಸಂಘದ ಬೇಡಿಕೆಗಳನ್ನು ಈಡೇರಿಸಿಲ್ಲ. ಇದನ್ನು ಪ್ರತಿಭಟಿಸಿ, ಸಂಘದ ಸದಸ್ಯರಲ್ಲದೇ ವಿಶೇಷ ಚೇತನ ಮಕ್ಕಳು, ಪಾಲಕರೂ ಸಹ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳ ಚುನಾಯಿತ ಪ್ರತಿನಿಧಿಗಳು ಕಳೆದ ವರ್ಷದ ಮಾರ್ಚ್‌ನಲ್ಲಿ ತಮ್ಮ ವೇತನ ಹಾಗೂ ಭತ್ಯೆಗಳನ್ನು ಶೇ 100ರಷ್ಟು ಹೆಚ್ಚಿಸಿಕೊಂಡಿದ್ದಾರೆ. ಆದರೆ ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆಯು 2014?15ರಲ್ಲಿ ನಿಗದಿಪಡಿಸಿದ ಅನುದಾನ ಮೊತ್ತವನ್ನು ಹೆಚ್ಚಿಸುವ ಯಾವುದೇ ಕ್ರಮ ಕೈಗೊಂಡಿಲ್ಲ.

ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುವ ವಿಶೇಷ ಶಾಲೆಗಳು ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ರೂ.9,000 ಅನುದಾನಕ್ಕೆ ಅರ್ಹವಾಗಿವೆ. ಈ ಅನುದಾನವನ್ನು ವರ್ಷದಲ್ಲಿ ಕೇವಲ 10 ತಿಂಗಳುಗಳಷ್ಟೇ ನೀಡಲಾಗುತ್ತದೆ ಎಂದರು.

ಜೀವನ ವೆಚ್ಚ ದಿನೇದಿನೇ ಏರುತ್ತಿರುವ ಹಿನ್ನೆಲೆಯಲ್ಲಿ ಎನ್ಜಿಒಗಳಿಗೆ ವಿಶೇಷ ಶಾಲೆಗಳನ್ನು ನಿರ್ವಹಿಸುವುದು ಕಷ್ಟಕರವಾಗಿದೆ. ಸರ್ಕಾರದ ಅನುದಾನಿತ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರು ಹಾಗೂ ಎನ್ಜಿಒಗಳ ಮೂಲಕ ನಡೆಸಲಾಗುವ ವಿಶೇಷ ಶಾಲೆಗಳ ಶಿಕ್ಷಕರ ವೇತನದಲ್ಲಿ ಭಾರೀ ವ್ಯತ್ಯಾಸವಿರುವುದರಿಂದ ಹೆಚ್ಚಿನ ಶಿಕ್ಷಕರು ಈ ಶಾಲೆಗಳಿಗೆ ಸೇರ್ಪಡೆಯಾಗಲು ಆಸಕ್ತಿ ತೋರಿಸುತ್ತಿಲ್ಲ. ಸರ್ಕಾರದ ಅನುದಾನಿತ ವಿಶೇಷ ಶಾಲೆಯ ಶಿಕ್ಷಕರು ತಿಂಗಳಿಗೆ ರೂ.60,000 ರಿಂದ ರೂ.80,000ರವರೆಗೆ ವೇತನ ಪಡೆಯುತ್ತಿದ್ದರೆ, ಎನ್ಜಿಒ ನಡೆಸುತ್ತಿರುವ ವಿಶೇಷ ಶಾಲೆಗಳ ಶಿಕ್ಷಕರಿಗೆ ತಿಂಗಳಿಗೆ ಕೇವಲ ರೂ.20,250 ಗೌರವಧನ ಮಾತ್ರ ಲಭಿಸುತ್ತಿದೆ. ಸುಮಾರು ರೂ. 40,000ರಷ್ಟು ವೇತನ ವ್ಯತ್ಯಾಸ ಇರುವ ಕಾರಣದಿಂದ ಎನ್ಜಿಒ ನಿರ್ವಹಿತ ವಿಶೇಷ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರು ಸೇರುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಅನುದಾನ ಹೆಚ್ಚಿಸುವ ಅಗತ್ಯತೆ ಕುರಿತು ಅಧಿಕಾರಿಗಳಿಗೆ ಮನವರಿಕೆ ಮಾಡಲು ನಡೆಸಿದ ಪ್ರಯತ್ನಗಳು ಸಫಲವಾಗಿಲ್. "ವಿಧಾನಸಭಾ ಸ್ಪೀಕರ್ ಯು.ಟಿ. ಖಾದರ್ ಅವರು ಅನುದಾನವನ್ನು ಶೇ.40ರಷ್ಟು ಹೆಚ್ಚಿಸುವುದಾಗಿ ನಮಗೆ ಈ ಹಿಂದೆ ಭರವಸೆ ನೀಡಿದ್ದರು. ಕಳೆದ ವರ್ಷ ನಾವು ಅವರನ್ನು ಭೇಟಿ ಮಾಡಿದ್ದೆವು. ಆ ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಂಗವಿಕಲರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರೂ ಉಪಸ್ಥಿತರಿದ್ದರು. ಒಂದು ವರ್ಷಕ್ಕೂ ಹೆಚ್ಚು ಕಾಲ ಒಳ್ಳೆಯ ಸುದ್ದಿ ನಿರೀಕ್ಷಿಸಿದ್ದೆವು, ಆದರೆ ಫಲ ದೊರೆತಿಲ್ಲ. ಬೇರೆ ಆಯ್ಕೆ ಇಲ್ಲದೇ ನಮ್ಮ ದೀರ್ಘಕಾಲದ ಬೇಡಿಕೆಗಳ ಪರವಾಗಿ ಪ್ರತಿಭಟನೆ ನಡೆಸಬೇಕಾಗಿದೆ," ಎಂದು ವಸಂತಕುಮಾರ್ ಶೆಟ್ಟಿ ಹೇಳಿದರು. ಇದೇ ವೇಳೆ, ಬೆಂಗಳೂರಿನಲ್ಲಿ ಮಾನಸಿಕವಾಗಿ ಹಿಂದುಳಿದವರಿಗಾಗಿ ಸದ್ಭಾವನಾ ಪ್ರತಿಷ್ಠಾನದ ವಿಶೇಷ ಶಾಲೆ ನಡೆಸುತ್ತಿರುವ ಸಂಜಯ್ ಸಬರಾದ್ ಮಾತನಾಡಿ, 2016?17ರಲ್ಲಿ 'ಸಿಂಬಯೋಸಿಸ್ ಆಫ್ ಟೆಕ್ನಾಲಜಿ, ಎನ್ವಿರಾನ್ಮೆಂಟ್ ಅಂಡ್ ಮ್ಯಾನೇಜ್ಮೆಂಟ್' ಸಂಸ್ಥೆಯು ಸಮೀಕ್ಷೆ ನಡೆಸಿದ್ದು, ಎನ್ಜಿಒಗಳು ನಿರ್ವಹಿಸುವ ವಿಶೇಷ ಶಾಲೆಗಳು ಅನುದಾನಿತ ಶಾಲೆಗಳಿಗಿಂತ ಉತ್ತಮವಾಗಿವೆ ಎಂಬ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. "ಎನ್ಜಿಒಗಳು ನಡೆಸುತ್ತಿರುವ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರಿಗೂ ಅನುದಾನಿತ ಶಾಲೆಗಳ ಶಿಕ್ಷಕರಿಗೆ ನೀಡುವಂತೆ ಸಮಾನ ವೇತನವನ್ನು ಸರ್ಕಾರ ನೀಡಬೇಕು ಎಂಬುದೇ ನಮ್ಮ ಪ್ರಮುಖ ಬೇಡಿಕೆ," ಎಂದು ಹೇಳಿದರು.

ರಾಜ್ಯದಲ್ಲಿ ಸುಮಾರು 250 ವಿಶೇಷ ಶಾಲೆಗಳಿದ್ದು, ಅವುಗಳಲ್ಲಿ ಕೇವಲ 180 ಎನ್ಜಿಒಗಳ ಮೂಲಕ ನಿರ್ವಹಿಸಲ್ಪಡುವ ಶಾಲೆಗಳು ಮಾತ್ರ ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಉಳಿದ ಸುಮಾರು 70 ವಿಶೇಷ ಶಾಲೆಗಳು ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಪಡೆಯುತ್ತಿಲ್ಲ ಎಂದರು.

# ಸೈಕಲ್ ಪ್ಯೂರ್‌ನಿಂದ ಚಾಲಕರ ಸನ್ಮಾನ



ಮೈಸೂರು: ನಗರದ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ರಾಷ್ಟ್ರೀಯ ಚಾಲಕರ ದಿನದ ಪ್ರಯುಕ್ತ ಚಾಲಕರಿಗೆ "ವೈಬ್ ಪವರ್ ಬ್ಯಾಗ್" ಏರ್ ಫ್ರೆಶ್ ನರ್ ಗಳನ್ನು ವಿತರಿಸಿ ಚಾಲಕ ಸಮೂಹವನ್ನು ಗೌರವಿಸಿತು.

ವಿಆರ್‌ಎಲ್, ಓಲಾ ಕ್ಯಾಬ್ಸ್, ಇಂಡಿಯನ್ ಫೆಡರೇಶನ್ ಆಫ್ ಆ?ಯಪ್ -ಬೇಸ್ಡ್ ಟ್ರಾನ್ಸ್ ಪೋರ್ಟ್ ವರ್ಕಸ್9 , ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ದೆಹಲಿ ಸಾರಿಗೆ ಸಂಸ್ಥೆಗಳ ಸಹಬಾಗಿತ್ವದಲ್ಲಿ ಈ ಯೋಜನೆ ಹಮ್ಮಿಕೊಳ್ಳಲಾಗಿತ್ತು. ಈ ಮೂಲಕ ಎಂಥಾ ಕಠಿಣ ಪರಿಸ್ಥಿತಿಗಳಲ್ಲಿಯೂ ಜನರನ್ನು ಸುರಕ್ಷಿತವಾಗಿ ಗುರಿ ಮುಟ್ಟಿಸಲು ಶ್ರಮಿಸುವ ಚಾಲಕರಿಗೆ ಕೃತಜ್ಞತೆ ಸಲ್ಲಿಸಿತು.

ರಾಷ್ಟ್ರೀಯ ಚಾಲಕರ ದಿನದ ಅಂಗವಾಗಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆ 10ಲಕ್ಷ "ವೈಬ್ ಪವರ್ ಬ್ಯಾಗ್" ಏರ್ ಫ್ರೆಶ್ ನರ್ ಸ್ಯಾಚೆಟ್ ಗಳನ್ನು ವಿತರಿಸಿದೆ.

ಈ ಯೋಜನೆ ಕುರಿತು ಮಾತನಾಡಿದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ, "ಭಾರತ ದೇಶವು ಪ್ರತಿ ದಿನವೂ ಮುಂದಕ್ಕೆ ಸಾಗುವಂತೆ ಮಾಡುವಲ್ಲಿ ಚಾಲಕರ ಪಾತ್ರ ಮಹತ್ವದ್ದಾಗಿದೆ. ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ಸುಗಂಧ ಉತ್ಪನ್ನಗಳ ಮೂಲಕ ಸದಾಕಾಲ ಮನಸ್ಸಿಗೆ ಶಾಂತಿ ಮತ್ತು ಭಾವನಾತ್ಮಕ ನೆಮ್ಮದಿ ನೀಡುವ ಕೆಲಸ ಮಾಡುತ್ತಿದೆ. ಇದೀಗ ರಸ್ತೆಯ ಮೇಲೆ ದೀರ್ಘಕಾಲ ಕಳೆಯುವ ಚಾಲಕರಿಗೆ ಆರಾಮದಾಯಕ, ತಾಜಾ ಅನುಭವ ಒದಗಿಸುವ ಮೂಲಕ ನಾವು ಅವರಿಗೆ ಕೃತಜ್ಞತೆ ಸಲ್ಲಿಸಿದ್ದೇವೆ" ಎಂದರು.


### ಶಾಸಕ ಸಿ. ಪುಟ್ಟರಂಗಶೆಟ್ಟಿ ಕರೆ

# ಸಮುದಾಯ ಭವನ: ಸದಾ ಚಟುವಟಿಕೆ ಇರಲಿ

ಚಾಮರಾಜನಗರ: ಸಮುದಾಯ ಭವನಗಳು ವಿದ್ಯಾಕೇಂದ್ರಗಳಂತೆ ಸದಾ ಚಟುವಟಿಕೆಯಿಂದ ಕೂಡಿದ್ದಾಗ ಮಾತ್ರ ಭವನಗಳ ನಿರ್ಮಾಣಕ್ಕೆ ಅರ್ಥ ಬರುತ್ತದೆ ಎಂದು ಎಂಎಸ್‌ಐಎಲ್ ಅಧ್ಯಕ್ಷ ಶಾಸಕ ಸಿ. ಪುಟ್ಟರಂಗಶೆಟಿ ?ಟ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಪುಣಜನೂರು ಗ್ರಾಮದ ಕಾಲನಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ಬಡಿಗಾರ್ ಸಮುದಾಯ ಭವನವನ್ನು ಉದ್ಘಾಟಿಸಿ ಮಾತನಾಡಿದರು.

ಸಮುದಾಯ ಭವನ ಸುಸಜ್ಜಿತವಾಗಿ ನಿರ್ಮಾಣವಾಗಿದೆ. ಇದರ ಸದುಪಯೋಗ ಮಹತ್ವದಾಗಿದ್ದು ದೇವಾಲಯದಂತೆ ಇದನ್ನು ಶ್ರದ್ಧೆ, ಭಕ್ತಿಯಿಂದ ನಿರ್ವಹಣೆ ಮಾಡಿ ಸದಾ ಕ್ರಿಯಾಶೀಲವಾಗಿ ಭವನದಲ್ಲಿ ಚರ್ಚೆ, ಶೈಕ್ಷಣಿಕ ಸಭೆ-ಸಮಾರಂಭ ಸೇರಿದಂತೆ ಉತ್ತಮ ಚಟುವಟಿಕೆಗಳನ್ನು ರೂಪಿಸಬೇಕು ಸರ್ಕಾರದ ಸೌಲಭ್ಯ ಹಾಗೂ ಅನುದಾನಗಳನ್ನು ನಾಗರೀಕರು ಸದ್ಬಳಕೆ ಮಾಡಿಕೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಸಲಹೆ ನೀಡಿದರು.



ಪ್ರತಿಯೊಂದು ಗ್ರಾಮದಲ್ಲೂ ಸಮುದಾಯ ಭವನಗಳನ್ನು ನಿರ್ಮಾಣ ಮಾಡುತ್ತಿದ್ದು, ಕೇವಲ ಉದ್ಘಾಟನೆ ಮಾಡಿ ಬಾಗಿಲು ಮುಚ್ಚುವಂತದ್ದಲ್ಲ. ಬದಲಿಗೆ ಸದಾ ಕ್ರಿಯಾ ಚಟುವಟಿಕೆ ಯಿಂದ ಉತ್ತಮ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರಬೇಕೆಂದು ತಿಳಿಸಿದರು.

ಕ್ಷೇತ್ರ ವ್ಯಾಪ್ತಿಯಲ್ಲಿ ಸಮುದಾಯ ಭವನ ಇಲ್ಲದ ಕಡೆ ತಮ್ಮ ಗಮನಕ್ಕೆ ಬಂದರೆ ತ್ವರಿತವಾಗಿ ಭವನ ನಿರ್ಮಿಸಲು ಅಗತ್ಯ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಗ್ರಾ.ಪಂ ಉಪಾಧ್ಯಕ್ಷ ರಾಚಪ್ಪ, ಗ್ರಾ.ಪಂ ಸದಸ್ಯರಾದ ಎಸ್.ಚಂದ್ರಶೇಖರ್, ಗೀತಾಸಿದ್ದರಾಜು, ಪಿ.ನಾಗನಾಯ್ಕ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಣಿ ನಾಯ್ಕ, ತಾ.ಪಂಮಾಜಿ ಸದಸ್ಯಪಿ.ಕುಮಾರ್‌ನಾಯಕ, ಗ್ರಾಪಂ ಮಾಜಿ ಅಧ್ಯಕ್ಷರಾದ ವೀರಭದ್ರಸ್ವಾಮಿ, ಶಾಂತಮ್ಮ, ಉಪಾಧ್ಯಕ್ಷ ಶಾಮೀರ್ ಪಾಷಾ, ಗಣೇಶ್‌ನಾಯಕ್ಕ, ಜಡೆಯಪ್ಪ, ಉಲ್ಲೇಶ್‌ನಾಯಕ್ ಸೇರಿದಂತೆ ಗ್ರಾಮಸ್ಥರು ಇದ್ದರು.

# ಇಂದು ಭಾರತದ ಗಣರಾಜ್ಯೋತ್ಸವ: ಸಂವಿಧಾನದ ಸಂಭ್ರಮ-ರಾಷ್ಟ್ರದ ಹೆಮ್ಮೆ



ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಪ್ರತಿ ವರ್ಷ ಜನವರಿ 26 ರಂದು ನಾವು ಅತ್ಯಂತ ಸಡಗರ ಮತ್ತು ದೇಶಭಕ್ತಿಯಿಂದ 'ಗಣರಾಜ್ಯೋತ್ಸವ'ವನ್ನು ಆಚರಿಸುತ್ತೇವೆ. ಇದು ಭಾರತದ ಆತ್ಮಗೌರವ, ಸಾರ್ವಭೌಮತ್ವ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಪುನರುಚ್ಚಾರದ ದಿನ. ಬ್ರಿಟಿಷರ ದಾಸ್ಯದಿಂದ ಮುಕ್ತರಾದ ನಮಗೆ ನಮ್ಮದೇ ಆದ ಕಾನೂನು ಮತ್ತು ಹಕ್ಕುಗಳನ್ನು ನೀಡಿದ ಸಂವಿಧಾನವು ಜಾರಿಗೆ ಬಂದ ಐತಿಹಾಸಿಕ ಕ್ಷಣವಿದು.

ಐತಿಹಾಸಿಕ ಹಿನ್ನೆಲೆ ಮತ್ತು ಸಂವಿಧಾನ ರಚನಾ ಸಭೆ

1947 ಆಗಸ್ಟ್ 15 ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದರೂ, ಆಗ ನಮ್ಮ ದೇಶಕ್ಕೆ ಸ್ವಂತ ಸಂವಿಧಾನವಿರಲಿಲ್ಲ. ಪೂರ್ಣ ಸ್ವರಾಜ್ಯದ ಕನಸು ನನಸಾಗಲು ನಮಗೆ ನಮ್ಮದೇ ಆದ ಸಂವಿಧಾನದ ಅಗತ್ಯವಿತ್ತು. ಈ ನಿಟ್ಟಿನಲ್ಲಿ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸಲಾಯಿತು. ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿ ಅಪ್ರತಿಮ ಮೇಧಾವಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಕಾರ್ಯನಿರ್ವಹಿಸಿದರು. ಸುಮಾರು 2 ವರ್ಷ, 11 ತಿಂಗಳು ಮತ್ತು 18 ದಿನಗಳ ಕಾಲ ನಡೆದ ಸುದೀರ್ಘ ಪರಿಶ್ರಮದ ಫಲವಾಗಿ ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನ ಸಿದ್ಧವಾಯಿತು. 1930 ಜನವರಿ 26 ರಂದು ಲಾಹೋರ್ ಅಧಿವೇಶನದಲ್ಲಿ ಘೋಷಿಸಲಾಗಿದ್ದ 'ಪೂರ್ಣ ಸ್ವರಾಜ್ಯ'ದ ನೆನಪಿಗಾಗಿ 1950 ಜನವರಿ 26 ರಂದು ಸಂವಿಧಾನವನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು.

ನಮ್ಮ ಸಂವಿಧಾನದ 'ಪ್ರಸ್ತಾವನೆ' ಅಥವಾ ಪೀಠಿಕೆಯು ಭಾರತವನ್ನು ಒಂದು "ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯ" ಎಂದು ಘೋಷಿಸುತ್ತದೆ. ಇದು ಪ್ರತಿಯೊಬ್ಬ ನಾಗರಿಕನಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವದ ಭರವಸೆ ನೀಡುತ್ತದೆ.

ಹುತಾತ್ಮರಿಗೆ ನಮನ: ರಾಷ್ಟ್ರೀಯ ಸಮರ ಸ್ಮಾರಕದ ವಿಧಿವಿಧಾನ ಗಣರಾಜ್ಯೋತ್ಸವದ ಅಧಿಕೃತ ಕಾರ್ಯಕ್ರಮಗಳು ಆರಂಭವಾಗುವುದು ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ವೀರ ಯೋಧರಿಗೆ ನಮನ ಸಲ್ಲಿಸುವ ಮೂಲಕ. ಈ ಹಿಂದೆ ಈ ಸಂಪ್ರದಾಯವು ಇಂಡಿಯಾ ಗೇಟ್ ಬಳಿಯ 'ಅಮರ್ ಜವಾನ್ ಜ್ಯೋತಿ'ಯಲ್ಲಿ ನಡೆಯುತ್ತಿತ್ತು. ಆದರೆ, 2022 ರಿಂದ ಅಮರ್ ಜವಾನ್ ಜ್ಯೋತಿಯನ್ನು ರಾಷ್ಟ್ರೀಯ ಸಮರ ಸ್ಮಾರಕದ (National War Memorial) ಶಾಶ್ವತ ಜ್ಯೋತಿಯೊಂದಿಗೆ ವಿಲೀನಗೊಳಿಸಲಾಗಿದೆ.

ಪಥಸಂಚಲನ ಆರಂಭವಾಗುವ ಮೊದಲು, ಭಾರತದ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಸಮರ ಸ್ಮಾರಕಕ್ಕೆ ಭೇಟಿ ನೀಡಿ, ಪುಷ್ಪಗುಚ್ಛವನ್ನಿಟ್ಟು ವೀರ ಯೋಧರಿಗೆ ಶ್ರದ್ಧಾಂಜಲಿ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಎರಡು ನಿಮಿಷಗಳ ಮೌನ ಆಚರಿಸಲಾಗುತ್ತದೆ. ಇದು ದೇಶದ ರಕ್ಷಣೆಗಾಗಿ ಮಡಿದ ಅಮರ ಜವಾನರಿಗೆ ಸಲ್ಲಿಸುವ ಅತ್ಯುನ್ನತ ಗೌರವವಾಗಿದೆ.

ಸಂಭ್ರಮದ ಆಚರಣೆ ಮತ್ತು ಧ್ವಜಾರೋಹಣ

ರಾಷ್ಟ್ರ ರಾಜಧಾನಿಯ 'ಕರ್ತವ್ಯ ಪಥ'ದಲ್ಲಿ ನಡೆಯುವ ಸಮಾರಂಭವು ಅತ್ಯಂತ ವೈಭವೋಪೇತವಾಗಿರುತ್ತದೆ. ಇಲ್ಲಿ ಒಂದು ಪ್ರಮುಖ ಸಾಂವಿಧಾನಿಕ ವ್ಯತ್ಯಾಸವನ್ನು ನಾವು ಗಮನಿಸಬೇಕು: ಸ್ವಾತಂತ್ರ್ಯ ದಿನದಂದು (ಆಗಸ್ಟ್ 15) ಪ್ರಧಾನ ಮಂತ್ರಿಗಳು ಧ್ವಜಾರೋಹಣ (ಈಟಚಿಛ ಊಈಣಟಚಿ) ಮಾಡಿದರೆ, ಗಣರಾಜ್ಯೋತ್ಸವದಂದು ಭಾರತದ ರಾಷ್ಟ್ರಪತಿಗಳು ರಾಷ್ಟ್ರಧ್ವಜವನ್ನು ಅನಾವರಣ (ಈಟಚಿಛ ಗಟಿಜಿಣಡಿಟುಟಛ) ಮಾಡುತ್ತಾರೆ. ರಾಷ್ಟ್ರಪತಿಗಳು ದೇಶದ ಸಾಂವಿಧಾನಿಕ ಮುಖ್ಯಸ್ಥರಾಗಿರುವುದರಿಂದ ಈ ಗೌರವ ಅವರಿಗೆ ಸಲ್ಲುತ್ತದೆ. ಧ್ವಜ ಅನಾವರಣಗೊಂಡ ತಕ್ಷಣ ರಾಷ್ಟ್ರಗೀತೆ ಮೊಳಗುತ್ತದೆ ಮತ್ತು 21 ಕುಶಾಲತೋಪುಗಳ ಗೌರವ ವಂದನೆ ಅರ್ಪಿಸಲಾಗುತ್ತದೆ.

ನಂತರ ನಡೆಯುವ ಪಥಸಂಚಲನವು ಭಾರತದ ಶಕ್ತಿಯ ಪ್ರದರ್ಶನವಾಗಿದೆ. ಭೂಸೇನೆ, ವಾಯುಸೇನೆ ಮತ್ತು ನೌಕಾಸೇನೆಯ ವಿವಿಧ ತುಕಡಿಗಳು ರಾಷ್ಟ್ರಪತಿಗಳಿಗೆ ಗೌರವ ವಂದನೆ ಸಲ್ಲಿಸುತ್ತವೆ. ಇದರೊಂದಿಗೆ ವಿವಿಧ ರಾಜ್ಯಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಭಾರತದ 'ಏಕತೆಯಲ್ಲಿ ವೈವಿಧ್ಯತೆ'ಯನ್ನು ಸಾರುತ್ತವೆ.

ಪ್ರಶಸ್ತಿಗಳು ಮತ್ತು ಗೌರವಗಳ ಪ್ರದಾನ

ಗಣರಾಜ್ಯೋತ್ಸವದ ಸಂದರ್ಭವು ರಾಷ್ಟ್ರದ ಸಾಧಕರನ್ನು ಗೌರವಿಸುವ ವೇದಿಕೆಯೂ ಹೌದು. ಈ ದಿನದಂದು ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ ಮಾಡಿದವರಿಗೆ ಪ್ರಶಸ್ತಿಗಳನ್ನು ಘೋಷಿಸಲಾಗುತ್ತದೆ ಅಥವಾ ಪ್ರದಾನ ಮಾಡಲಾಗುತ್ತದೆ:

1. ವೀರತಾ ಪ್ರಶಸ್ತಿಗಳು (Gallantry Awards): ಯುದ್ಧ ಕಾಲದ ಅಥವಾ ಶಾಂತಿ ಕಾಲದ ಶೌರ್ಯಕ್ಕಾಗಿ ಪರಮವೀರ ಚಕ್ರ, ಅಶೋಕ ಚಕ್ರ, ಮಹಾವೀರ ಚಕ್ರದಂತಹ ಪ್ರಶಸ್ತಿಗಳನ್ನು ವೀರ ಯೋಧರಿಗೆ ನೀಡಲಾಗುತ್ತದೆ. ಕೆಲವು ಪ್ರಶಸ್ತಿಗಳನ್ನು ಮರಣೋತ್ತರವಾಗಿಯೂ ನೀಡಲಾಗುತ್ತದೆ.
2. ಪದ್ಮ ಪ್ರಶಸ್ತಿಗಳು: ಕಲೆ, ಶಿಕ್ಷಣ, ಉದ್ಯಮ, ಸಾಹಿತ್ಯ, ವಿಜ್ಞಾನ, ಕ್ರೀಡೆ ಮತ್ತು ಸಾರ್ವಜನಿಕ ಸೇವೆಯಲ್ಲಿ ಅಸಾಧಾರಣ ಸೇವೆ ಸಲ್ಲಿಸಿದವರಿಗೆ 'ಪದ್ಮವಿಭೂಷಣ', 'ಪದ್ಮಭೂಷಣ' ಮತ್ತು 'ಪದ್ಮಶ್ರೀ' ಪ್ರಶಸ್ತಿಗಳನ್ನು ಗಣರಾಜ್ಯೋತ್ಸವದ ಮುನ್ನಾದಿನ ಘೋಷಿಸಲಾಗುತ್ತದೆ.
3. ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ: ಅಸಾಧಾರಣ ಪ್ರತಿಭೆ ಮತ್ತು ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ಈ ಗೌರವ ಸಲ್ಲುತ್ತದೆ.

ಗಣರಾಜ್ಯೋತ್ಸವದ ಕುರಿತಾದ ಆಸಕ್ತಿದಾಯಕ ಸತ್ಯಗಳು

* ಭಾರತದ ಸಂವಿಧಾನವು ಸಂಪೂರ್ಣವಾಗಿ ಕೈಬರಹದಲ್ಲಿದೆ (ಅಚಿಟಟುಂಡಿಚಿಥಿ). ಇದನ್ನು ಪ್ರೇಮ್ ಬೆಹಾರಿ ನರೇನ್ ರೈಜಾದಾ ಅವರು ಬರೆದಿದ್ದಾರೆ.
* ಪ್ರತಿ ವರ್ಷ ಒಬ್ಬ ವಿದೇಶಿ ಗಣ್ಯರನ್ನು 'ಮುಖ್ಯ ಅತಿಥಿ'ಯಾಗಿ ಆಹ್ವಾನಿಸಲಾಗುತ್ತದೆ. 1950 ರ ಮೊದಲ ಗಣರಾಜ್ಯೋತ್ಸವಕ್ಕೆ ಇಂಡೋನೇಷ್ಯಾದ ಅಧ್ಯಕ್ಷ ಸುಕರ್ನೋ ಅವರು ಅತಿಥಿಯಾಗಿದ್ದರು.
* ಜನವರಿ 29 ರಂದು ನಡೆಯುವ 'ಬೀಟಿಂಗ್ ರಿಟ್ರೀಟ್' (Beating Retreat) ಸಮಾರಂಭದೊಂದಿಗೆ ನಾಲ್ಕು ದಿನಗಳ ಈ ಉತ್ಸವವು ಮುಕ್ತಾಯಗೊಳ್ಳುತ್ತದೆ.

ಮೊದಲ ಗಣರಾಜ್ಯೋತ್ಸವದಿಂದ ಇಂದಿನವರೆಗೆ: ಪ್ರಗತಿಯ ಪಯಣ

1950 ರ ಮೊದಲ ಗಣರಾಜ್ಯೋತ್ಸವದ ಸಮಯದಲ್ಲಿ ಭಾರತವು ಆಹಾರದ ಕೊರತೆ ಮತ್ತು ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿತ್ತು. ಆದರೆ ಇಂದು, ನಾವು ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಬೆಳೆದು ನಿಂತಿದ್ದೇವೆ.

ಕೃಷಿಯಲ್ಲಿನ ಹಸಿರು ಕ್ರಾಂತಿಯಿಂದ ಹಿಡಿದು ಬಾಹ್ಯಾಕಾಶದಲ್ಲಿನ ಚಂದ್ರಯಾನ-3 ರ ಯಶಸ್ಸಿನವರೆಗೆ ಭಾರತವು ಅದ್ಭುತ ಪ್ರಗತಿ ಸಾಧಿಸಿದೆ. ಡಿಜಿಟಲ್ ಪಾವತಿಯಲ್ಲಿ ನಾವು ಜಗತ್ತಿಗೆ ಮಾದರಿಯಾಗಿದ್ದೇವೆ. ಅಂದು ಶೇ. 18 ರಷ್ಟಿದ್ದ ಸಾಕ್ಷರತೆಯ ಪ್ರಮಾಣ ಇಂದು ಗಣನೀಯವಾಗಿ ಹೆಚ್ಚಿದೆ.

ರಕ್ಷಣಾ ಕ್ಷೇತ್ರದಲ್ಲಿ ನಾವು ಈಗ ಕೇವಲ ಆಮದು ಮಾಡಿಕೊಳ್ಳುವ ದೇಶವಲ್ಲ, ಬದಲಾಗಿ 'ತೇಜಸ್' ಯುದ್ಧವಿಮಾನ ಮತ್ತು 'ಐಎನ್‌ಎಸ್ ವಿಕ್ರಾಂತ್'ನಂತಹ ಸ್ವದೇಶಿ ತಂತ್ರಜ್ಞಾನವನ್ನು ರಫ್ತು ಮಾಡುವ ಹಂತಕ್ಕೆ ತಲುಪಿದ್ದೇವೆ.

ಗಣರಾಜ್ಯೋತ್ಸವವು ಕೇವಲ ಒಂದು ಆಚರಣೆಯಲ್ಲ, ಅದು ನಮ್ಮ ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವ ಸಂಕಲ್ಪದ ದಿನ. ನಮಗೆ ಹಕ್ಕುಗಳನ್ನು ನೀಡಿದ ಸಂವಿಧಾನವು ಕೆಲವು ಕರ್ತವ್ಯಗಳನ್ನೂ ನೀಡಿದೆ. ದೇಶದ ಏಕತೆ, ಶಾಂತಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ. ನವ ಭಾರತದ ನಿರ್ಮಾಣದಲ್ಲಿ ನಾವೆಲ್ಲರೂ ಕೈಜೋಡಿಸೋಣ.

**ಜೈ ಹಿಂದ್! ಭಾರತ್ ಮಾತಾ ಕಿ ಜೈ!**



ಸ್ವಾಮಿನಾಥನ್
ಬೆಂಗಳೂರು

# ಇರಬೇಕು, ಇರುವಂತೆ ತೋರೆದು ಸಾವಿರ ಚಿಂತೆ!!



ಮನುಷ್ಯನು ತನ್ನ ಬದುಕನ್ನು ತನಗಾಗಿ ಜೀವಿಸುವುದಕ್ಕಿಂತ, ಪರರ ಮೆಚ್ಚುಗೆಗಾಗಿ ಜೀವಿಸುತ್ತಿರುವನೇನೋ.. ಎಂಬ ಪ್ರಶ್ನೆಯೂ ನನ್ನ ಅಂತರಂಗದಲ್ಲಿ ಸದಾ ಗುನುಗುತ್ತಿರುತ್ತದೆ.

ಮನುಷ್ಯನು ಜನಿಸಿದ ಕ್ಷಣದಿಂದಲೇ ತನ್ನಂತೆಯೇ ಇರಲು ಬಯಸುತ್ತಾನೆ. ಆದರೆ ಬದುಕು ಮುಂದೆ ಸಾಗಿದಂತೆ, ಅವನ ಮೇಲೆ ಸಮಾಜ, ಕುಟುಂಬ, ಸಂಪ್ರದಾಯ, ಆರ್ಥಿಕತೆ ಹಾಗೂ ನಿರೀಕ್ಷೆಗಳ ಭಾರ ಒಂದೊಂದಾಗಿ ಬೀಳುತ್ತದೆ. ಈ ಭಾರದ ನಡುವೆ ಅವನು ನಿಧಾನವಾಗಿ ತನ್ನ ನಿಜವಾದ ಸ್ವಭಾವವನ್ನು ಮರೆತು ಬಿಡುತ್ತಾನೆ

ನಮ್ಮ ಬಾಲ್ಯದಲ್ಲಿ ಬದುಕು ಬಹಳ ಸಹಜವಾಗಿತ್ತು. ಆಗ ನಗುವಿಗೆ ಕಾರಣ ಬೇಕಿರಲಿಲ್ಲ, ಅಳಲು ಮುಚ್ಚಿಕೊಳ್ಳಬೇಕಾಗಿರಲಿಲ್ಲ. ಬಟ್ಟೆ ಕೊಳಕಾದರೇ ಎನ್ನುವ ಅಂಜಿಕೆ ವಿರಲಿಲ್ಲ, ಬಟ್ಟೆ ಕೊಳಕಗಿದ್ದದರೂ ಮನಸ್ಸು ಶುದ್ಧ ವಾಗಿರುತ್ತಿತ್ತು. ಮತ್ತು ಮನಸ್ಸಿನಲ್ಲಿದ್ದುದನ್ನು ಮುಕ್ತವಾಗಿ ಹೇಳುವ ಸ್ವಾತಂತ್ರ್ಯ ಇತ್ತು. ಆದರೆ ಯೌವನ ಮತ್ತು ವಯಸ್ಕ ಜೀವನಕ್ಕೆ ಕಾಲಿಟ್ಟಾಗ ಎಲ್ಲವೂ ಬದಲಾಗಿಹುದು.

ಮಾತಿಗೂ ಮಿತಿ, ಭಾವನೆಗೂ ತಡೆ, ಕನಸಿಗೂ ಅನುಮತಿ ಬೇಕಾಗುತ್ತದೆ. ಇರಬೇಕು ಎನ್ನುವ ಒತ್ತಾಯದ ನಡುವೆ ಇರುವಂತೆ ಇರುವುದೇ ತಪ್ಪಾಗಿ ಕಾಣತೊಡಗುತ್ತದೆ. ಸಮಾಜ ನಮಗೆ ಒಂದು ಮುಖವನ್ನು ತೋರಿಸಬೇಕೆಂದು ಒತ್ತಾಯಿಸುತ್ತದೆ. ಯಶಸ್ವಿಯಾಗಬೇಕು, ಬಲವಾಗಿರಬೇಕು, ಎಲ್ಲರಲ್ಲೂ ನಾನು ಹೆಚ್ಚಿನದಾಗಿ ಕಾಣಿಸಿಕೊಳ್ಳಬೇಕು, ಜನರ ಹೊಗಳಿಕೆ ಗಳಿಸಬೇಕು, ಸದಾ ಸಂತೋಷವಾಗಿರಬೇಕು ಎಂಬ ಆಸೆಗಳು ನಮ್ಮ ಬದುಕಿನಲಿ ಉದಯಿಸುತ್ತವೆ.

ಆದರೆ ಮನುಷ್ಯ ಯಂತ್ರವಲ್ಲ; ಅವನು ಭಾವನೆಗಳಿಂದ ಕೂಡಿದ ಜೀವಿ. ನೋವು, ನಲಿವು, ಸೋಲು, ಅಸಮಾಧಾನ ಅವನ ಜೀವನದ ಬಹು ದೊಡ್ಡ ಭಾಗಗಳಾಗಿವೆ. ಆದರೆ ಅವುಗಳನ್ನು ತೋರಿಸಿದರೆ ದುರ್ಬಲ ಎಂದು ಗುರುತಿಸಲಾಗುತ್ತದೆ ಎಂಬ ಭಯದಿಂದ, ಅವನು ತನ್ನ ನೋವನ್ನೇ ಮರೆಮಾಚುತ್ತಾನೆ. ಹೀಗೆ ಪ್ರತಿದಿನ ಒಂದೊಂದು ಭಾವನೆಯನ್ನು ತೊರೆದುಬಿಡುತ್ತಾ, ಘಳಿಗೆಗೊಂದು ಮುಖವಾಡ ದರಿಸುತ್ತಾ ಸಾವಿರ ಚಿಂತೆಗಳನ್ನು ಹೊತ್ತುಕೊಂಡು ಬದುಕುತ್ತಿದ್ದಾನೆ.

ಇಂದು ತಂತ್ರಜ್ಞಾನವು ನಮ್ಮ ಜೀವನವನ್ನು ಸುಲಭಗೊಳಿಸಿದೆ ಎಂದು ಹೇಳಲಾಗುತ್ತದೆ. ಆದರೆ ಅದೇ ತಂತ್ರಜ್ಞಾನ ನಮ್ಮ ಮನಸ್ಸನ್ನು ಇನ್ನಷ್ಟು ಅಶಾಂತಗೊಳಿಸಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಕಾಣುವ ಕೃತಕ ಸಂತೋಷ, ಸುಳ್ಳು ಯಶಸ್ಸುಗಳು ನಮ್ಮ ಜೀವನದೊಂದಿಗೆ ಹೋಲಿಕೆಗೊಳ್ಳುತ್ತವೆ. "ನಾನು ಏಕೆ ಹೀಗಿಲ್ಲ", "ನನ್ನ ಬದುಕು ಏಕೆ ಇಷ್ಟು ಖಾಲಿ" ಎಂಬ ಪ್ರಶ್ನೆಗಳು ನಮ್ಮಲ್ಲಿ ಪ್ರತಿದಿನ ಹುಟ್ಟುತ್ತವೆ. ಈ ಹೋಲಿಕೆಗಳೇ ನಮ್ಮನ್ನು ಮತ್ತಷ್ಟು ಚಿಂತೆಗಳಿಗೆ ದಾರಿ ಮಾಡಿಕೊಡುತ್ತವೆ.

ಇರುವಂತೆ ಬದುಕುವುದು ಎಂದರೆ ಮನುಜನಿಗೆ ಕಷ್ಟವಲ್ಲ. ಅದು ತನ್ನನ್ನು ತಾನು ಒಪ್ಪಿಕೊಳ್ಳುವ ಪ್ರಕ್ರಿಯೆ. ತನ್ನ ದುರ್ಬಲತೆಗಳನ್ನು ಮತ್ತು ತನ್ನ ಜೀವನವನ್ನು ಅರಿತುಕೊಂಡು, ಅವುಗಳ ಜೊತೆಗೆ ಬದುಕುವ ಧೈರ್ಯ. ಆದರೆ ಈ ಧೈರ್ಯವನ್ನು ಬೆಳೆಸಲು ಸಮಾಜ ಅವಕಾಶ ನೀಡುವುದಿಲ್ಲ. ಪರಿಣಾಮವಾಗಿ ಮನುಷ್ಯ ಹೊರಗೆ ನಗುತ್ತಾ, ಒಳಗೆ ಕೊರಗುತ್ತಿದ್ದಾನೆ. ಈ ಅಂತರಂಗದ ಸಂಘರ್ಷವೇ ಅವನನ್ನು ನಿಶ್ಶಬ್ದವಾಗಿ ಕಾಡುತ್ತಿದೆ ಸಾವಿರ ಚಿಂತೆಗಳಿಂದ ಮುಕ್ತಿಯಾಗಬೇಕಾದರೆ, ಮೊದಲನೆಯದಾಗಿ ಮನುಷ್ಯ ತನ್ನ ಮನಸ್ಸಿನ ಧ್ವನಿಯನ್ನು ಕೇಳಬೇಕು. ಎಲ್ಲರನ್ನೂ ಸಂತೋಷಪಡಿಸುವ ಪ್ರಯತ್ನದಲ್ಲಿ ತನ್ನನ್ನೇ ಮರೆತರೆ, ಅಂತಹ ಬದುಕಿಗೆ ಅರ್ಥವೇನು ಕೆಲವೊಮ್ಮೆ ಇಲ್ಲ ಎನ್ನುವ ಧೈರ್ಯ, ಇದೇ ನಾನು ಎಂದು ಹೇಳುವ ಸತ್ಯವೇ ಬದುಕಿಗೆ ನೆಮ್ಮದಿಯನ್ನು ತರುತ್ತದೆ.

ಬದುಕನ್ನು ಬಂದಂತೆ ಸ್ವೀಕರಿಸಿ, ಬದುಕಿ ತೋರಿಸಿದವರು ಈ ಭೂಮಿಯ ಮೇಲೆ ದೇವರಾಗಿದ್ದಾರೆ. ಅಂತಹ ಅದೆಷ್ಟೋ ಉದಾಹರಣೆಗಳು ನಮ್ಮ ಕಣ್ಣೆದುರಿದ್ದರೂ ಅದನ್ನು ಅರಿಯದ ಈ ಮನುಜ ಇಲ್ಲದ ಬದುಕಿಗಾಗಿ ಹಗಲಿರುಳು ಕನಸು ಕಾಣುತ್ತಾ, ಕುಳು – ನಿದ್ದೆಯೆನ್ನದೆ ಚಿಂತಿಸುತ್ತಾ,ಅತಿಯಾದ ಬೇಕು–ಬೇಡಿಕೆಗಳ, ಅತಿಯಾದ ಅಸೆಗಳ ಇಟ್ಟುಕೊಂಡು ಆಸೆಗಳು ಈಡರಿಯದೇ ನಿರಾಸೆ ಗೊಂಡು ಇದ್ದ ಪ್ರಸ್ತುತ ಬದುಕನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾನೆ.

ಮನಸ್ಸು ಖಾಲಿಯಾಗುವುದು ಸಾಧ್ಯವಾಗುವುದು, ಚಿಂತೆಯನ್ನು ಕಡಿಮೆ ಮಾಡಿದಾಗ ಮಾತ್ರ. ಚಿಂತೆಯನ್ನು ಕಡಿಮೆ ಮಾಡಲು, ಇರುವಂತೆಯೇ ಬದುಕುವುದನ್ನು ಕಲಿಯಬೇಕು. ನಾವಿರುವ ಸ್ಥಳ, ನಮ್ಮ ಕುಟುಂಬದ ಸ್ಥಿತಿ, ನಮ್ಮ ಸಮಯ ಇವೆಲ್ಲವನ್ನೂ ಒಪ್ಪಿಕೊಂಡಾಗ ಬದುಕು ಸುಲಭವಾಗುತ್ತದೆ.

ನಮ್ಮ ಬದುಕಿನಲಿ ಇರಬೇಕೆಂಬ ಹಂಬಲ ನಮ್ಮನ್ನು ಮುಂದೆ ಕರೆದೊಯ್ಯಲಿ, ಆದರೆ ಇರುವಂತೆಯೇ ಬದುಕುವ ಜ್ಞಾನ ನಮ್ಮನ್ನು ಶಾಂತಿಯ ಕಡೆಗೆ ಕರೆದೊಯ್ಯಲಿ. ಏಕೆಂದರೆ ಶಾಂತಿಯೇ ನಿಜವಾದ ಸಂಪತ್ತು, ಸಂತೋಷವೇ ನಿಜವಾದ ಸಾಧನೆ. ಒಟ್ಟಿನಲ್ಲಿ, "ಇರಬೇಕು, ಇರುವಂತೆ ತೊರೆದು ಸಾವಿರ ಚಿಂತೆ" ಎಂಬುವುದು ನಮ್ಮ ಕಾಲಕ್ಕೆ ಸುಚಿಸುವಂತಿದೆ ಮನುಷ್ಯ ತನ್ನಂತೆಯೇ ಇರಲು ಕಲಿತ ದಿನವೇ ಚಿಂತೆಗಳು ಕಡಿಮೆಯಾಗುತ್ತವೆ. ಆ ದಿನವೇ ಬದುಕು ಭಾರವಲ್ಲ, ಒಂದು ಸುಂದರ ಅನುಭವವಾಗುವುದು.



ಪ್ರಶಾಂತ್ ಎಂ. ಕಂಬಳಿ

# ದಯಾ ಘನ ಕಿನ್ನರಿ ಬೊಮ್ಮಯ್ಯ



। ವೀಣಾ ಹೇಮಂತ್‌ಗೌಡ ಪಾಟೀಲ್

**ಉಪೇಕ್ಷಿತ ವಚನಕಾರರು**

ಕಲ್ಯಾಣದ ಶರಣರ ಬಳಗದಲ್ಲಿ ತನ್ನ ಶರಣ ನಿಷ್ಠೆ ಕಾಯಕದಲ್ಲಿ ಶ್ರದ್ಧೆ ಹಾಗೂ ದಯಾಪರ ನಡವಳಿಕೆಗಳಿಗೆ ಹೆಸರಾಗಿದ್ದ ಕಿನ್ನರಿ ಬೊಮ್ಮಯ್ಯ. ಆತನ ಕಥೆ ಸತ್ಯ ಶರಣರ ಚರಿತ್ರೆಯಾಗಿ ಪರಿಣಮಿಸಿದೆ.

ಮೂಲತಃ ಆಂಧ್ರಪ್ರದೇಶದ ಪೂಡೂರು ಗ್ರಾಮದ ಕಲಿದೇವಿ ಎಂಬ ಭಕ್ತಳ ಪುತ್ರ ಕಿನ್ನರಯ್ಯ. ದೈವ ಭಕ್ತನಾದ ಆತ ತನ್ನ ತಾಯಿಯ ಮಾರ್ಗದರ್ಶನದಲ್ಲಿ ಅಕ್ಕಸಾಲಿಯ ಕಾಯಕವನ್ನು ಮಾಡುತ್ತಾ ಅಲ್ಲಿಯೇ ಬದುಕನ್ನು ನಡೆಸುತ್ತಿದ್ದನು. ಜೊತೆಗೆ ತನ್ನಿಷ್ಟದ ಕಿನ್ನರಿಯನ್ನು ಬಾರಿಸುವುದನ್ನು ಆತ ಗುರುಗಳ ಮಾರ್ಗದರ್ಶನದಲ್ಲಿ ಕಲಿತಿದ್ದ.

ಅದೊಂದು ದಿನ ಆತನ ಗುರುಗಳು ಆಭರಣವನ್ನು ಮಾಡಲು ಒಂದಷ್ಟು ಚಿನ್ನವನ್ನು ತಂದು ಕೊಟ್ಟರು. ಆಭರಣವನ್ನು ತಯಾರಿಸಿ ಮರಳಿ ಗುರುಗಳಿಗೆ ಕೊಟ್ಟಾಗ ಅಲ್ಲಿದ್ದ ಗುರುಗಳ ಬಳಗದವರು ಅಕ್ಕನ ಬಂಗಾರವನ್ನು ಬಿಡದ ಅಕ್ಕಸಾಲಿಯ ಬಳಿಯ ಬಂಗಾರವನ್ನು ತೂಕ ಮಾಡದೆ ತೆಗೆದುಕೊಳ್ಳುತ್ತಿರುವ ಗುರುಗಳನ್ನು ಎಚ್ಚರಿಸಿದರು. ನನ್ನ ಶಿಷ್ಯನ ಮೇಲೆ ನನಗೆ ನಂಬಿಕೆ ಇದೆ ಎಂಬ ಗುರುಗಳ ಮಾತನ್ನು ಅವರು ಅಪಹಾಸ್ಯ ಮಾಡಿದಾಗ ಬೇಸರಗೊಂಡ ಕಿನ್ನರಯ್ಯ ತಾನು ತೂಕ ಮಾಡಿಯೇ ಆಭರಣವನ್ನು ಕೊಡುತ್ತೇನೆ ಎಂದು ಆ ಆಭರಣವನ್ನು ತೂಕ ಮಾಡಿದಾಗ ಅದರಲ್ಲಿ ಸಾಸಿವೆ ಕಾಳಿನಷ್ಟು ತೂಕದ ವ್ಯತ್ಯಾಸ ಕಂಡು ಬಂತು. ಇದನ್ನು ಕಂಡ ಗುರುಗಳ ಆಪ್ತ ಬಳಗದವರು ಗುರುವಿಗೆ ಮೋಸ ಮಾಡುವ ಮನಸ್ಸಾದರೂ ನಿನಗೆ ಹೇಗೆ ಬಂತು ಕಿನ್ನರಯ್ಯ ಎಂದು ಕಿನ್ನರಯ್ಯನನ್ನು ಹೀಯಾಳಿಸಿದರು. ಗುರುಗಳೇ ಆತನಿಗೆ ಸಮಾಧಾನಿಸಿದದರೂ ಕೂಡ ಇದೆಲ್ಲದರಿಂದ ಬೇಸರಗೊಂಡ ಕಿನ್ನರಯ್ಯ ನನ್ನಲ್ಲಿ ವಂಚನೆ ಇಲ್ಲ ಅತ್ಯಂತ ನಿಷ್ಠೆಯಿಂದ ತನ್ನ ಕಾಯಕವನ್ನು ಮಾಡುತ್ತಿದ್ದರೂ ಈ ಘಟನೆಯಾಗಲು ಕಾರಣ ಈ ಕಾಯಕವನ್ನು ಬಿಡಿಸಲದುವೇ ಆ ದೇವರ ಚಿತ್ತವಾಗಿತ್ತು ಎಂದು ಭಾವಿಸಿ ಅಂದಿನಿಂದ ಅಕ್ಕಸಾಲಿಯ ವೃತ್ತಿಯನ್ನು ಕೈಬಿಟ್ಟನು.

ಬಾಲ್ಯದಿಂದಲೇ ತಾನು ಗುರುಗಳಿಂದ ಕಲಿತು ರೂಢಿಸಿಕೊಂಡ ಕಿನ್ನರಿಯನ್ನು ಬಾರಿಸುತ್ತಾ ಬದುಕನ್ನು ಪುನರ್‍ರೂಪಿಸಿಕೊಂಡನು. ಆತ ಅದೆಷ್ಟು ಸುಶ್ರಾವ್ಯವಾಗಿ ಕಿನ್ನರಿಯನ್ನು ಬಾರಿಸುತ್ತ ಹಾಡನ್ನು ಹಾಡುತ್ತಿದ್ದನೆಂದರೆ ಆತ ಆಡುವುದನ್ನು ಕೇಳಿ ತಾಯಿಯ ಎದೆ ಹಾಲು ಕುಡಿಯುವ ಮಕ್ಕಳು ಕೂಡ ಅದನ್ನು ನಿಲ್ಲಿಸಿ ತಲೆದೂಗುತ್ತಿದ್ದವು ಆತನ ಕಿನ್ನರಿಯ ವಾದನವನ್ನು ಕೇಳಿ ಸಾಕ್ಷಾತ್ ಪರಬ್ರಹ್ಮನೇ ಪ್ರತಿದಿನ ಆತನಿಗೆ ಒಂದು ಹೊನ್ನು ಹಾಗವನ್ನು ( ಅಂದಿನ ಕಾಲದ ಹಣ ) ಕೊಡತೊಡಗುತ್ತಾನೆ.

ಇದೇ ಸಮಯದಲ್ಲಿ ಕಲ್ಯಾಣದ ಶರಣರ ಕುರಿತ ವಿಷಯಗಳು ಪರಿಪರಿಯಾಗಿ ಹರಡಿ ಅವು ಆಂಧ್ರದ ಪೂಡೂರು ಗ್ರಾಮದ ಕಿನ್ನರಿ ನುಡಿಸುವ ಕಿನ್ನರಯ್ಯನ ಕಿವಿಗೆ ಬಿದ್ದು ಆ ಧರ್ಮ ಸ್ವರೂಪವನ್ನು ಕಾಣಲು ತನ್ನ ತಾಯಿಯ ಅಪ್ಪಣೆಯನ್ನು ಪಡೆದು ಕಿನ್ನರಯ್ಯ ಕಲ್ಯಾಣಕ್ಕೆ ಬರುತ್ತಾನೆ.

ತನಗೆ ಒಲಿದ ಸಂಗೀತ ವಿದ್ಯೆಯನ್ನು ದುಡಿಮೆಯ ಆಧಾರವನ್ನಾಗಿ ಮಾಡಿಕೊಂಡು ಲಿಂಗಿಗಳ ಹಿರಿಮೆಯನ್ನು ಹಾಡುತ್ತ ಕಲ್ಯಾಣವನ್ನು ಸೇರುವ ಕಿನ್ನರಯ್ಯ ಅಲ್ಲಿ ತ್ರಿಪುರಾಂತಕೇಶ್ವರನ ದೇವಾಲಯದ ಮುಂದಿನ ಜಗಲಿಯ ಕಟ್ಟೆಯ ಮೇಲೆ ಕುಳಿತು ಕಿನ್ನರಿಯನ್ನು ನುಡಿಸಿ ಜನರು ಕೊಟ್ಟ ಹಣದಿಂದ ದೇಗುಲದಲ್ಲಿಯೇ ಜಂಗಮ ದಾಸೋಹವನ್ನು ಮಾಡುತ್ತ ಸಂತೃಪ್ತಿಯಿಂದ ಬಾಳುತ್ತಾನೆ. ಕಲ್ಯಾಣದ ಜನರು ಆತನನ್ನು ಪ್ರೀತಿಯಿಂದ ಕಿನ್ನರಿ ನುಡಿಸುವ ಕಿನ್ನರಿ ಬೊಮ್ಮಯ್ಯ ಎಂದು ಕರೆದ ಕಾರಣ ಆತ ಬೊಮ್ಮಯ್ಯನಾಗುತ್ತಾನೆ.

ಇದನ್ನು ನಮ್ಮ ಜನಪದರು

ಶಿವ ಕೊಟ್ಟ ಕಿನ್ನರಿಯ ಭವದೊಳಗೆ ನುಡಿಸುತಲಿ
ಶಿವಬೋಧೆ ಜನಕೆ ಮಾಡುತಲಿ / ಬೊಮ್ಮಯ್ಯ ಭವಿಗಳಿಗೆ
ಊಡಿ ಶಿವ ಮಂತ್ರ

ಎಂದು ಆತನನ್ನು ಹಾಡಿ ಹೊಗಳಿದ್ದಾರೆ. ಆತನ ದಾಸೋಹದ ಕೀರ್ತಿಯನ್ನು ಕೇಳಿ ಖುದ್ದು ಬಸವಣ್ಣನವರು ಆತನನ್ನು ಭೇಟಿಯಾಗಿ ಅನುಭವ ಮಂಟಪಕ್ಕೆ ಕರೆತರುತ್ತಾರೆ. ಮುಂದೆ ಕಲ್ಯಾಣದ ಶರಣರ ಗಣದಲ್ಲಿ ಒಬ್ಬನಾಗುವ ಕಿನ್ನರಯ್ಯ

ಅನುಭವ ಮಂಟಪದಲ್ಲಿ ಶಿವಶರಣರ ಅನುಭಾವದ ಅರಿವಿನಲ್ಲಿ ಮಿಂದು ಧನ್ಯನಾಗುತ್ತಾನೆ.

ಬಸವಣ್ಣನವರಿಗೆ ಅತ್ಯಂತ ಆಪ್ತನಾಗುತ್ತಾನೆ. ದಿನಗಳೆದಂತೆ ಅವರಿಬ್ಬರ ಸ್ನೇಹ ಗಾಢವಾಗುತ್ತದೆ.

ಅದೊಂದು ದಿನ ಮಾತನಾಡುತ್ತಾ ಬಸವಣ್ಣನವರು ಮಹಾ ಮನೆಯಲ್ಲಿ ಉಳ್ಳಾಗಡ್ಡಿಯು ಜನರಲ್ಲಿ ತಾಮಸ ಗುಣವನ್ನು ಬಿತ್ತುತ್ತದೆ ಎಂದು ಈರುಳ್ಳಿಯನ್ನು ಹೀಗಳೆಯುತ್ತಾರೆ. ಇದರಿಂದ ಬೇಸರಗೊಂಡ ಕಿನ್ನರಯ್ಯ ಬಡ ಬಗ್ಗರಿಗೆ ಆಧಾರವಾಗಿರುವ ಆಹಾರ ಪದಾರ್ಥ ಈರುಳ್ಳಿಯನ್ನು ಬಸವಣ್ಣನವರು ತಮಾಷೆ ಮಾಡುವುದು ಸರಿಯೇ ! ಎಂದು ಸಭೆಯಿಂದ ಹೊರ ನಡೆಯುತ್ತಾರೆ.

ಇದನ್ನು ಗಮನಿಸಿದ ಬಸವಣ್ಣನವರು ನಂತರ ಅವರನ್ನು ಭೇಟಿಯಾಗಿ ಬೊಮ್ಮಯ್ಯನವರು ಹಾಗೆ ಮಾಡಲು ಕಾರಣ ಏನು ಎಂದು ಅರಿತಾಗ ಹೌದಲ್ಲವೇ ಜನಸಾಮಾನ್ಯರು ಪ್ರತಿದಿನ ಈರುಳ್ಳಿಯನ್ನು ಬಳಸುತ್ತಾರೆ ಆದರೆ ಅವರಾರಲ್ಲೂ ತೀವ್ರ ಪ್ರಮಾಣದ ತಾಮಸ ಗುಣವಿಲ್ಲ.... ಆದ್ದರಿಂದ ಈರುಳ್ಳಿಯಲ್ಲಿ ಯಾವುದೇ ದೋಷವಿಲ್ಲ ಎಂದು ಅರಿತು ಕಿನ್ನರಿ ಬೊಮ್ಮಯ್ಯನವರ ಕ್ಷಮೆ ಯಾಚಿಸುತ್ತಾರೆ.

ಈರುಳ್ಳಿಯ ಮೆರವಣಿಗೆಯನ್ನು ಮಾಡುವ ಮೂಲಕ ಹಬ್ಬವನ್ನೇ ಮಾಡಿ ಸ್ನೇಹಿತನನ್ನು ಸಮಾಧಾನಗೊಳಿಸಿ , ಈರುಳ್ಳಿಯ ಬಳಕೆಯ ಅವಶ್ಯಕತೆಯನ್ನು ಮನಗಂಡು ಅದಕ್ಕೆ ಹೆಚ್ಚಿನ ಮನ್ನಣೆಯನ್ನು ತಂದು ಕೊಡುತ್ತಾರೆ. ಇದು ಬಸವಣ್ಣನವರು ಕಿನ್ನರಿ ಬೊಮ್ಮಯ್ಯನವರ ಸ್ನೇಹಕ್ಕೆ ನೀಡಿದ ಮನ್ನಣೆಯಾಗಿತ್ತು ಎಂದರೆ ತಪ್ಪಿಲ್ಲ.

ಪ್ರತಿದಿನ ಕಲ್ಯಾಣದ ತ್ರಿಪುರಾಂತಕೇಶ್ವರನ ದೇವಾಲಯದಲ್ಲಿ ಕಿನ್ನರಿಯ ಸೇವೆಯನ್ನು ಮಾಡುತ್ತಿದ್ದ ಬೊಮ್ಮಯ್ಯನವರಿಗೆ ಅದೊಂದು ದಿನ ಅಗ್ನಿಪರೀಕ್ಷೆ ಎದುರಾಯಿತು. ತನ್ನ ವೇಶ್ಯೆಯ ಆಸೆಯಂತೆ ದೇವರಿಗೆ ಬಲಿ ಕೊಡಲು ಕುರಿಯೊಂದನ್ನು ವಿಟಪುರುಷನೊಬ್ಬ ತಂದಿರುತ್ತಾನೆ. ಸಾವಿನ ಭಯದಿಂದ ಕುರಿಯು ಆತನಿಂದ ತಪ್ಪಿಸಿಕೊಂಡು ಓಡೋಡಿ ಬಂದು ಅಂತಿಮವಾಗಿ ತ್ರಿಪುರಾಂತಕೇಶ್ವರ ದೇಗುಲದ ಒಳಗೆ ಹೊಕ್ಕು ಬಿಡುತ್ತದೆ.

ಆಗ ಇದನ್ನು ಗಮನಿಸಿದ ಕಿನ್ನರಿಯ ಬೊಮ್ಮಯ್ಯ ವಿಟಪುರುಷ ಹಾಗೂ ಆತನೊಂದಿಗೆ ಬಂದ ಊಳಿಗದ ಬೊಜ್ಜ ನಾಯಕನನ್ನು ಕುರಿತು ಸಾವಿನ ಭಯಕ್ಕೆ ಅಂಜಿ ಕುರಿ ದೇಗುಲದೊಳಗೆ ಹೊಕ್ಕಿದೆ. ಕೊಲ್ಲುವುದು ದೋಷವಾಗಿದ್ದು ನೀನು ಕುರಿಯನ್ನು ಹಿಡಿಯಲು ಹೋಗಬೇಡ ಎಂದು ಆತನಿಗೆ ಕೇಳಿಕೊಳ್ಳುತ್ತಾನೆ. ಆದರೆ ಈಗಾಗಲೇ ಐಶ್ವರ್ಯದಿಂದ ಮತ್ತನಾಗಿದ್ದ ಆ ವ್ಯಕ್ತಿ ಆ ಕುರಿ ಎಷ್ಟು ಬೆಲೆ ಬಾಳುವುದು ಎಂದು ನಿನಗೆ ಗೊತ್ತೇ ಅದನ್ನು ಖರೀದಿಸಿರುವುದೇ ಬಲಿ ಕೊಡಲು ಎಂದು ಹೇಳಿದಾಗ ಕಿನ್ನರಿ ಬೊಮ್ಮಯ್ಯನವರು ಆ ಕುರಿಯನ್ನು ತಾನು ಖರೀದಿಸುವುದಾಗಿ ಹೇಳುತ್ತಾರೆ.

ಬಿಜ್ಜಳನ ಊಳಿಗದ ಬೊಜ್ಜನಾಯಕನು ತಿರುಕ ಜಂಗಮನಾದ ನೀನು ಮುರುಕು ಕಿನ್ನರಿಯನ್ನು ನುಡಿಸಿ ಹಣ ಸಂಪಾದನೆ ಮಾಡಿ ಕುರಿಯನ್ನು ಬಿಡಿಸಿಕೊಳ್ಳಲು ಸಾಧ್ಯವೇ ಎಂದು ತಿರಸ್ಕಾರದಿಂದ ಹೇಳುತ್ತಾನೆ.

ಇದಕ್ಕೆ ಉತ್ತರವಾಗಿ ಕಿನ್ನರಿ ಬೊಮ್ಮಯ್ಯ ತನ್ನ ಕಿನ್ನರಿಯನ್ನು ಬಾರಿಸಲು ಅಲ್ಲಿ ಜನ ಸಮೂಹವೇ ನೆರೆದು ಆತನಿಗೆ ಕಾಸನ್ನು ಸುರಿದರು. ಹಾಗೆ ಅವರಿವರೆನ್ನದೆ ಎಲ್ಲಾ ಶಿವಶರಣರು ಸುರಿದ ಕಾಸು ಒಂದು ಸಾವಿರಕ್ಕೂ ಹೆಚ್ಚು ಹಣವಾಯಿತು..... ಕೂಡಲೇ ಆ ಎಲ್ಲ ಹಣವನ್ನು ಆ ವಿಟಪುರುಷನ ಮಡಿಲಿಗೆ ಹಾಕಿದ ಕಿನ್ನರಿ ಬೊಮ್ಮಯ್ಯ ಕುರಿಯನ್ನು ಬಿಡಿಸಿಕೊಳ್ಳುವ ಮೂಲಕ ಪ್ರಾಣಿ ದಯೆಯನ್ನು ತೋರುತ್ತಾನೆ.

ಹೀಗೆ ದೊರೆತ ಹಣವನ್ನು ಆ ವಿಟ ಪುರುಷ ಅತ್ಯಂತ ಹೆಮ್ಮೆಯಿಂದ ತನ್ನ ವೇಶ್ಯೆಗೆ ನೀಡಿದಾಗ ಆಕೆ 'ಹೊನ್ನಿಗೆ ಬಾಯ್ಬಿಡುವ ಹೆಣ್ಣು ನಾನಲ್ಲ. ಹೊನ್ನು ಕಾಣದವಳು ಕೂಡ ನಾನಲ್ಲ ನಿನಗೆ ನಿಜವಾಗಿಯೂ ನನ್ನ ಮೇಲೆ ಪ್ರೀತಿ ಇದ್ದರೆ ನನ್ನ ಹರಕೆಯ ಕುರಿಯನ್ನು ನನಗೆ ತಂದು ಕೊಡು' ಎಂದು ಮೂದಲಿಸುತ್ತಾಳೆ.

ಬೇರೆ ದಾರಿ ಕಾಣದೆ ಕಾಮುಕ ವಿಟಪುರುಷ ಬೊಮ್ಮಯ್ಯನ ಕಣ್ಣಿಗೆ ಬೀಳದಂತೆ ಕುರಿಯನ್ನು ಕದ್ದು ಒಯ್ಯಲು ಪ್ರಯತ್ನಿಸುತ್ತಾನೆ. ಇದು ಬೊಮ್ಮಯ್ಯನ ಕೋಪಕ್ಕೆ ಕಾರಣವಾಗಿ ಅವರಿಬ್ಬರ ನಡುವೆ ಮಾತಿನ ಚಕಮಕಿ ನಡೆದು ಅಂತಿಮವಾಗಿ ಆತನನ್ನು ಬೊಮ್ಮಯ್ಯ ಹಣಿದುಬಿಡುತ್ತಾನೆ. ವಿಟಪುರುಷನ ಕಡೆಯವರು ದೂರನ್ನು ಹಿಡಿದು ಬಿಜ್ಜಳ ಮಹಾರಾಜನ ಬಳಿ ಹೋದರು. ಎಲ್ಲವನ್ನು ಸಾಂಗವಾಗಿ ಕೇಳಿ ತಿಳಿದುಕೊಂಡ ಬಿಜ್ಜಳ ಮಹಾರಾಜ ನೀನು ಕೊಟ್ಟ ವಿವರಣೆ ಸತ್ಯವೆಂದು ನಂಬಲು ಸಾಕ್ಷಿ ಯಾರು ಎಂದು ಹೇಳಿದಾಗ ಕಿನ್ನರಯ್ಯ ಅಲ್ಲಿ ನಾನು, ವಿಟಪುರುಷ ಹಾಗೂ ತ್ರಿಪುರಾಂತಕೇಶ್ವರ ದೇವರು ಮಾತ್ರ ಇದ್ದದ್ದು ಆದ್ದರಿಂದ ಆ ತ್ರಿಪುರಾಂತಕೇಶ್ವರನೇ ಸಾಕ್ಷಿ ಹೇಳಲಿ ಎಂದಾಗ ಕಲ್ಲು ದೇವರು ಎಲ್ಲಿಯಾದರೂ ಸಾಕ್ಷಿ ನುಡಿಯುವುದೇ ಎಂದು ಎಲ್ಲರೂ ಪರಿಹಾಸ್ಯ ಮಾಡುತ್ತಾರೆ.

ಆದರೆ ಅವರೆಲ್ಲರಿಗೂ ಅಚ್ಚರಿಯಾಗುವಂತೆ ಲಿಂಗದ ಕಡೆಯಿಂದ ಧ್ವನಿ ಹೊರಟು ನಡೆದ ವಿಷಯವನ್ನು ಲಿಂಗವು ಸಂಪೂರ್ಣವಾಗಿ ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತದೆ. ಜೊತೆಗೆ ಆ ವಿಟ ಪುರುಷನಿಗೂ ಪ್ರಾಣದಾನವನ್ನು ನೀಡುತ್ತದೆ. ಬಿಜ್ಜಳ ಮಹಾರಾಜನಾದಿಯಾಗಿ ಸಜ್ಜನರೆಲ್ಲರೂ ನಿಬ್ಬೆರಗಾಗುತ್ತಾರೆ. ಎಲ್ಲರೂ ಕರ ಜೋಡಿಸಿ ಮುಗಿದು ತ್ರಿಪುರಾಂತಕೇಶ್ವರನನ್ನು ಹಾಗೂ ಬೊಮ್ಮಯ್ಯನನ್ನು ಹಾಡಿ ಹೊಗಳುತ್ತಾರೆ.

ಅದೊಂದು ದಿನ ಮಹಾದೇವಿ ತಾಯಿ ಅನುಭವ ಮಂಟಪಕ್ಕೆ ಬರಲು ಬಸವಣ್ಣನವರ ಅಪ್ಪಣೆಯಂತೆ ಕಿನ್ನರಿ ಬೊಮ್ಮಯ್ಯನವರು ಆಕೆಯನ್ನು ಸ್ವಾಗತಿಸುವ ಸೌಭಾಗ್ಯವನ್ನು ಪಡೆಯುತ್ತಾರೆ. ಆದರೆ ಅಲ್ಲೂ ಕೂಡ ಆಕೆಯನ್ನು ಮೊದಲು ಕಂಡಾಗ

ಕಾಯದಲ್ಲಿ ಕಳವಳವಿರಲು ಪ್ರಾಣದಲ್ಲಿ ಮಾಯೆ ಇರಲು ಏತರ ಮನ ಇದೇತರ ನಿರ್ವಾಣ ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬ ನಲ್ಲದೆ ಸಜ್ಜನಿ ಎಂದು ಕೈ ವಿಡಿವನಲ್ಲ ಕೇಳೇ ಎಂದು ನಿಷ್ಠುರವಾಗಿ ನುಡಿಯುತ್ತಾನೆ.

ಮುಂದೆ ಕಲ್ಯಾಣವನ್ನು ಪ್ರವೇಶಿಸಿ ಅನುಭವ ಮಂಟಪದಲ್ಲಿ ಶಿವಶರಣರಿಂದ ಅಗ್ನಿ ಪರೀಕ್ಷೆಗೆ ಒಳ ಪಟ್ಟ ಅಕ್ಕನ ಆತ್ಮಶ್ರೀ ಬೆಳಗಲು

ಆಕೆಗೆ ಶರಣು ಶರಣಾರ್ಥಿಯಮ್ಮವ್ವ ಎಂದು ವಚನವೊಂದನ್ನು ರಚಿಸಿ ಧನ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಹುಲಿಯನ್ನು ನೆಕ್ಕಿ ಬದುಕಿದೆ ಎಂದು ಆಕೆಯನ್ನು ಕುರಿತು ಮತ್ತೊಂದು ವಚನದಲ್ಲಿ ರಚಿಸಿ ತಮ್ಮ ಅರಿವಿನ ಕೊರತೆಯ ಕುರಿತು ಕ್ಷಮೆ ಯಾಚಿಸುತ್ತಾರೆ.

ತನ್ನಿಷ್ಟದಂತೆ ಶರಣರ ಜೊತೆಗಿನ ಒಡನಾಟ, ಇಷ್ಟದ ಕಾಯಕ ಹಾಗೂ ಬದುಕಿನಿಂದ ತೃಪ್ತನಾಗಿದ್ದ ಕಿನ್ನರಿ ಬೊಮ್ಮಯ್ಯನವರಲ್ಲೂ ಕೂಡ ತನ್ನಂತಹ ದಾನಿ ಇನ್ನೊಬ್ಬರಿಲ್ಲ ಎಂಬ ಅಹಂಕಾರ ಹುಟ್ಟಿಕೊಂಡು ಅದನ್ನು ಕಿಳ್ಳಿಕ್ಯಾತರ ಕಲಕೇತ ಬ್ರಹ್ಮಯ್ಯ ಎಂಬ ಶರಣ ನಿವಾರಿಸಿದ್ದು ಇನ್ನೊಂದು ಕಥೆ..

ಬಸವಣ್ಣನವರ ಆತ್ಮಸಖನಾಗಿ ಬದಲಾಗುವ ಕಿನ್ನರಿ ಬೊಮ್ಮಯ್ಯ ಅದೊಮ್ಮೆ ಅಸು ನೀಗಲು ತಾಯಿಯನ್ನು ಕಳೆದುಕೊಂಡ ತಬ್ಬಲಿಯಂತೆ ಬಸವಣ್ಣ ಬೋರಾಡಿ ಅತ್ತು ರೋದಿಸಿ ಆತನನ್ನು ಮರಳಿ ಪಡೆಯುವ ಕಥಾನಕವನ್ನು ಕೂಡ ನಾವು ಶರಣರ ಚರಿತ್ರೆಯಲ್ಲಿ ಕಾಣಬಹುದು.

ಮುಂದೆ ಕಲ್ಯಾಣದ ಕ್ರಾಂತಿಗೆ ಕಾರಣವಾದ ಹರಳಯ್ಯ ಮತ್ತು ಮಧುವರಸರ ಮಕ್ಕಳಾದ ಶೀಲವಂತ ಹಾಗೂ ಲಾವಣ್ಯವತಿಯರ ಮದುವೆಯ ನಂತರ ಉಂಟಾದ ಸಂಘರ್ಷದ ನಂತರ ಹರಳಯ್ಯ ಮಧುವರಸ ಮತ್ತು ವಧು ವರರನ್ನು ಎಳೆಹೂಟೆ ಶಿಕ್ಷೆಗೆ ಒಳಪಡಿಸುತ್ತಾರೆ.

ಆಗ ವಚನಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಎಲ್ಲಾ ಶಿವಶರಣರು ಕಲ್ಯಾಣವನ್ನು ಬಿಟ್ಟು ಉಳವಿಯತ್ತ ಹೊರಡಲು ಕಿನ್ನರಿ ಬೊಮ್ಮಯ್ಯನವರು ಅವರೊಂದಿಗೆ ಜೊತೆಯಾಗುತ್ತಾರೆ. ಮಡಿವಾಳ ಮಾಚಿದೇವರ ಜೊತೆ ಕಿನ್ನರಿ ಬೊಮ್ಮಯ್ಯ ಕೂಡ ಶರಣರ ರಕ್ಷಾಮಣಿಯಾಗಿ ಯುದ್ಧದಲ್ಲಿ ಭಾಗವಹಿಸುತ್ತಾರೆ. ಮುಂದೆ ಮಡಿವಾಳ ಮಾಚಿದೇವ ಮರಣ ಹೊಂದಲು ತಾನೇ ಶಿವಶರಣರ ಗಣನಾಯಕನಾಗಿ ಉಳವಿಯ ಮಹಾಮನೆಯ ಮುಂದೆ ಬಿಜ್ಜಳನ ಸೈನ್ಯದೊಡನೆ ಕೊನೆಯ ಕಾಳಗವನ್ನು ಮಾಡುತ್ತಾರೆ.


ಅಲ್ಲಿ ಇಳಿಜಾರಿನಲ್ಲಿ ಹರಿದು ಬರುವ ಹೊಳೆಯನ್ನು ಮಹಾಮನೆಯ ಮುಂಭಾಗದಲ್ಲಿ ಭೂಮಿಯನ್ನು ಅಗೆದು ಒಳಕ್ಕೆ ತಿರುಗಿಸಿ ಅದನ್ನೇ ಜಲದುರ್ಗವಾಗಿ ಪರಿವರ್ತಿಸುವ ಮೂಲಕ ಶರಣಗಣವನ್ನು ರಕ್ಷಿಸುತ್ತಾನೆ. ಅಂತಿಮವಾಗಿ ಅಲ್ಲಿಯೇ ಕಾದು ಶರಣ ಮರಣವನ್ನು ಪಡೆಯುವ ಕಿನ್ನರಯ್ಯನನ್ನು ಅಲ್ಲಿಯೇ ಸಮಾಧಿ ಮಾಡಲಾಗುತ್ತದೆ.

ಇಂದಿಗೂ ಆ ಹೊಳೆ ಜಲಪಾತವು ಕಿನ್ನರಿ ಬೊಮ್ಮಯ್ಯನ ಹೊಳೆ ಎಂದೇ ಹೆಸರಾಗಿದೆ. ಕಿನ್ನರಯ್ಯನ ಸಮಾಧಿಯ ಮೇಲೆ ಶಿಲಾ ಶಾಸನವೊಂದನ್ನು ಇಟ್ಟಿದ್ದು ಇಡೀ ಜಗತ್ತಿಗೆ ಅದು ಕಿನ್ನರಿ ಬೊಮ್ಮಯ್ಯನ ನಿರ್ಮಲ ಚರಿತ್ರವನ್ನು ಸಾರಿ ಹೇಳುತ್ತದೆ.

ಎತ್ತರದ ಅನುಭಾವ, ಸರ್ವಸಮಾನತೆಯ ಭಾವ, ಪ್ರಾಣಿ ದಯೆ, ವೈರಾಗ್ಯ ಹಾಗೂ ತಪ್ಪನ್ನು ಸರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಕ್ಷಮೆ ಯಾಚಿಸುವ ವಚನಗಳನ್ನು ಕೂಡ ರಚಿಸಿರುವ ಕಿನ್ನರಿ ಬೊಮ್ಮಯ್ಯನವರ ಒಟ್ಟು 18 ವಚನಗಳು ನಮಗೆ ಲಭ್ಯವಾಗಿವೆ. ವಚನಗಳ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಿರುವ ಕಿನ್ನರಿಬೊಮ್ಮಯ್ಯನವರ ವಚನಗಳ ಅಂಕಿತ ಮಹಾಲಿಂಗ ತ್ರಿಪುರಾಂತಕದೇವ.

ಕಲ್ಯಾಣಕ್ಕೆ ಬರುವ ಮುನ್ನ ಇಂದಿನ ಬೀದರ ಜಿಲ್ಲೆಯ ಹುಮನಾಬಾದ್ ತಾಲೂಕಿನ ಹಳ್ಳಿಖೇಡದಲ್ಲಿ ಬೊಮ್ಮಯ್ಯನವರು ಕೆಲ ಕಾಲ ಇದ್ದ ಕಾರಣ ಇಂದಿಗೂ ಕೂಡ ಹಳ್ಳಿಕೇಡದಲ್ಲಿ ಪ್ರತಿ ಶ್ರಾವಣ ಮಾಸದಲ್ಲಿ ಅವರ ಜಾತ್ರಾ ಮಹೋತ್ಸವ ನಡೆಯುತ್ತದೆ. ವಿವಿಧ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಕಿನ್ನರಿ ಬೊಮ್ಮಯ್ಯನವರ ಬದುಕು ವಚನಗಳು ಹಾಗೂ ಶರಣ ಜೀವನದ ಹೊಳಹುಗಳನ್ನು ನೆನಪಿಸಿಕೊಳ್ಳಲಾಗುತ್ತದೆ.

ಕಿನ್ನರಿ ಬೊಮ್ಮಯ್ಯನಂತಹ ಮಹಾ ಶಿವಶರಣರಿಗೆ ನಮೋ ನಮಃ



# ನಗರದಲ್ಲಿ ಸಾಮೂಹಿಕ 108 ಸೂರ್ಯ ನಮಸ್ಕಾರ






ಮೈಸೂರು: ಮೈಸೂರು ಯೋಗ ಒಕ್ಕೂಟದ 25ನೇ ವಾರ್ಷಿಕೋತ್ಸವ ಹಾಗೂ ರಥಸಪ್ತಮಿ ಅಂಗವಾಗಿ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಭಾನುವಾರ ಏರ್ಪಡಿಸಿದ್ದ ಸಾಮೂಹಿಕ 108 ಸೂರ್ಯ ನಮಸ್ಕಾರದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡಿದ್ದರು.

ಚುಮುಚುಮು ಚಳಿಯಲ್ಲಿಯೇ ಬೆಳಗಿನ ಜಾವ ಅತ್ಯಂತ ಉತ್ಸಾಹದಿಂದ ಹಾಜರಾಗಿದ್ದ ಯೋಗಪಟುಗಳು ಸೂರ್ಯದೇವನಿಗೆ ನೂರೆಂಟು ನಮಸ್ಕಾರಗಳನ್ನು ಸಲ್ಲಿಸಿದರು. ಈ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿ, ಮೈಸೂರಿಗೆ ಯೋಗನಗರಿ ಎಂಬ ಅಭಿದಾನವೂ ಇದೆ. ರಾಜಮಹಾರಾಜರ ಕಾಲದಿಂದಲೂ ಇಲ್ಲಿ ಯೋಗಕ್ಕೆ ಮಹತ್ವ ಸಿಕ್ಕಿದೆ. ದೇಶ– ವಿದೇಶಗಳ ನೂರಾರು ಮಂದಿ ಯೋಗ ಕಲಿಯಲು ಮೈಸೂರಿಗೆ ಬರುತ್ತಿದ್ದಾರೆ. ಪಾಶ್ಚಿಮಾತ್ಯ ರಾಷ್ಟ್ರಗಳು ಕೂಡ ಯೋಗದ ಮಹತ್ವವನ್ನು ಅರ್ಥ ಮಾಡಿಕೊಂಡಿವೆ ಎಂದರು. ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾ ಡಿಕೊಳ್ಳಲು ಯಾವುದೇ ವೆಚ್ಚ ಇಲ್ಲದೇ ಮಾಡಬಹುದಾದ ಚಿಕಿತ್ಸೆ ಎಂದರೇ ಯೋಗ, ಧ್ಯಾನ ಮತ್ತು ಪ್ರಾಣಾಯಾಮ ಮಾತ್ರ. ಒತ್ತಡ ನಿವಾರಣೆಗೂ ಯೋಗಾಭ್ಯಾಸ ಸಹಕಾರಿ ಯಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಒಕ್ಕೂಟದ ಗೌರವ ಅಧ್ಯಕ್ಷ ಎ.ಎಸ್. ಚಂದ್ರಶೇಖರ್ ಮಾತನಾಡಿ, ಒಕ್ಕೂಟದ ರಜತ ಮಹೋತ್ಸವದ ಮೊದಲ ಕಾರ್ಯಕ್ರಮ ಇದಾ ಗಿದೆ. ವರ್ಷವಿಡಿ ಸರಣಿ ಕಾರ್ಯಕ್ರಮಗಳನ್ನು ನಡೆಸಿ, ಈವರೆಗೆ ಆಗಿರುವ ಪ್ರಗತಿಯನ್ನು ಅವಲೋಕಿಸಲಾ ಗುವುದು ಎಂದರು.

ಮುಖ್ಯ ಅತಿಥಿಯಾಗಿದ್ದ ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಮಾತನಾಡಿ, ನಾವು ನೇರವಾಗಿ ನೋಡಬಹುದಾದ ಏಕೈಕ ದೇವರೆಂದರೆ ಸೂರ್ಯ. ಆತನಿಗೆ ನಮಿಸುವುದು ಎಂದರೇ ದೇಹದ ಎಲ್ಲಾ ಅಂಗಾಂಗಗಳಿಗೂ ಕಸರತ್ತು ಮಾಡಿದಂತೆ ಆಗುತ್ತದೆ ಎಂದರು. ಮುಖ್ಯಅತಿಥಿಯಾಗಿದ್ದ ಉದ್ಯಮಿ ಎ.ಪಿ. ನಾಗೇಶ್ ಮಾತನಾಡಿ, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.. ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್ ಕಾರ್ಯಕ್ರಮ ನಿರೂಪಿಸಿ, ಒಕ್ಕೂಟ ನಡೆದು ಬಂದ ದಾರಿಯ ಬಗ್ಗೆ ಮಾಹಿತಿ ನೀಡಿದರು. ಪ್ರಧಾನ ಕಾರ್ಯದರ್ಶಿ ಯೋಗಕುಮಾರ್ ಸ್ವಾಗತಿಸಿದರು. ಕಾರ್ಯಾಧ್ಯಕ್ಷರಾದ ಬಿ.ಪಿ. ಮೂರ್ತಿ, ಶಾಂತಾರಾಮ್, ಎಂ,ಎಸ್. ಶಿವಪ್ರಕಾಶ್, ಉಪಾಧ್ಯಕ್ಷ ಎಂ.ಎಸ್. ರಮೇಶ್ ಕುಮಾರ್, ಆಶಾದೇವಿ ಇದ್ದರು.

# ಐಎಎಸ್ ತರಬೇತಿ ನೀಡಲು ಸಹಿ



ಮಂಡ್ಯ ತಾಲ್ಲೂಕು ಸಿದ್ದಯ್ಯಕೊಪ್ಪಲು ಕ್ರಾಸ್ ಸುಂಡಹಳ್ಳಿ ಯಲ್ಲಿರುವ ಕಾವೇರಿ ತಾಂತ್ರಿಕ ಮಹಾವಿದ್ಯಾಲಯ ಮತ್ತು ಸ್ಟೇಟ್ ಕ್ರಾಫ್ಟ್ ಐಎಎಸ್ ಅಕಾಡೆಮಿ ಬೆಂಗಳೂರುರವರೊಡನೆ ಐಎಎಸ್ ಕೆಎಎಸ್ ಬ್ಯಾಂಕಿಂಗ್ ಎಸ್ ಎಸ್ ಸಿ ಮತ್ತು ಇತರ ಸರ್ಕಾರಿ ಉದ್ಯೋಗಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಎಂ.ಓ.ಯುಗೆ ಸಹಿ ಮಾಡಲಾಯಿತು.

ಸ್ಟೇಟ್ ಕ್ರಾಫ್ಟ್ ಐಎಎಸ್ ಅಕಾಡೆಮಿ ಬೆಂಗಳೂರು ರವರು ಸಿಐಟಿ ಮಂಡ್ಯದಲ್ಲಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿಯನ್ನು ನೀಡುತ್ತಾರೆ. ಅಧ್ಯಯನ ಸಾಮಗ್ರಿಗಳನ್ನು ಒದಗಿಸುವುದು ಅಣಕು ಪರೀಕ್ಷೆಗಳು ಮೌಲ್ಯಮಾಪನ ಕಾರ್ಯಕ್ಷಮತೆ ವಿಶ್ಲೇಷಣೆ ಮಾಡುವುದು ಅತಿಥಿ ಉಪನ್ಯಾಸಗಳನ್ನು ಏರ್ಪಡಿಸುವುದು.

ಕಾರ್ಯಗಾರಗಳನ್ನು ನಡೆಸುವುದು, ತರಬೇತಿ ಮುಗಿಸಿದ ನಂತರ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ನೀಡಲಾಗುವುದು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ಅಭ್ಯರ್ಥಿಗಳಿಗೆ ನಿರಂತರ ಮಾರ್ಗದರ್ಶನ ನೀಡಲಾಗುವುದು ಸಂದರ್ಶನಕ್ಕೆ ತಯಾರಾ ಗಲು ಉಚಿತ ತರಬೇತಿ ನೀಡಲಾಗುವುದುಸಿಐಟಿ ಮಂಡ್ಯದ ಮೂರನೇ ವರ್ಷದ ಮತ್ತು ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ತರಬೇತಿಗಳನ್ನು ಆಯೋಜಿಸಲಾಗುವುದು ಅಲ್ಲದೆ ಆಸಕ್ತಿಯುಳ್ಳ ಸಿಐಟಿ ಏತರ ಅಭ್ಯರ್ಥಿಗಳಿಗೆ ಸಹ ಪ್ರತ್ಯೇಕ ತರಬೇತಿ ನಡೆಸಲಾಗುವುದು.

# ಜಿಬಿಎ ಭೂಸ್ವಾಧೀನಕ್ಕೆ ಅವಕಾಶ ಕೊಡಬೇಡಿ

## ನಿಮ್ಮ ಜೊತೆ ನಾನಿದ್ದೇನೆ: ಹೋರಾಟಗಾರರಿಗೆ ಎಚ್‌ಡಿಕೆ ಭರವಸೆ | ಬಿಡದಿ ಬಳಿಯ ಬೈರಮಂಗಲ–ಕಂಚುಗಾರನಹಳ್ಳಿ ಗ್ರಾಮಸ್ಥರ ಹೋರಾಟದಲ್ಲಿ ಭಾಗಿ | ಈಗಲ್ಟನ್ ಭೂಒತ್ತುವರಿಗೆ ಕೇಳಿದಷ್ಟು ಪರಿಹಾರ ಇವರಿಗೂ ಕೊಡಿ, ಸರ್ಕಾರಕ್ಕೆ ಸವಾಲು

ರಾಮನಗರ: ಸಮಗ್ರ ನಗರ (ಎಐ ಸಿಟಿ) ನಿರ್ಮಾಣ ಯೋಜನೆ ಉದ್ದೇಶದಲ್ಲಿ ಗ್ರೇಟರ್ ಬೆಂಗಳುರು ಅಭಿವೃದ್ಧಿ ಪ್ರಾಧಿಕಾರ ಬಿಡದಿ ಬಳಿಯ ಬೈರಮಂಗಲ, ಕಂಚುಗಾರನ ಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಭೂಮಿ ಸ್ವಾಧೀನವನ್ನು ವಿರೋಧಿಸಿ ನಡೆಯುತ್ತಿರುವ ಹೋರಾಟ ದಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾಗವಹಿಸಿದ್ದರು. ಭೂಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೋರಾಟಗಾರರಲ್ಲಿ ಭರವಸೆ ಮೂಡಿಸುವ ಪ್ರಯತ್ನ ನಡೆಸಿದ್ದಾರೆ.

ಬಿಡದಿ ಹೋಬಳಿ ಬೈರಮಂಗಲದಲ್ಲಿ ನಡೆಯುತ್ತಿರುವ ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಒಂದು ಇಂಚು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದ ಹಾಗೆ ನಿಮ್ಮ ಜೊತೆ ನಿಲ್ಲುವುದು ನನ್ನ ಜವಾಬ್ದಾರಿ ಎಂದರು. ಬದುಕನ್ನು ಉಳಿಸಿಕೊಳ್ಳಲು ರೈತ ಕುಟುಂಬಗಳು ಹೋರಾಟ ಮಾಡುತ್ತಿವೆ. ಸರ್ಕಾರ ಇದನ್ನು ಅರ್ಥ ಮಾಡಿಕೊಳ್ಳಬೇಕು. ಜನಾಭಿಪ್ರಾಯಕ್ಕೆ ಸರ್ಕಾರಗಳು ಮಣಿಯಬೇಕು ಎಂದರು.





### 2028ರಲ್ಲಿ ಜನರ ಸರ್ಕಾರ ಅಧಿಕಾರಕ್ಕೆ

ಸಧ್ಯ ನಡೆಯುತ್ತಿರುವ ಭೂ ಸ್ವಾಧೀನ ಪ್ರಕ್ರಿಯೆ 2 ವರ್ಷಗಳಲ್ಲಿ ಪೂರ್ಣಗೊಳ್ಳುವುದು ಸಾಧ್ಯವಿಲ್ಲ. 2028ರಲ್ಲಿ ಜನರ ಸರ್ಕಾರ ಬರಲಿದೆ. ರಾಮರಾಜ್ಯ ಸ್ಥಾಪನೆಯಾಗಲಿದೆ. ರೈತರ ಭೂಮಿಯೂ ಉಳಿಯಲಿದೆ ಎಂದು ಕುಮಾರಸ್ವಾಮಿ ಹೋರಾಟಗಾರರಲ್ಲಿ ಹೊಸ ಹುರುಪು ಮೂಡಿಸುವ ಪ್ರಯತ್ನ ಮಾಡಿದರು. ಭೂ ಸ್ವಾಧೀನಕ್ಕೆ ಒಪ್ಪಿಗೆ ಸೂಚಿಸಿ ಈಗಾಗಲೆ ಸಹಿ ಮಾಡಿರುವ ರೈತರಿಗೂ ಕರೆ ನೀಡಿದ ಅವರು ಆತುರ ಪಡಬೇಡಿ ಎಂದರು.

### 4 ಲಕ್ಷಕ್ಕೆ ಖರೀದಿಸಿದ ಭೂಮಿ ಉಳಿಸಿಕೊಳ್ಳಲು ಕೋಟ್ಯಾಂತರ ರೂ.

ಬಿಡದಿ ಬಳಿಯಲ್ಲಿ ತಮ್ಮ ವಿರುದ್ದ ಇರುವ ಭೂಕಬಳಿಕೆ ಆರೋಪದ ಬಗ್ಗೆ ಮಾತನಾಡಿದ ಎಚ್.ಡಿ.ಕುಮರಸ್ವಾಮಿ, 1983ರಲ್ಲಿ ತಾವು 46 ಎಕರೆ ಭೂಮಿ ಖರೀದಿಸಿದ್ದಾಗಿ. ಕೃಷಿ ಚಟುವಟಿಕೆ ನಡೆಸುತ್ತಿದ್ದೇವೆ. ತದ ನಂತರ ಅಲ್ಲಿ 4 ಎಕರೆ ಭೂಮಿಯನ್ನು 4.5 ಲಕ್ಷ ರೂಗಳಿಗೆ ಖರೀದಿ ಸಿದ್ದೆ. ಆದರೆ ಈ ಭೂಮಿ ಒತ್ತುವರಿ ಎಂದು ಹಾಲಿ ಸರ್ಕಾರ ಆರೋಪಿ ಸಿದೆ. ಎಸ್.ಐ.ಟಿ ರಚಿಸಿದೆ. 4.5 ಲಕ್ಷರೂಗಳಿಗೆ ಕೊಂಡ ಭೂಮಿಯನ್ನು ಉಳಿಸಿಕೊಳ್ಳಲು ಕೋಟ್ಯಾಂತರ ರೂ ವೆಚ್ಚ ಮಾಡುವ ಪರಿಸ್ಥಿತಿ ಎದುರಿಸುತ್ತಿದ್ದೇನೆ ಎಂದು ರಾಜ್ಯ ಸರ್ಕಾರದ ವಿರುದ್ದ ಕಿಡಿ ಕಾರಿದರು.

ಈ ವೇಳೆ ಮಾಜಿ ಶಾಸಕ ಎ.ಮಂಜುನಾಥ್, ಸ್ಥಳೀಯ ಪ್ರಮುಖರಾದ ರಾಮಣ್ಣ ಮುಂತಾದವರು ಹಾಜರಿದ್ದರು.

### ಉಪನಗರ ನಿರ್ಮಿಸುವ ಚಿಂತನೆ ಕೈಬಿಟ್ಟಿದ್ದೇಕೆ?

ತಾವು ಮುಖ್ಯಮಂತ್ರಿಗಳಾಗಿದ್ದ ವೇಳೆ ತಮಗೂ ಬೆಂಗಳೂರು ಸುತ್ತಮುತ್ತ ಉಪನಗರಗಳನ್ನು ನಿರ್ಮಿಸಬೇಕು ಎಂಬ ಆಶಯ ಇತ್ತು. ಆಗ ಭೂಮಿಯ ಬೆಲೆ ಇಷ್ಟು ಇರಲಿಲ್ಲ. ಇನ್ನೊಂದೆಡೆ ಕೃಷಿ ಉತ್ಪನ್ನಗಳಿಗೂ ಬೆಲೆ ಇರಲಿಲ್ಲ. ಭೂಸ್ವಾಧೀನ ವಿಚಾರದಲ್ಲಿ ತಾವು ಸಹ 3 ಸಭೆ ನಡೆಸಲಾಗಿತ್ತು. ಆದರೆ ಆಗಲೂ ರೈತರು ಒಪ್ಪದಿದ್ದ ಕಾರಣ ತಾವು ಮುಂದುವರೆಯಲಿಲ್ಲ. ಆದರೆ ಈಗ ಅಧಿಕಾರದಲ್ಲಿರುವವರು ನಡೆಸುತ್ತಿರುವ ದೌಲತ್ತು, ದಬ್ಬಾಳಿಕೆಯನ್ನು ನಾನು ಮಾಡಲಿಲ್ಲ ಎಂದು ಸ್ಥಳೀಯ ಕಾಂಗ್ರೆಸ್ಸಿಗರ ವಿರುದ್ದ ಅಸಮಾಧಾನ ವ್ಯಕ್ತಪಡಿಸಿದರು.

### ಈಗಲ್ಟನ್‌ಗೆ ಕೇಳಿದ ದರವನ್ನೇ ಇವರಿಗೂ ಕೊಡಿ

ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ದ ಹರಿಹಾಯ್ದ ಕುಮಾರಸ್ವಾಮಿ, ಈಗಲ್ಟನ್ ರೆಸಾರ್ಟ್‌ನವರು ಸರ್ಕಾರಿ ಭೂಮಿ ಒತ್ತುವರಿ ಮಾಡಿದ್ದಾರೆ. 70 ಎಕರೆಗೆ 900 ಕೋಟಿ ಹಣ ಕಟ್ಟಿ ಎಂದು ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಕ್ಯಾಬಿನೆಟ್‌ನಲ್ಲಿ ನಿರ್ಧಾರ ತೆಗೆದುಕೊಂಡಿದ್ದರು. ಡಿ.ಕೆ.ಶಿವಕುಮಾರ್ ಆಗ ಪವರ್ ಸಚಿವರಾಗಿದ್ದರು. ಈಗಲ್ಟನ್‌ಗೆ ಕೇಳಿದ್ದು ಎಕರೆಗೆ 13.5ಕೋಟಿ ರೂ. ಆದರೆ ಬೈರಮಂಗಲ, ಕಂಚುಗಾರ ನಹಳ್ಳಿ ಮತ್ತು ಇತರ ಹಳ್ಳಿಗಳ ಭೂಮಿಗೆ ಕೇವಲ 2 ಕೋಟಿ ರೂ ನಿಗಧಿಯಾಗಿದೆ. ಈಗಲ್ಟನ್‌ಗೆ ಕೇಳಿದ ಮೊತ್ತವನ್ನೇ ಇವರಿಗೂ ಪರಿಹಾರದ ರೂಪದಲ್ಲಿ ಕೊಡಿ ಎಂದು ರಾಜ್ಯ ಸರ್ಕಾರಕ್ಕೆ ಹೊಸ ಸವಾಲು ಎಸೆದರು.

### ಈ ಸರ್ಕಾರವನ್ನು ಜನರೆ ಓಡಿಸುತ್ತಾರೆ

ಕುಮಾರಸ್ವಾಮಿಯನ್ನು ಈ ಜಿಲ್ಲೆಯಿಂದ ಓಡಿಸೋದಕ್ಕೆ ಕಾಂಗ್ರೆಸ್‌ನವರು ಕಾಯುತ್ತಿದ್ದಾರೆ. ಅದರೆ ಅದು ಅವರಿಂದ ಸಾಧ್ಯವಿಲ್ಲ. ಪರಿಹಾರ ಕೊಡಲು ಈ ಸರ್ಕಾರದ ಬಳಿ ದುಡ್ಡು ಇಲ್ಲ. ಉಚಿತ ಯೋಜನೆಗಳ ಮುಂದೆ ಉಪಯೋಗಕ್ಕೆ ಬರೋಲ್ಲ. ಈ ಸರ್ಕಾರವನ್ನು ಒದ್ದೋಡಿಸೋಕೆ ತಾಯಂದಿರು ಕಾಯುತ್ತಿದ್ದಾರೆ. 2028ರಲ್ಲಿ ಜನರ ಪರ ಸರ್ಕಾರ ಬರುವ ಎಲ್ಲ ವಿಶ್ವಾಸವಿದೆ ಎಂದರು. ಒಂದಿಂಚು ಭೂಸ್ವಾಧೀನಕ್ಕೂ ತಾವು ಅವಕಾಶ ಕೊಡುವುದಿಲ್ಲ ಎಂದು ಹೋರಾಟಗಾರರಲ್ಲಿ ಮತ್ತೊಮ್ಮೆ ಭರವಸೆ ಮೂಡಿಸಿದರು.

### ಅಧಿಕಾರಿಗಳಿಗೆ ಎಚ್ಚರಿಕೆ

ಅಧಿಕಾರದಲ್ಲಿರುವ ಕಾಂಗ್ರೆಸ್ ನಾಯಕರ ಒತ್ತಡಕ್ಕೆ ಅಧಿಕಾರಿಗಳು ಮಣಿಯಬಾರದು. ಹಾಗೊಮ್ಮೆ ಮಣಿದು ರೈತ ಕುಟುಂಬಗಳಲ್ಲಿ ಸುರಿಯುವ ಹನಿ ಕಣ್ಣೀರಿಗೂ ಶಿಕ್ಷೆ ಅನುಭವಿಸುವ ಕಾಲವನ್ನು ಭಗವಂತ ಕೊಡ್ತಾನೆ ಎಂದು ಎಚ್ಚರಿಸಿದರು. ಜಿಲ್ಲಾಧಿಕಾರಿಗಳು ಸೇರಿದಂತೆ ಯಾವೊಬ್ಬ ಅಧಿಕಾರಿಯೂ ತಮ್ಮ ಫೋನುಗಳನ್ನು ಸ್ವೀಕರಿಸುತ್ತಿಲ್ಲ ಎಂದು ದೂರಿದರು. ಕಾಲ ಹೀಗೆ ಇರೋಲ್ಲ. ಮಂತ್ರಿಗಳು, ಶಾಸಕರು, ಕಾನೂನು ಬಾಹೀರವಾಗಿ ನಿರ್ಧಾರ ತೆಗೆದುಕೊಳ್ಳಬಾರದು ಎಂದರು.
ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿರುದ್ದವೂ ಹರಿಹಾಯ್ದ ಕುಮಾರಸ್ವಾಮಿ, ರೈತರ ಬಗ್ಗೆ ಅವರಿಗೆ ಕಾಳಜಿ, ಗೌರವ ಇದ್ದರೆ ಭೂಮಿಯನ್ನು ಉಳಿಸಿಕೊಡಲಿ ಎಂದರು.

# ಪ್ರತಿಭೆಗೆ ಉತ್ತೇಜನ ನೀಡಲು ಕಲಿಕಾ ಹಬ್ಬ ಪೂರಕ



ಕೆ.ಆರ್.ನಗರ: ಮಕ್ಕಳಲ್ಲಿರುವ ಪ್ರತಿಭೆಗೆ ಉತ್ತೇಜನ ನೀಡಲು ಕಲಿಕಾ ಹಬ್ಬವು ಪೂರಕವಾದ ಕಾರ್ಯಕ್ರಮವಾಗಿದೆ ಎಂದು ಲಕ್ಷ್ಮಿಪುರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಷಡಕ್ಷರಿ ಹೇಳಿದರು.

ತಾಲೂಕಿನ ಬಳ್ಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಸಾಲಿಗ್ರಾಮ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ವಿದ್ಯಾರ್ಥಿಗಳು ಚಿಕ್ಕವಯಸ್ಸಿನಲ್ಲಿಯೇ ತಮ್ಮಲ್ಲಿರುವ ಸುಪ್ತ ಪ್ರತಿಭೆಯನ್ನು ಅನಾವರಣಗೊಳಿಸಲು ಇತ್ತೀಚಿನ ದಿನಗಳಲ್ಲಿ ಹಲವು ಕಾರ್ಯ ಕ್ರಮಗಳನ್ನು ಶಿಕ್ಷಣ ಇಲಾಖೆ ಅನುಷ್ಠಾನ ಮಾಡುತ್ತಿದೆ. ಇಂತಹ ವೇದಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಹೊರ ಹಾಕಬೇಕು ಎಂದರು.

ಶಾಲಾ ಹಂತದಲ್ಲಿ ನಡೆಯುವ ವಿವಿಧ ಕ್ರೀಡಾ, ಸಾಂಸ್ಕೃತಿಕ ಸೇರಿದಂತೆ ಇತರ ಸ್ಪರ್ಧೆಗಳಲ್ಲಿ ಯಾವುದೇ ಅಂಜಿಕೆಯಿಲ್ಲದೆ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕು. ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಮುಂದಿನ ದಿನಗಳಲ್ಲಿ ಉತ್ತಮವಾಗಿ ಅಭ್ಯಾಸ ಮಾಡಿ ಉನ್ನತ ಸ್ಥಾನಮಾನಗಳನ್ನು ಗಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶಿಕ್ಷಕರುಗಳಿಗೆ, ಹೆತ್ತವರಿಗೆ, ಕಲಿತ ಶಾಲೆಗೆ ಹಾಗೂ ಹುಟ್ಟಿದ ಊರಿಗೆ ಕೀರ್ತಿಯನ್ನು ತರುವಂತಹ ಕೆಲಸ ಮಾಡುವ ಮೂಲಕ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಮಕ್ಕಳು ರೂಪುಗೊಳ್ಳಬೇಕು ಎಂದರು. ಶಿಕ್ಷಕರುಗಳು ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಕಲಿಸುವುದರ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸಬೇಕು ಎಂದರು. ವಿವಿಧ ಶಾಲೆಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು ವಿನೂತನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ವಿವಿಧ ಚಟುವಟಿಕೆಗಳನ್ನು ಮಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು. ಕಲಿಕಾ ಹಬ್ಬದ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ಬಹುಮಾನಗಳನ್ನು ವಿತರಣೆ ಮಾಡಿ ಗೌರವಿಸಲಾಯಿತು.
ಕಾರ್ಯಕ್ರಮದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷ ತುಳಸಿರಾಮೇಗೌಡ, ಲಕ್ಷ್ಮಿಪುರ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮಹದೇವ್, ಸಿಆರ್‌ಪಿ ಮಹೇಶ್, ಮುಖ್ಯ ಶಿಕ್ಷಕರಾದ ಸಿ.ಆರ್.ಚಂದ್ರಶೇಖರ, ಅಸಂತಮೇರಿ, ಲೋಹಿತಾಶ್ವ, ಶ್ರೀನಿವಾಸ್, ಎಂ.ಜಿ.ಸ್ವಾಮಿ, ಬೇಲೂರಯ್ಯ, ಸತೀಶ್, ಶಿಕ್ಷಕರಾದ ಎಂ.ಸಿ.ಹರೀಶ್, ಭಾಗ್ಯಲಕ್ಷ್ಮಿ, ಎಸ್.ರೇಖಾ, ಬಿ.ಎಸ್.ಲೋಕೇಶ್ವರಿ, ವಿಜಯ ಕುಮಾರ್, ರಾಘವೇಂದ್ರ, ಅಮಿತ್ ಕುಮಾರ್, ಮಹೇಶ್, ಕುಮಾರ್, ಬಿ.ಜಿ.ರವಿ, ಎಸ್ ಡಿ ಎಂ ಸಿ ಸಮಿತಿಯವರು, ಮುಖಂಡರುಗಳು, ವಿದ್ಯಾರ್ಥಿಗಳು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಸೂರ್ಯನಾರಾಯಣನಿಗೆ ವಿಶೇಷ ಪೂಜೆ

ಮೈಸೂರು: ರಾಜೀವನಗರ 2 ನೇ ಹಂತದ ದೇವನೂರ ಬಡಾವಣೆಯ ಶ್ರೀ ಸೂರ್ಯನಾರಾಯಣಸ್ವಾಮಿ ಬಳಗದಿಂದ ವಿಶ್ವಾವಸು ನಾಮ ಸಂವತ್ಸರದ ಉತ್ತರಾಯಣ ಮಾಘ ಶುಕ್ಲ ಪಕ್ಷ ಸಪ್ತಮಿ ತಿಥಿ ಜ. 25ರ ಪ್ರಾತ ಕಾಲ 6.30 ರಿಂದ 11.30 ವರೆಗೆ ನಡೆಯುವ ಶುಭ ಉತ್ತರಾಯಣ ಪುಣ್ಯಕಾಲದಲ್ಲಿ ರಥಸಪ್ತಮಿ ವಿಶೇಷ ಪೂಜೆ ನೇರವೇರಿತು.



ಶನಿವಾರ ಸಂ.630 ರಿಂದ ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಯಾಗ ಶಾಲಾ ಪ್ರವೇಶ, ಕಳಶ ಸ್ಥಾಪನೆ, ವಾಸ್ತುಹೋಮ, ರಕ್ಕೋಘ್ನ ಹೋಮ, ಸುದರ್ಶನ ಹೋಮ, ಪೂರ್ಣಾಹುತಿ ಮತ್ತು ಪ್ರಕಾರ ಉತ್ಸಾಹ, 9ಕ್ಕೆ ಮಹಾ ಮಂಗಳಾರತಿ ನಂತರ ತೀರ್ಥ ಪ್ರಸಾದ ವಿನಿಯೋಗ ನೇರವೇರಿತು. ಜ.25ರ ಭಾನುವಾರ ಬೆಳಿಗ್ಗೆ 6–ಕ್ಕೆ ಶ್ರೀ ಸೂರ್ಯನಾರಾಯಣಸ್ವಾಮಿಗೆ ಫಲಪಂಚಾಮೃತಾಅಭಿಷೇಕ, ರಥೋತ್ಸವಕ್ಕೆ ಚಾಲನೆ, ಕರ್ಮಣ ಪುಣ್ಯಾಹ, ಕಲಾವೃದ್ಧಿ ಹೋಮ, ಗಣಪತಿ, ನವಗ್ರಹ, ಮೃತ್ಯುಂಜಯ, ಶನಿಶಾಂತಿ, ಸೂರ್ಯ ಗಾಯತ್ರಿ ಹೋಮ, ಸೂರ್ಯ ಶಾಂತಿ, ಆಂಜನೇಯ, ಸುಬ್ರಮಣ್ಯ ಹೋಮ, ನಂತರ ಮಹಾ ಮಂಗಳಾರತಿ, ಶ್ರೀ ಮುಡಿ ತೀರ್ಥ ಪ್ರಸಾದ ವಿನಿಯೋಗ ನಡೆಯಿತು. ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಕಾರ್ಯಕ್ರಮ ನೇರವೇರಿತು. ಬೆಳಿಗ್ಗೆ 10.5ಕ್ಕೆ ರಥೋತ್ಸವ ಹೊರಟಿತು. ಶಾಸಕ ಶ್ರೀವತ್ಸ ಸೇರಿ ಸಾವಿರಾರು ಮಂದಿ ಭಕ್ತರು ಆಗಮಿಸಿ ಸೂರ್ಯನಾರಾಯಣನ ದರ್ಶನ ಪಡೆದರು. ಈ ಕುರಿತು ದೇವಾಲಯದ ಪ್ರಧಾನ ಅರ್ಚಕ ಕಿರಣ್ ಭಟ್ ಮಾತನಾಡಿ ದೇಶದಲ್ಲಿ ಒರಿಸ್ಸಾದಲ್ಲಿ ಬಿಟ್ಟರೆ ಮೈಸೂರಿನಲ್ಲೇ ಎರಡನೇ ಸೂರ್ಯನಾರಾಯಣ ದೇವಾಲಯವಿದೆ. 10ಅಡಿ ಎತ್ತರದ ದೇವಾಲಯದ ಇದಾಗಿದ್ದು, ರಥ ಸಪ್ತಮಿ ಅಂಗವಾಗಿ ಅನೇಕಭಕ್ತರು ಆಗಮಿಸಿ ದರ್ಶನ, ಪ್ರಸಾದ ವಿನಿಯೋಗ ಮಾಡಿಕೊಂಡಿದ್ದಾರೆಂದು ತಿಳಿಸಿದರು.

### ದಕ್ಷ ಪೋಲಿಸ್ ಅಧಿಕಾರಿ ಪುಟ್ಟಮಾದಯ್ಯಗೆ ಸಂದ ಗೌರವ

ಶ್ರೀರಂಗಪಟ್ಟಣ:ಭಾರತದ 77 ನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ದಕ್ಷ , ಹಿರಿಯ ಐಪಿಎಸ್ ಅಧಿಕಾರಿ





ಎಂ. ಪುಟ್ಟಮಾದಪ್ಪ ಅವರಿಗೆ ರಾಷ್ಟ್ರಪತಿ ಪದಕದ ಗೌರವ ಸಂದಿರುವುದು ಸಂತಸದ ಸಂಗತಿ ಎಂದು ಮಂಡ್ಯ ಬಿಜೆಪಿ ಜಿಲ್ಲಾ ಮುಖಂಡ ಎಸ್ ಜೆ ಆನಂದ ಹೇಳಿದ್ದಾರೆ. ಬಡ ಜನರ ಪರವಾಗಿ ಸದಾ ಚಿಂತನೆ ಮಾಡಿ , ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಿ ನ್ಯಾಯಪರವಾಗಿ ನಿರ್ಧಾರ ಕೈಗೊಳ್ಳುವ ತೀರಾ ಅಪರೂಪದ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಪುಟ್ಟಮಾದಯ್ಯ ನವರಿಗೆ

ರಾಷ್ಟ್ರಪತಿಗಳ ಪದಕ ಮತ್ತೊಂದು ಗರಿ ಮೂಡಿಸಿದೆ ಎಂದು ಆನಂದ್ ಹೇಳಿದ್ದಾರೆ

## ಸೂರ್ಯ ನಮಸ್ಕಾರದಿಂದ ಉತ್ತಮ ಆರೋಗ್ಯ : ಕಾಗಲವಾಡಿ ಚಂದ್ರು

# ಬೃಹತ್ ಸಾಮೂಹಿಕ 108 ಸೂರ್ಯ ನಮಸ್ಕಾರ

ಚಾಮರಾಜನಗರ, ರಥಸಪ್ತಮಿ ಅಂಗವಾಗಿ ನಗರದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿ, ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ, ಮತ್ತು ಸಂಜೀವಿನಿ ಟ್ರಸ್ಟ್ ಅವರ ಸಂಯುಕ್ತಾಶ್ರಯದಲ್ಲಿ ಬೃಹತ್ ಸಾಮೂಹಿಕ 108 ಸೂರ್ಯ ನಮಸ್ಕಾರ ಭಾನುವಾರ ಮುಂಜಾನೆ ನಡೆಯಿತು.



ನಗರದ ರೋಟರಿ ಭವನದ ಆವರಣದಲ್ಲಿ ನಡೆದ ನಡೆದ ಕಾರ್ಯಕ್ರಮದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, ಸೂರ್ಯ ನಮಸ್ಕಾರವು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಉತ್ತಮ ಅಭ್ಯಾಸವಾಗಿದೆ ಎಂದರು.

ಈ ಬಾರಿಯ ರಥ ಸಪ್ತಮಿಯು ಇದೇ ಜನವರಿ 25 ರಂದು ಭಾನುವಾರ ಆಚರಿಸಲಾಗುತ್ತದೆ. ಈ ದಿನವು ಸೂರ್ಯನಿಗೆ ಅತ್ಯಂತ ಪ್ರಿಯವಾಗಿದ್ದು, ಸ್ವಾಮಿಯನ್ನು ಆರಾಧಿಸುವುದರಿಂದ ಸಮೃದ್ಧಿ, ಸಂತೋಷ, ಉದ್ಯೋಗದಲ್ಲಿ ಏಳಿಗೆ ಸೇರಿದಂತೆ ಇನ್ನು ಅನೇಕ ಅಶೀರ್ವಾದವನ್ನು ಪಡೆಯಬಹುದು. ಹಿಂದೂ ಪಂಚಾಂಗದ ಪ್ರಕಾರ, ಈ ಬಾರಿ ಹಬ್ಬವು ಸೂರ್ಯನಿಗೆ ಪ್ರಿಯವಾದ ಭಾನುವಾರವೇ ಬಂದಿರುವುದು ವಿಶೇಷವಾಗಿದೆ ಎಂದರು. 108 ಸೂರ್ಯ ನಮಸ್ಕಾರವು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಮತೋಲನವನ್ನು ಸಾಧಿಸುವ ಶಕ್ತಿಯುತ ಯೋಗಾಭ್ಯಾಸವಾಗಿದೆ. ಇದು ದೇಹದ ಶಕ್ತಿ ಮತ್ತು ರಕ್ತಪರಿಚಲನೆಯನ್ನು ಹೆಚ್ಚಿಸಿ, ತೂಕ ಇಳಿಕೆಗೆ ಸಹಾಯ ಮಾಡುತ್ತದೆ. ಮಾನಸಿಕವಾಗಿ, ಇದು ಒತ್ತಡ ಕಡಿಮೆ ಮಾಡಿ, ಏಕಾಗ್ರತೆ ಮತ್ತು ಶಿಸ್ತನ್ನು ವೃದ್ಧಿಸುತ್ತದೆ. ಹಿಂದೂ ಧರ್ಮದಲ್ಲಿ 108 ಪವಿತ್ರ ಸಂಖ್ಯೆಯಾಗಿದ್ದು, ಇದು ಸೂರ್ಯನಿಗೆ ಕೃತಜ್ಞತೆ ಸಲ್ಲಿಸುವ ಕ್ರಿಯೆಯಾಗಿದೆ ಎಂದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿ ಅಧ್ಯಕ್ಷ ಡಿ.ಪಿ.ಪ್ರಕಾಶ್ ಮಾತನಾಡಿ ಸೂರ್ಯ ನಮಸ್ಕಾರದಿಂದ ಆರೋಗ್ಯಕ್ಕೆ ಸಾಕಷ್ಟು ಪ್ರಯೋಜನವಿದೆ. ನಮ್ಮ ಸಮಿತಿ ವತಿಯಿಂದ ರಥ ಸಪ್ತಮಿ ಅಂಗವಾಗಿ ಈ ಬಾರಿ 108 ಸೂರ್ಯ ನಮಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ರಥಸಪ್ತಮಿಯು ವಸಂತಕಾಲಕ್ಕೆ ಋತುವಿನ ಬದಲಾವಣೆ ಮತ್ತು ಕೊಯ್ಲು ಋತುವಿನ ಆರಂಭದ ಸಂಕೇತವಾಗಿದೆ. ರಥ ಸಪ್ತಮಿಯನ್ನು ಸೂರ್ಯ ಜಯಂತಿ ಎಂದೂ ಕರೆಯುತ್ತಾರೆ. 108 ಸೂರ್ಯ ನಮಸ್ಕಾರಗಳ ಅಭ್ಯಾಸದೊಂದಿಗೆ ಆಚರಿಸಲಾಗುತ್ತದೆ.

ಕಾರ್ಯಕ್ರಮದಲ್ಲಿ ಸಂಜೀವಿನಿ ಟ್ರಸ್ಟ್ ಅಧ್ಯಕ್ಷ ಸತೀಶ್, ಹಸಿರುಪಡೆ ಅಕ್ಷತಾಜೈನ್, ರೋಟರಿ ಸಿಲ್ಕ್ ಸಿಟಿ ಮಾಜಿ ಅಧ್ಯಕ್ಷ ಮಾಣಿಕ್ ಚಂದ್ ಸಿರವಿ, ಶ್ರೀಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿ ಪ್ರಧಾನ ಸಂಚಾಲಕ ಯೋಗಪ್ರಕಾಶ್, ಉಪಾಧ್ಯಕ್ಷ ಎನ್. ದೊರೆಸ್ವಾಮಿ, ಸಂಚಾಲಕ ಶ್ರೀನಿವಾಸಮೂರ್ತಿ, ಗೌರವ ಅಧ್ಯಕ್ಷ ಶ್ರೀನಿವಾಸಮೂರ್ತಿ , ರಾಜಶೇಖರಮೂರ್ತಿ, ಭಜನೆ ಮಹೇಶ್, ಮಣಿಕಂಠ, ವಕೀಲ ಸಂತೋಷ ಕುಮಾರ್, ರವಿ,ರಾಜು, ಮಹಾದೇವಸ್ವಾಮಿ, ಎಎಸ್ಐ ಕುಮಾರ್, ಅಶ್ವಿನಿ, ನಾಗರತ್ನ, ಪ್ರಭು,

ಇತರರು ಹಾಜರಿದ್ದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,